ಕಾರ್ಕಳದ ಕವಿ ಚದುರ ಚಂದ್ರಮನ ಗೊಮ್ಮಟೇಶ್ವರ ಚರಿತೆ ಕಾವ್ಯದಲ್ಲಿ ಜೈನ ಸಂಸ್ಕೃತಿ - ಒಂದು ವಿವೇಚನೆ

ಕನ್ನಡ ಸಾಹಿತ್ಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ
ಅರ್ಪಿಸುವ ನಿಬಂಧ

ನಿಬಂಧಕಾರರು
ಅಕ್ಷತ ಎಂ.ಜಿ
ಸದಾಶಿವನಗರ
1ನೇ ಅಡ್ಡರಸ್ತೆ, ಮನೆ ನಂ. 2-7/11
ಸುರತ್ಕಲ್, ಮಂಗಳೂರು - 14

ಮಾರ್ಗದರ್ಶಕರು
ಡಾ. ಎಸ್.ಡಿ.ಶೆಟ್ಟಿ
ನಿವೃತ್ತ ಪ್ರಾಧ್ಯಾಪಕರು
ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಡಾ. ಹಾ.ಮಾ.ನ ಸಂಶೋಧನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ದ.ಕ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಹೊಸಪೇಟೆ, ಬಳ್ಳಾರಿ ಜಿಲ್ಲೆ

ಕಾರ್ಕಳದ ಕವಿ ಚದುರ ಚಂದ್ರಮನ ಗೊಮ್ಮಟೇಶ್ವರ ಚರಿತೆ ಕಾವ್ಯದಲ್ಲಿ ಜೈನ ಸಂಸ್ಕೃತಿ – ಒಂದು ವಿವೇಚನೆ

ಕನ್ನಡ ಸಾಹಿತ್ಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ
ಅರ್ಪಿಸುವ ನಿಬಂಧ

ನಿಬಂಧಕಾರರು
ಅಕ್ಷತ ಎಂ.ಜಿ
ಸದಾಶಿವನಗರ
1ನೇ ಅಡ್ಡರಸ್ತೆ, ಮನೆ ನಂ. 2–7/11
ಸುರತ್ಕಲ್, ಮಂಗಳೂರು – 14

ಮಾರ್ಗದರ್ಶಕರು
ಡಾ. ಎಸ್.ಡಿ.ಶೆಟ್ಟಿ
ನಿವೃತ್ತ ಪ್ರಾಧ್ಯಾಪಕರು
ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಡಾ. ಹಾ.ಮಾ.ನ ಸಂಶೋಧನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ದ.ಕ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಹೊಸಪೇಟೆ, ಬಳ್ಳಾರಿ ಜಿಲ್ಲೆ

ದೃಢೀಕರಣ

ಕಾರ್ಕಳದ ಕವಿ ಚದುರ ಚಂದ್ರಮನ ಗೊಮ್ಮಟೇಶ್ವರ ಚರಿತೆ ಕಾವ್ಯದಲ್ಲಿ ಜೈನ ಸಂಸ್ಕೃತಿ - ಒಂದು ವಿವೇಚನೆ

ಇದು ನಾನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದಕ್ಕೆ ಸಂಯೋಜಿತವಾದ ಉಜಿರೆ ಡಾ. ಹಾ.ಮಾ.ನ ಸಂಶೋಧನ ಕೇಂದ್ರದಲ್ಲಿ ಡಾ. ಎಸ್.ಡಿ. ಶೆಟ್ಟಿಯವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ.

ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಯಾವುದೇ ಉದ್ದೇಶಕ್ಕೆ ಬಳಕೆಯಾಗಿಲ್ಲ.

ಉಜಿರೆ
೨೫/೯/೦೯

ಅಕ್ಷತ ಎಂ.ಬಿ

ದೃಢೀಕರಣ

ಕಾರ್ಕಳದ ಕವಿ ಚದುರ ಚಂದ್ರಮನ ಗೊಮ್ಮಟೇಶ್ವರ ಚರಿತೆ ಕಾವ್ಯದಲ್ಲಿ ಜೈನ ಸಂಸ್ಕೃತಿ – ಒಂದು ವಿವೇಚನೆ

ಇದು ನಾನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದಕ್ಕೆ ಸಂಯೋಜಿತವಾದ ಉಜಿರೆ ಡಾ. ಹಾ.ಮಾ.ನ ಸಂಶೋಧನ ಕೇಂದ್ರದಲ್ಲಿ ಡಾ. ಎಸ್.ಡಿ. ಶೆಟ್ಟಿಯವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ.

ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಯಾವುದೇ ಉದ್ದೇಶಕ್ಕೆ ಬಳಕೆಯಾಗಿಲ್ಲ.

ಉಜಿರೆ
೨೫/೧/೦೧

ಅಕ್ಷತ ಎಂ.ಜಿ

[illegible]

[illegible] ಚದುರ ಚಂದ್ರಾಮ [illegible] ಕನ್ನಡ ಜೈನ ಸಂಸ್ಕೃತಿ – ಒಂದು ಅಧ್ಯಯನ. [illegible] ಅಕ್ಷತ ಎಂ.ಜಿ ಇವರು [illegible] ನಡೆಸಿದ ಅಧ್ಯಯನ ಮತ್ತು [illegible] ೨೦೧೩ [illegible]ತವಾದ [illegible] ಸಂಶೋಧನ ಕೇಂದ್ರದಲ್ಲಿ ಸಿದ್ಧ[illegible].

ಈ [illegible] ಇನ್ನಿತರ ಯಾವುದೇ [illegible]ಗಳಿಗೆ ಬಳಕೆಯಾಗಿಲ್ಲ ಮತ್ತು ಪ್ರಕಟವಾಗಿಲ್ಲ ಎಂದು ಈ [illegible]ಕರಿಸುತ್ತೇನೆ.

ಸ್ಥಳ

([illegible])

<u>ಪ್ರಮಾಣ ಪತ್ರ</u>

ಕಾರ್ಕಳದ ಕವಿ ಚದುರ ಚಂದ್ರಮ ಗೊಮ್ಮಟೇಶ್ವರ ಚರಿತ ಕಾವ್ಯದ ಜೈನ ಸಂಸ್ಕೃತಿ – ಒಂದು ವಿವೇಚನೆ. ಇದು ಅಕ್ಷತ ಎಂ.ಜಿ ಇವರು ಎಂ.ಫಿಲ್ ಪದವಿಗಾಗಿ ನಡೆಸಿದ ಅಧ್ಯಯನ ಮತ್ತು ವಿಶ್ಲೇಷಣೆಯಾಧಾರಿತ ನಿಬಂಧವಾಗಿದ್ದು ಇದನ್ನು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಇದಕ್ಕೆ ಸಂಯೋಜಿತವಾದ ಉಜಿರೆಯ ಡಾ. ಹಾ.ಮಾ.ನ ಸಂಶೋಧನ ಕೇಂದ್ರದಲ್ಲಿ ಸಿದ್ಧಪಡಿಸಲಾಗಿದೆ.

ಈ ನಿಬಂಧದ ಯಾವುದೇ ಭಾಗವು ಇನ್ನಿತರ ಯಾವುದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ ಮತ್ತು ಪ್ರಕಟವಾಗಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಉಜಿರೆ

ಮಾರ್ಗದರ್ಶಕರು

(ಡಾ.ಎಸ್.ಡಿ.ಶೆಟ್ಟಿ)

ವಿಷಯಾನುಕ್ರಮಣಿಕೆ

[illegible] ಸಂಸ್ಕೃತಿ

– ಒಂದು ವಿವೇಚನೆ

ವಿಷಯಾನುಕ್ರಮಣಿಕೆ

ಕಾರ್ಕಳದ ಕವಿ ಚದುರಚಂದ್ರಮನ ಗೋಮ್ಮಟೇಶ್ವರ ಚರಿತೆ ಕಾವ್ಯದಲ್ಲಿ ಜೈನ ಸಂಸ್ಕೃತಿ – ಒಂದು ವಿವೇಚನೆ

****

ಅಧ್ಯಾಯ ೧ – ಅಧ್ಯಯನದ ಉದ್ದೇಶ ವ್ಯಾಪ್ತಿ

೧. ೧. ಪೀಠಿಕೆ

ಕ್ರಿ.ಪೂ ಕಾಲದಲ್ಲಿ ಉತ್ತರ ಭಾರತದಿಂದ ದಕ್ಷಿಣ ಭಾರತದ ಕರ್ನಾಟಕಕ್ಕೆ ವಲಸೆ ಬಂದ ಜೈನಧರ್ಮವು ಇಲ್ಲಿಯ ನಾಡು, ನುಡಿ ಸಂಸ್ಕೃತಿಗೆನೀಡಿದ ಕೊಡುಗೆ ಅಪಾರವಾದುದು. “ಇದು ಉತ್ತರ ಭಾರತದಲ್ಲಿ ಹುಟ್ಟಿ ಬೆಳೆದ ಧರ್ಮವಾದರೂ ಕರ್ನಾಟಕದಲ್ಲಿ ಪ್ರಚುರಗೊಂಡು ಬಳಿಕ ಇಲ್ಲಿಯ ಪರಿಸರದ ಸಾರವನ್ನು ಹೀರಿ ಹುಲುಸಾಗಿ ಬೆಳೆಯಿತು. ಇಲ್ಲಿಯ ಶಾಸ್ತ್ರ, ಕಲೆ, ಭಾಷೆ, ವಿದ್ಯಾಪ್ರಸಾರ, ಜೀವನ ವಿಧಾನ ಮತ್ತು ನೈತಿಕ ಮೌಲ್ಯವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತ ಬಂದಿತು. ಜೈನ ತೀರ್ಥಂಕರರೆಲ್ಲ ಉತ್ತರ ಭಾರತದಲ್ಲಿ ಜನಿಸಿ ಜೈನ ಧರ್ಮವನ್ನು ಪ್ರಚಾರ ಮಾಡಿದರೂ, ಜೈನ ಧರ್ಮಕ್ಕೆ ಸಂಬಂಧಿಸಿದ ಉತ್ತಮ ಗ್ರಂಥಗಳನ್ನು ನೀಡಿದ ಆಚಾರ್ಯರುಗಳಲ್ಲಿ ಹೆಚ್ಚಿನವರು ಕರ್ನಾಟಕದವರು. ಕುಂದಕುಂದಾಚಾರ್ಯ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಅಕಲಂಕ, ಜೀನಸೇನ, ಗುಣಭದ್ರ ಮುಂತಾದವರು ಜೈನಧರ್ಮದ ಇತಿಹಾಸದಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಈ ದೃಷ್ಟಿಯಿಂದ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವೆಂದರೆ ಜೈನಧರ್ಮದ ಸಾಂಸ್ಕೃತಿಕ ಇತಿಹಾಸವೇ ಆಗಿದೆ”[1] ಎಂಬ ವಿದ್ವಾಂಸರ ಅಭಿಪ್ರಾಯವು ಅತಿಶಯೋಕ್ತಿಯೆನಿಸುವುದಿಲ್ಲ.

ಕರ್ನಾಟಕದಲ್ಲಿ ಈ ಧರ್ಮವು ಕ್ರಿ.ಪೂ ಕಾಲದಲ್ಲಿ ಹರಡಿರಬೇಕೆಂಬುದಕ್ಕೆ ಸಾಕಷ್ಟು ಆಧಾರಗಳು ನಮಗೆ ದೊರೆಯುತ್ತವೆ. ಆದರೆ ತುಳುನಾಡಿಗೆ ಈ ಧರ್ಮವು ಯಾವಾಗ ಪ್ರವೇಶ ಪಡೆಯಿತು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇದರ ಬಗ್ಗೆ ವಿಶೇಷವಾಗಿ ಅಧ್ಯಯನ ನಡೆಸಿದ ಡಾ. ಸಾಲೆತ್ತೂರು, ಡಾ. ಶ್ರೀಪಾದ ಶರ್ಮ, ಡಾ. ಸೂರ್ಯನಾಥ ಕಾಮತ್, ಡಾ. ಗುರುರಾಜ ಭಟ್ಟ, ಡಾ. ಕೆ.ವಿ.ರಮೇಶ ಮುಂತಾದ ವಿದ್ವಾಂಸರು ಸರಿಸುಮಾರಾಗಿ ಕ್ರಿ.ಶ. ೮ನೇ ಶತಮಾನದಿಂದ ೧೦ನೇ ಶತಮಾನದ ಬಳಿಕ ಜೈನ ಧರ್ಮವು ಇಲ್ಲಿ ಬಂದು ನೆಲೆಸಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಗೋವಿಂದ ಪೈಗಳು ಮಾತ್ರ ‘ಭದ್ರಬಾಹು ಭಟ್ಟಾರಕರ ಜೊತೆ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಆಗಮಿಸಿದ ಸಂಪ್ರತಿ ಚಂದ್ರಗುಪ್ತನ ಕಾಲದಲ್ಲಿ ಅಂದರೆ ಕ್ರಿ.ಪೂ. ೩೨೦ ರಲ್ಲಿ ಶ್ರವಣಬೆಳಗೊಳದಲ್ಲಿ ನೆಲೆನಿಂತ ಜೈನಧರ್ಮವು ಅಲ್ಲಿಂದ ೧೦೦-೨೦೦ ವರ್ಷಗಳೊಳಗೆ ಹೆಚ್ಚೆಂದರೆ ಕ್ರಿ.ಶ ೨ನೇಯ ಶತಮಾನದೊಳಗೆ ತುಳುನಾಡಿಗೆ ಬಂದು ನೆಲೆಸಿರಬೇಕೆಂದು”[2] ಅಭಿಪ್ರಾಯ ಪಟ್ಟಿದ್ದಾರೆ.

---

೧. ಡಾ. ಎಸ್.ಡಿ.ಶೆಟ್ಟಿ – ತುಳುನಾಡ ಜೈನಧರ್ಮ – ಒಂದು ಸಾಂಸ್ಕೃತಿ ಅಧ್ಯಯನ. ಪುಟ. ೨೭
೨. ನಾರಾಯಣ ಪಿ.ಕೆ ಮತ್ತು ಕಯ್ಯಾರ ಕಿಂಞಣ್ಣ ರೈ (ಸಂ), ತೆಂಕನಾಡು, ೧೯೭೪, ಪುಟ ೪೧

ಈ ಅಭಿಪ್ರಾಯವನ್ನು ಸಮರ್ಥಿಸುತ್ತಾ ಇತ್ತೀಚೆಗೆ ಡಾ. ಎಸ್.ಡಿ ಶೆಟ್ಟಿಯವರು ತಮ್ಮ "ತುಳುನಾಡಿನ ಜೈನಧರ್ಮ" ಗ್ರಂಥದಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳನ್ನು ನೀಡಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.[3]

ತುಳುನಾಡಿನಲ್ಲಿ ದೀರ್ಘಕಾಲ ಆಡಳಿತ ನಡೆಸಿದ (ಕ್ರಿ.ಶ.ಸು ೨ ರಿಂದ ೧೨ ನೇ ಶತಮಾನ) ಆಳುಪರು ಜೈನಧರ್ಮಕ್ಕೆ ಉದಾರಾಶ್ರಯ ನೀಡಿ ಪ್ರೋತ್ಸಾಹಿಸಿದ್ದರು. ಇವರು ಜೈನಧರ್ಮೀಯರಾಗಿದ್ದರೂ ಘಟ್ಟದ ಮೇಲಿನ ಪಟ್ಟಿಪೊಂಬುಚ್ಚದಲ್ಲಿ ಆಳ್ವಿಕೆ ನಡೆಸಿದ್ದ ಜೈನ ಸಾಂತರರ ಜೊತೆಗೆ ನಿರಂತರ ಸ್ನೇಹದಿಂದ ಇದ್ದರಲ್ಲದೆ ಅವರೊಡನೆ ವೈವಾಹಿಕ ಸಂಬಂಧವನ್ನೂ ಬೆಳೆಸಿದ್ದರು. ಇದರಿಂದ ಶೈವ – ಜೈನ ಮತವು ಪರಸ್ಪರ ಐಕ್ಯಗೊಂಡು ತುಳುನಾಡಿನಲ್ಲಿ ವಿಶಿಷ್ಟವಾಗಿ ಜೈನಧರ್ಮವು ಬೆಳೆದು ಜನಸಾಮಾನ್ಯರ ಮೇಲೆ ಪ್ರಭಾವ ಬೀರಲು ಕಾರಣವಾಯಿತು.

ಕ್ರಿ.ಶ ೧೦ನೇ ಶತಮಾನದ ಅನಂತರ ತುಳುನಾಡಿನಲ್ಲಿ ಅಸ್ತಿತ್ವಕ್ಕೆ ಬಂದ ಕಾರ್ಕಳದ ಭೈರರಸರು (ಕ್ರಿ.ಶ. ೧೩೯೭– ಕ್ರಿ.ಶ. ೧೭೬೩), ಸುರಾಲಿನ ತೋಳಹರು (೧೧ ಶತಮಾನ – ಕ್ರಿ. ೧೬೦೮), ಪುತ್ತಿಗೆಯ ಚೌಟರು (ಕ್ರಿ.ಶ. ೧೧೬೦ – ಕ್ರಿ.ಶ ೧೮೦೫), ಬಂಗವಾಡಿಯ ಬಂಗರು (ಕ್ರಿ.ಶ. ೧೧೧೫ – ಕ್ರಿ.ಶ. ೧೭೦೯) ವೇಣೂರಿನ ಅಜಿಲರು (ಕ್ರಿ.ಶ.೧೪೪೯ – ಕ್ರಿ.ಶ ೧೬೭೯) ಮುಂತಾದ ತುಂಡರಸರುಗಳು ಹಾಗೂ ಮಾಗಣೆಬೀಡುಗುತ್ತು ಮಟ್ಟದ ಅಧಿಕಾರಿಗಳು, ಜೈನ ತೀರ್ಥಂಕರನ ಆರಾಧನೆಯ ಜೊತೆ ಜೊತೆಗೆ ಮಹಲಿಂಗೇಶ್ವರನನ್ನೂ (ಶಿವ) ಸಮಾನವಾಗಿ ಆರಾಧಿಸಿಕೊಂಡು ಬರುತ್ತಿರುವುದನ್ನು ಕಾಣುತ್ತೇವೆ. ಕ್ರಿ.ಶ. ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಬಳಿಕ ಸ್ಥಳೀಯ ತುಂಡರಸರೆಲ್ಲರೂ ತಾವಾಗಿಯೇ ವಿಶಾಲ ಸಾಮ್ರಾಜ್ಯವನ್ನು ಸೇರಿಕೊಂಡು ಅವರ ಸಾಮಂತರಾದರು. ಅನಂತರ ಮುಂದೆ ಸುಮಾರು ೨೫೦ ವರ್ಷಗಳಷ್ಟು ದೀರ್ಘಕಾಲದ ವರೆಗೆ ಸ್ಥಳೀಯ ಜೈನ, ಶೈವ, ವೈಷ್ಣವ ಮುಂತಾದ ಎಲ್ಲಾ ಧರ್ಮಗಳು ಪರಸ್ಪರ ಯಾವ ಘರ್ಷಣೆಗೂ ಒಳಗಾಗದೆ ಅನ್ಯೋನ್ಯತೆಯಿಂದ ಬದುಕಿ ಬಾಳಿದವು. ತುಳುನಾಡಿನ ಜೈನ ಅರಸರ ಪ್ರಭುತ್ವದಲ್ಲಿ 'ಸರ್ವಧರ್ಮ ಸಮನ್ವಯ' ದೃಷ್ಟಿ ನೆಲೆಗೊಂಡು ಜೈನಧರ್ಮವು ವಿಶೇಷವಾಗಿ ಪ್ರವರ್ಧಮಾನಕ್ಕೆ ಬಂದು ತನ್ನ ಸುವರ್ಣಯುಗದ ಶಿಖರಕ್ಕೆ ತಲುಪಲು ಸಾಧ್ಯವಾಯಿತು.

ರಾಜ್ಯದಲ್ಲಿ ಸುಖ, ನೆಮ್ಮದಿ, ಸುಭಿಕ್ಷೆಗಳು ನೆಲೆಗೊಂಡಾಗ ಸಂಸ್ಕೃತಿ ತಾನಾಗಿಯೇ ಗರಿಬಿಚ್ಚಿ ನಾಟ್ಯವಾಡುತ್ತದೆ. ಜನರು ಸಂತೃಪ್ತಿಯ ಬದುಕನ್ನು ನಡೆಸಿದಾಗ ಕಲೆ, ಸಾಹಿತ್ಯ, ಶಿಲ್ಪಗಳು ಚೇತನಗೊಂಡು ಅರಳುತ್ತವೆ. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ವಿಜಯನಗರ ಸಾಮ್ರಾಟರ ಕಾಲದಲ್ಲಿ ಜೈನಧರ್ಮದ ಸಾಹಿತ್ಯ, ಶಿಲ್ಪಕಲೆಗಳು ಬಹುಮುಖಿಯಾಗಿ ಬೆಳೆದು ಸಮೃದ್ಧಗೊಂಡವು.

---

೩. ಡಾ. ಎಸ್.ಡಿ.ಶೆಟ್ಟಿ – ಪೂರ್ವೋಕ್ತ ಪುಟ. ೫೨

ಸ್ಥಳೀಯ ಸಾಮಂತರ ಆಶ್ರಯದಲ್ಲಿ ಕಲ್ಯಾಣಕೀರ್ತಿ (ಕ್ರಿ.ಶ. ೧೪೦೦), ಕೋಟೇಶ್ವರ (ಕ್ರಿ.ಶ. ೧೪೪೫), ಪಾಯಣ್ಣ (ಕ್ರಿ.ಶ. ೧೪೪೮), ಆದಿಯಪ್ಪ (ಕ್ರಿ.ಶ.೧೪೬೦).ಸಾಳ್ವ (ಕ್ರಿ.ಶ. ೧೪೮೧), ಅಕಳಂಕ ಬ್ರಹ್ಮ (ಕ್ರಿ.ಶ. ೧೫೧೦), ರತ್ನಾಕರವರ್ಣಿ (ಕ್ರಿ.ಶ ೧೫೧೭), ಬಾಹುಬಲಿ –ವರ್ಧಮಾನ (ಕ್ರಿ.ಶ ೧೫೬೦), ಚದುರಚಂದ್ರಮ (ಕ್ರಿ.ಶ. ೧೬೪೫), ಪದ್ಮನಾಭ (ಕ್ರಿ.ಶ. ೧೬೮೦) ಮುಂತಾದ ಕವಿಗಳು ಉತ್ತಮ ಕಾವ್ಯಗಳನ್ನು ರಚನೆ ಮಾಡಿ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದರು.

ನೂರಾರು ಬಸದಿಗಳು ನಿರ್ಮಾಣಗೊಂಡು ಜೈನ ವಾಸ್ತುಶಿಲ್ಪಕ್ಕೆ ಗರಿಮೂಡಿತು. ಮೂಡಬಿದರೆಯ ತ್ರಿಭುವನ ಚೂಡಾಮಣಿ ಬಸದಿ, ಗುರುಬಸದಿ, ಕಾರ್ಕಳದ ಚತುರ್ಮುಖ ಬಸದಿ, ಮಾನಸ್ತಂಭಗಳು, ಬ್ರಹ್ಮಸ್ತಂಭಗಳು, ನಿಸದಿ ಸ್ತಂಭಗಳು ನಿರ್ಮಾಣಗೊಂಡು ಜಾಗತಿಕ ಮಟ್ಟದಲ್ಲಿ ತುಳುನಾಡಿನ ಹೆಸರನ್ನು ಚಿರಸ್ಥಾಯಿಗೊಳಿಸಿದವು.

ಕಾರ್ಕಳದ ಬಾಹುಬಲಿ, ವೇಣೂರಿನ ಬಾಹುಬಲಿ, ಮೂಡಬಿದರೆಯ ಧವಳಾಗ್ರಂಥಗಳು, ಹಸ್ತಪ್ರತಿ ಭಂಡಾರಗಳು ಮುಂತಾದವು ಜೈನಧರ್ಮದ ಸಾಂಸ್ಕೃತಿಕ ಶ್ರೀಮಂತಿಕೆಗೆ ಕನ್ನಡಿ ಹಿಡಿದವು.

ಜೈನ ವ್ಯಾಪಾರಿ ಸಂಘಗಳಾದ ಹಲರು, ನಖರು, ಸೆಟ್ಟಿಕಾರರು ವಾಣಿಜ್ಯೋದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ದೇಶವಿದೇಶದೊಡನೆ ವ್ಯಾಪಾರ ವಹಿವಾಟನ್ನು ನಡೆಸತೊಡಗಿದವು. ಕೃಷಿ ಪದ್ಧತಿ ಬೆಳೆದವು.

ಮೂಡಬಿದರೆಯ ಜೈನಮಠ, ಕಾರ್ಕಳದ ಜೈನಮಠಗಳು ತಲೆ ಎತ್ತಿದವು. ವಿದ್ಯಾಭ್ಯಾಸಕ್ಕೆ ಹೊಸ ತಿರುವನ್ನು ನೀಡಿದವು.

ಈ ಎಲ್ಲಾ ಜೈನಧರ್ಮದ ಸಾಂಸ್ಕೃತಿಕ ಸಂಪತ್ತಿನ ಸೂಕ್ಷ್ಮ ಚಿತ್ರಗಳನ್ನು ನಾವು ಅಧ್ಯಯನಕ್ಕೆ ಕೈಗೆತ್ತಿಕೊಂಡಿರುವ ಇಮ್ಮಡಿ ಭೈರರಸರ ಆಸ್ಥಾನ ಕವಿಯಾಗಿದ್ದ ಚದುರ ಚಂದ್ರಮನ 'ಗೊಮ್ಮಟೇಶ್ವರ ಚರಿತೆ' ಎಂಬ ಐತಿಹಾಸಿಕ ಕಾವ್ಯದಲ್ಲಿ ನೋಡಬಹುದಾಗಿದೆ.

೧.೨ ಕವಿ ಪರಿಚಯ

ಜೈನಕವಿಯಾದ ಚದುರ ಚಂದ್ರಮನು, ಕಾರ್ಕಳದಲ್ಲಿ ರಾಜ್ಯವಾಳಿದ್ದ ಇಮ್ಮಡಿ ಭೈರರಸನ (ಕ್ರಿ.ಶ ೧೬೪೭) ಆಸ್ಥಾನ ಕವಿ. ಮದನಾರಿ ಗೊಮ್ಮಟೇಶ್ವರ ಚರಿತ್ರೆಯನ್ನು ಸಾಂಗತ್ಯದಲ್ಲಿ ರಚಿಸಿ ತನ್ನ ಬಗ್ಗೆ ಸ್ವಲ್ಪ ಮಾಹಿತಿಯನ್ನು ನೀಡಿದ್ದಾನೆ.

ತನ್ನ ವಿದ್ಯಾಗುರು, ಶ್ರುತಸಾಗರ ಮುನಿ, ವ್ರತಗುರು ಮಹೇಂದ್ರಕೀರ್ತಿ ತಾನು 'ಅರಿರಾಯನ ಗಂಡರ ದಾವಣಿ' ಎಂಬ ಬಿರುದಾಂಕಿತನಾದ ಭೈರವರಾಯನ ಕರುಣೆಯಿಂದಲೂ ಕಾರ್ಕಳದ ಗುರುಪೀಠದ ಲಲಿತ ಕೀರ್ತಿ ಅಜ್ಞಾನುಸಾರವಾಗಿಯೂ ಈ ಕಾವ್ಯವನ್ನು ಬರೆದಂತೆ ತಿಳಿಸಿರುವುದರಿಂದ, ಈ ಕವಿ ತುಳುದೇಶದ ಕಾರ್ಕಳದ ಭೈರವರಾಯನ ಆಶ್ರಿತನೆಂದು ಸ್ಪಷ್ಟವಾಗುತ್ತದೆ. ಈ ವಿವರಗಳನ್ನು ಹೀಗೆ ನೀಡಿದ್ದಾನೆ.

"ಶ್ರುತಸಾಗರ ಮುನಿಗಲೆ ಪ್ರಿಯ ಶಿಷ್ಯ ಸ। ನ್ನುತ ಕವಿ ಚಂದ್ರಮನು ನಾನು।

ಪ್ರತಿಯಿಲ್ಲವೆನಲೀ ಕೃತಿಯ ಪೇಳ್ವೆನು ಬುಧ । ತತಿ ಮೆಚ್ಚುವಂತೆ ಕನ್ನಡದಿಂ । ೧-೩೧

[illegible]

ವೃತಗುರುವೆನಗೆ ಮಾಹೇಂದ್ರಕೀರ್ತ್ಯಾಚಾರ್ಯ । ಶ್ರುತಸಾಗರ ಮುನಿರಾಯ ।
ನುತ ವಿದ್ಯಾಗುರುವೆನಲೆನ್ನ ಪುಣ್ಯದೊಂ । ದತಿಶಯ ಕಿನ್ನಣೆಯುಂಟೆ ॥ ೧– ೩೩

ಅರಿರಾಯಗಂಡರ ಡಾವಣಿಯೆಂದೆಂಬ । ಬಿರುದಾಳ್ವ ಭೈರವ ನೃಪನ ।
ಕರುಣ ಸಾಹಯ್ಯದಿಂದೀ ಕೃತಿಯನು ಪೇಳ್ವೆ । ಧರೆಯ ಜನರು ಮೆಚ್ಚುವಂತೆ ॥

ಕಾರ್ಕಳ ಗೊಮ್ಮಟೇಶ್ವರನ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ ಪಾಂಡ್ಯ ನೃಪನ (ಕ್ರಿ.ಶ ೧೪೩೧) ಚರಿತ್ರೆಯನ್ನು ಪ್ರಥಮ ನಾಲ್ಕು ಸಂಧಿಯಲ್ಲಿ ನಿರೂಪಿಸಿದ್ದಾನೆ. ಕಾವ್ಯದ ಕೊನೆಯ ಹದಿನಾರು – ಹದಿನೇಳನೆಯ ಸಂಧಿಯಲ್ಲಿ ತನಗೆ ಆಶ್ರಯ ನೀಡಿದ ಇಮ್ಮಡಿ ಭೈರವರಾಯನು ತನ್ನ ತಂದೆ ಭೈರವರಾಯನಿಗೆ ಪುಣ್ಯಖ್ಯಾತಿಗಳಾಗಲೆಂದು ಕುಲಗುರು ಲಲಿತಕೀರ್ತಿಯ ಉಪದೇಶದಿಂದ ಮಹೇಂದ್ರಕೀರ್ತಿಮುನಿಯನ್ನು ಮುಂದಿಟ್ಟುಕೊಂಡು ಗೊಮ್ಮಟೇಶ್ವರನಿಗೆ ಶಕ ೧೫೬೮ ಪಾರ್ಥಿವದಲ್ಲಿ ಅಂದರೆ ಕ್ರಿ.ಶ. ೧೬೪೬ ರಲ್ಲಿ ಅಭಿಷೇಕ,ಪೂಜಾವಿಧಗಳನ್ನು ಮಾಡಿಸಿದನೆಂದು ಹೇಳುತ್ತಾನೆ.

ಹೀಗಾಗಿ ಕವಿ ಚರಿತೆಗಾರರು ಹೇಳುವಂತೆ[1] ಇವನ ಕಾಲವನ್ನು ಕ್ರಿ.ಶ ೧೬೪೬ ಎಂದು ಇಟ್ಟುಕೊಳ್ಳಬಹುದು.

ಲಲಿತ ಕೀರ್ತಿಗಳು ಕಾರ್ಕಳದಲ್ಲಿರುವ ಜೈನಮಠದ ಗುರುಗಳು. ಪನಸೋಗೆಯ ಮೂಲದವರು. ಭೈರರಸರು ಕೆರೆವಸೆ, ಕಾರ್ಕಳಗಳಲ್ಲಿ ರಾಜ್ಯ ಸ್ಥಾಪನೆ ಮಾಡಿದ ಸಂದರ್ಭದಲ್ಲಿ ಅವರಿಗೆ ಮಾರ್ಗದರ್ಶನ ಮಾಡಿದವರು. ಇಂದಿಗೂ ಕಾರ್ಕಳದಲ್ಲಿ ಲಲಿತಕೀರ್ತಿಗಳ ಮಠವಿದ್ದು ಅದು ಸಕ್ರಿಯವಾಗಿವಾಗಿದೆ. ಗುರುಗಳೂ ಇದ್ದಾರೆ.[2]

ಇಮ್ಮಡಿ ಭೈರರಸರಿಗೆ ಗುರುಗಳಾಗಿದ್ದ ಲಲಿತಕೀರ್ತಿಗಳು ಎಷ್ಟನೆಯವರೆಂಬುದು ಸ್ಪಷ್ಟವಿಲ್ಲ. ಕವಿಯು ಉಲ್ಲೇಖಿಸಿರುವ ಶ್ರುತಸಾಗರ ಮುನಿ ಮತ್ತು ಮಹೇಂದ್ರಕೀರ್ತಿಯವರ ಬಗ್ಗೆ ಹೆಚ್ಚಿನವಿವರಗಳು ತಿಳಿದು ಬಂದಿಲ್ಲ. ಶ್ರುತಕೀರ್ತಿಯ ಹೆಸರಿನಲ್ಲಿ ವಿಜಯಕುಮಾರಿ ಚರಿತೆ (ಕ್ರಿ.ಶ ೧೫೬೭) ಹೆಸರಿನ ಗ್ರಂಥವೊಂದು ಬೆಳಕಿಗೆ ಬಂದಿದೆ.[3]

ಅಭಿನವವಾದಿ ವಿದ್ಯಾನಂದರನ್ನು ಕ್ರಿ.ಶ. ೧೫೨೬ ಸ್ತುತಿಸುವ ಶಾಸನವೊಂದರಲ್ಲಿ[4] ಶ್ರುತಕೀರ್ತಿಯ ಹೆಸರು ಕಂಡು ಬರುತ್ತದೆ. ಆದರೆ ಚಂದ್ರಮನ ವಿದ್ಯಾಗುರು ಶ್ರುತಕೀರ್ತಿಗೂ ಇಲ್ಲಿ ಉಲ್ಲೇಖಿತರಾದ ಶ್ರುತಕೀರ್ತಿಗೂ ಸಂಬಂಧವನ್ನು ಕಲ್ಪಿಸಲು ಯಾವ ಆಧಾರಗಳೂ ಕಂಡು ಬರುವುದಿಲ್ಲ.

ಅಂತೆಯೇ ಮಹೇಂದ್ರಕೀರ್ತಿಯನ್ನು ರತ್ನಾಕರವರ್ಣಿಯು ಸ್ತುತಿಸಿದ್ದಾನೆ. ತುಳುನಾಡಿನಲ್ಲಿ ಮಹೇಂದ್ರಕವಿಯ ಹೆಸರಿನಲ್ಲಿ ಬ್ರಹ್ಮಯಕ್ಷಸ್ತೋತ್ರ ಹೆಸರಿನ ಗ್ರಂಥವೊಂದು ಕಂಡು ಬರುತ್ತದೆ.[5] ಆದರೆ ಚಂದ್ರಮನು ಉಲ್ಲೇಖಿಸಿರುವ

೧. ಆರ್ ನರಸಿಂಹಾಚಾರ್ – ಕರ್ನಾಟಕ ಕವಿ ಚರಿತೆ – ದ್ವಿತಿಯ ಸಂಪುಟ, ಪುಟ ೩೨೬, ೧೯೭೫
೨. ಡಾ. ಎಸ್.ಡಿ ಶೆಟ್ಟಿ ತುಳುನಾಡಿನ ಜೈನ ಧರ್ಮ, ಒಂದು ಸಾಂಸ್ಕೃತಿಕ ಅಧ್ಯಯನ. ಪುಟ ೨೪೭.
೩. ವೈ.ಸಿ ಭಾನುಮತಿ – ಶ್ರುತಕೀರ್ತಿ ವಿರಚಿತ –ವಿಜಯಕುಮಾರ ಚರಿತೆ, ಪ್ರಸ್ತಾವನೆ, ೧೯೮೧
೪. E.C, Vol VIII– ನಗರ – ೪೬, ಕ್ರಿ.ಶ ೧೫೨೬
೫. ಡಾ. ಎಸ್.ಡಿ ಶೆಟ್ಟಿ, ತುಳುನಾಡಿನ ಜೈನ ಧರ್ಮ, ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ೨೭೪

ಮಹೇಂದ್ರಕೀರ್ತಿಯ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ಬೆಳಕಿಗೆ ಬರಬೇಕಾಗಿದೆ.

ಕವಿಯು ತನ್ನ ತಂದೆ, ತಾಯಿ ಹುಟ್ಟಿದ ಊರು ಹಾಗೂ ಇತರ ವೈಯಕ್ತಿಕ ಯಾವ ವಿಚಾರಗಳನ್ನೂ ತಿಳಿಸಿಲ್ಲ. ಆದರೆ ಇದೇ ಕಾಲಕ್ಕೆ ಸೇರಿದ ಕಾರ್ಕಳದ ಹತ್ತಿರ ಅಳಿಯೂರಿನ ಚಂದ್ರಮ (ಕ್ರಿ.ಶ ೧೬೨೩) ಹೆಸರಿನ ಕವಿಯು ಗಣಿತಸಾರ, ಲೋಕಸ್ವರೂಪ ಹೆಸರಿನ ಎರಡು ಗ್ರಂಥಗಳನ್ನು ರಚಿಸಿರುವ ವಿಚಾರವನ್ನು ಕವಿ ಚರಿತೆಗಾರರು ಉಲ್ಲೇಖಿಸಿದ್ದಾರೆ.[6] ಇವನು ತಾನು ಚಂದ್ರಕೀರ್ತಿ ಯೋಗೀಶ್ವರನ ಶಿಷ್ಯನೆಂದು ಹೇಳಿಕೊಂಡಿರುವುದರಿಂದ ಇವನು ಚದುರ ಚಂದ್ರಮನಿಗಿಂತ ಭಿನ್ನವಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ.[7]

ಕವಿಯು ಆಗಮ, ಶಬ್ಧ, ತರ್ಕಾದಿ ಶಾಸ್ತ್ರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದಂತೆ ಹೇಳಿಕೊಂಡಿದ್ದಾನೆ (೧-೩೬). ಕಾವ್ಯ ರಚನೆಯ ಬಗ್ಗೆ ಇವನಿಗೆ ಸಾಕಷ್ಟು ಅನುಭವವಿದ್ದಂತೆ ತೋರುತ್ತದೆ. ಮೊದಲನೆ ಸಂಧಿಯ ಕೆಲವು ಪದ್ಯಗಳಲ್ಲಿ ಕಾವ್ಯ ಸಜ್ಜನ ಮತ್ತು ದುರ್ಜನರ ಬಗ್ಗೆ ವಿವೇಚನೆ ಮಾಡಿದ್ದಾನೆ (೧-೩೮, ೪೩). ತನ್ನ ಗುರುಪರಂಪರೆಯನ್ನು ಅಭಿಮಾನದಿಂದ ಸ್ಮರಿಸುತ್ತಾ ಅನೇಕ ಜನ ಗುರುಗಳ ಹೆಸರುಗಳನ್ನು ಉಲ್ಲೇಖಿಸಿದ್ದಾನೆ.

ಜಿನಮತವಾರ್ಧಿವರ್ಧನ ಚಂದ್ರಮ ಧಷ್ಯ ಜನ ಹೃತ್ಕುವಲಯ ಚಂದ್ರ ಅನುಪಮ ವಿಭಂದ ಚಕೋರ ಚಂದ್ರಮನೆಂದು ಜನರೊಲ್ದು ಬಣ್ಣಿಪರವನ (೧-೩೨)

೧.೩ ಗೋಮಟೇಶ್ವರ ಚರಿತ್ರೆಯ ವೈಶಿಷ್ಟ್ಯ

ಸಾಂಗತ್ಯ ಛಂದಸ್ಸಿನಲ್ಲಿ ರಚನೆಗೊಂಡಿರುವ ಈ ಕಾವ್ಯವು ೧೭ ಸಂಧಿ ೨೧೪೮ ಪದ್ಯಗಳನ್ನು ಒಳಗೊಂಡಿದೆ. ಕವಿ ಚರಿತೆಗಾರರು ತಮಗೆ ದೊರೆತ ಹಸ್ತಪ್ರತಿಯೊಂದರಲ್ಲಿ ೨೩೧೮ ಪದ್ಯಗಳಿರುವುದನ್ನು ಉಲ್ಲೇಖಿಸಿದ್ದಾರೆ. (ಕ.ಕ.ಚ -೨ - ಪ್ರ.ಸಂ. ೩೨೬) ಇದರಲ್ಲಿ ಜೈನ ಸಂಪ್ರದಾಯದ ಪ್ರಥಮ ತೀರ್ಥಂಕರ ವೃಷಭನಾಥನ ಚರಿತ್ರೆ ಜೊತೆಗೆ ಆತನ ಮಕ್ಕಳಾದ ಭರತ - ಬಾಹುಬಲಿಯರ ಮಧ್ಯೆ ನಡೆಯುವ ಯುದ್ಧದ ಪ್ರಸಂಗವು ಚಿತ್ರಿಸಲ್ಪಟ್ಟಿದೆ.

ಕವಿಯು ಮೊದಲನೆ ಆಶ್ವಾಸದಲ್ಲಿ ಕಾರ್ಕಳದ ಪಾಂಡ್ಯರಾಜನು ಗೊಮ್ಮಟೇಶ್ವರ ವಿಗ್ರಹವನ್ನು ಮಾಡಿಸಿ, ಅದನ್ನು ೨೦ ಚಕ್ರಗಳುಳ್ಳ ಬಂಡಿಯ ಮೇಲಿಟ್ಟು ಒಂದು ತಿಂಗಳುಗಳ ಕಾಲ ಬೆಟ್ಟದ ಮೇಲಕ್ಕೆ ಎಳೆಯಿಸಿ, ಶಕ ೧೩೫೩ ವಿರೋಧಿ ಕೃತುವಿನಲ್ಲಿ ಅಂದರೆ ಕ್ರಿ.ಶ. ೧೪೩೧ ರಲ್ಲಿ ಪ್ರತಿಷ್ಠಾಪನೆಯನ್ನು ನಡೆಸಿದ ಚಾರಿತ್ರಿಕ ಘಟನೆಯನ್ನು ಉಲ್ಲೇಖಿಸಿದ್ದಾನೆ.

ಅನಂತರ ೧೭ನೇ ಆಶ್ವಾಸದಲ್ಲಿ ಆ ಪಾಂಡ್ಯರಾಜನ ವಂಶದಲ್ಲಿ ಹುಟ್ಟಿದ ಭೈರವರಾಯನ ಚಾರಿತ್ರಿಕ ವಿವರಗಳನ್ನು ನೀಡುತ್ತಾನೆ. ಪಟ್ಟಿಪೊಂಬುಚ್ಚ ಪುರವರಾಧೀಶ್ವರನಾದ ಈ ಇಮ್ಮಡಿ ಭೈರವರಾಯನು ಕ್ರಿ. ಶ ೧೬೪೬ ರಲ್ಲಿ ಅದೇ

---

೬. ಆರ್ ನರಸಿಂಹಾಚಾರ್ - ಕರ್ನಾಟಕ ಕವಿ ಚರಿತೆ - ದ್ವಿತೀಯ ಸಂಪುಟ, ಪುಟ ೩೭೮ , ೧೯೭೫

೭. ಡಾ. ಎಸ್.ಡಿ ಶೆಟ್ಟಿ- ಕಾರ್ಕಳದ ಗೊಮ್ಮಟೇಶ್ವರ ಚರಿತೆ, ಪ್ರಸ್ತಾವನೆ VIII

ಗೊಮ್ಮಟೇಶ್ವರನ ಪುನರ್ ಪ್ರತಿಷ್ಠಾಪನೆಯನ್ನು ಮಹಾಮಸ್ತಕಾಭಿಷೇಕವನ್ನೂ ನಡೆಸಿದ ವಿವರಗಳನ್ನು ದಾಖಲಿಸಿದ್ದಾನೆ.

ಇವನು ನೀಡುವ ಚಾರಿತ್ರಿಕ ವಿವರಗಳೆಲ್ಲವೂ ಅಂದಿನ ಕಾಲದ ಶಾಸನಗಳ ವಿವರಗಳಿಗೆ ಕರಾರುವಕ್ಕಾಗಿ ಹೊಂದಿಕೆಯಾಗುವುದರಿಂದ ಇವನು ನೀಡುವ ವಿವರಗಳೆಲ್ಲವೂ ಅತ್ಯಂತ ಪ್ರಾಮಾಣಿಕವಾಗಿದೆ ಎಂದು ಹೇಳಬಹುದಾಗಿದೆ. ಜೊತೆಗೆ ಆ ಕಾಲದ ಸಾಂಸ್ಕೃತಿಕ ವಿವರಗಳನ್ನು ವಿಸ್ತಾರವಾಗಿ ನಿರೂಪಿಸಿರುವುದರಿಂದ ಈ ಕೃತಿಗೆ ಸಾಕಷ್ಟು ಚಾರಿತ್ರಿಕ ಮಹತ್ವವು ಪ್ರಾಪ್ತವಾಗಿದೆ.

ಕಾವ್ಯಾರಂಭದಲ್ಲಿ ಕಾರ್ಕಳದ ನೇಮಿನಾಥ, ಗೊಮ್ಮಟೇಶ್ವರ, ಕಳಸದ ಚಂದ್ರನಾಥ, ಶ್ಯಾಮಯಕ್ಷ, ಜ್ವಾಲಾಮಾಲಿನಿ, ಸರ್ವಾಹ್ಣಯಕ್ಷ ಬೆಟ್ಟದ ಬ್ರಹ್ಮದೇವ, ಶಾರದೆ, ಪೊಂಬುಚ್ಚದ ಪದ್ಮಾಂಬೆ ಇವರನ್ನು ಸ್ತುತಿಸಿರುವುದು ಗಮನಾರ್ಹವಾಗಿದೆ.

ನಂತರ ತನ್ನ ಗುರುಪರಂಪರೆಯನ್ನು ಸ್ಮರಿಸುತ್ತಾ, ಮಹೇಂದ್ರಕೀರ್ತಿ ಪನಸೋಗೆಯ ಸಿಂಹಾಸನಾಧೀಶ ಕೀರ್ತಿದೇವ, ಅವರ ಶಿಷ್ಯ ಮಲಧಾರಿ ಲಲಿತಕೀರ್ತಿ, ಆ ಪರಂಪರೆಯಲ್ಲಿ ಬಂದ ಅಭಿನವ ಲಲಿತಕೀರ್ತಿ, ವಿದ್ಯಾನಂದ, ಶ್ರುತಸಾಗರ, ಕಾಣೂರ್ಗಣದ ಭಾನುಕೀರ್ತಿ, ಬಲ್ಲಾಳರಾಯ ಜೀವರಕ್ಷಕ ಚಾರುಕೀರ್ತಿ, ವೀರಸೇನ, ಲಲಿತವರ್ಣಿಗಳನ್ನು ಭಕ್ತಿಭಾವ, ಗೌರವಗಳಿಂದ ನೆನೆದಿರುವುದು ಅಧ್ಯಯನದ ದೃಷ್ಟಿಯಿಂದ ಉಪಯುಕ್ತ ವಿಚಾರವಾಗಿದೆ.

೧.೪ ಗೊಮ್ಮಟೇಶ್ವರನ ಚರಿತೆಯ ಆಕರಗಳು

ಜೈನ ಪರಂಪರೆಯಲ್ಲಿ ಭರತ–ಬಾಹುಬಲಿಯರ ಕಥೆ ಪ್ರಾಚೀನವಾದುದು. ಆದಿ ತೀರ್ಥಂಕರ ವೃಷಭನಾಥರ ಚರಿತ್ರೆಯಲ್ಲಿ ಅಂತರ್ಗತವಾಗಿ ಬಂದಿದೆ. ಪ್ರಾಕೃತ, ಸಂಸ್ಕೃತ, ಅರ್ಧಮಾಗಧೀ, ಕನ್ನಡ ಭಾಷೆಗಳಲ್ಲಿ ವೃಷಭನಾಥನ ಚರಿತ್ರೆಯನ್ನೊಳಗೊಂಡಿರುವ ಅನೇಕ ಗ್ರಂಥಗಳು ಇವೆ. ಅದರಲ್ಲೂ ತ್ರಿಷಷ್ಠಿ ಶಲಾಕಾ ಪುರುಷ ಪುರಾಣಂ' ಹೆಸರಿನ ಪುರಾಣ ಗ್ರಂಥಗಳಲ್ಲಿ ಕಂಡು ಬರುವ ಪ್ರಥಮ ಕತೆಯೇ ವೃಷಭನಾಥನನ್ನು ಕುರಿತದ್ದು. ಈ ಪುರಾಣಕತೆಯ ಅನೇಕ ಕವಿಗಳಿಗೆ ಆಕರ ಗ್ರಂಥವಾಗಿ ಸ್ಫೂರ್ತಿ ನೀಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ನಮಗೆ ದೊರೆತ ಪ್ರಾಕೃತ ಭಾಷೆಯಲ್ಲಿರುವ ವಿಮಲ ಸೂರಿಯ (ಕ್ರಿ.ಶ.೧ ನೆ ಶ) 'ಪಉಮಚರಿಯಂ' ಗ್ರಂಥವು ಪ್ರಾಚೀನವಾಗಿದೆ. ಅನಂತರ ಶಿಲಾಂಕಾಚಾರ್ಯನ (ಕ್ರಿ.ಶ ೮೭೦), ಚಉಪ್ಪನ್ನ ಮಹಾಪುರಿಸಚರಿಯಂ ಹಾಗೂ ವಾಸುದೇವ ಹಿಂಡಿಯ (ಕ್ರಿ.ಶ ೪ನೆ ಶ), 'ಪವುಮಚರಿಯಂ' ಕೃತಿಗಳನ್ನು ಉಲ್ಲೇಖಿಸಬಹುದು. ಇವುಗಳ ಜೊತೆಗೆ ಜಂಬೂದಿವಪಣ್ಣತ್ತಿ, ಕಲ್ಪಸೂತ್ರ ಅವಶ್ಯಕ ನಿರುಕ್ತಿ, ಜಂಬೂದೀಪ ಪ್ರಜ್ಞಪ್ತಿ ಮುಂತಾದ ಕೃತಿಗಳಲ್ಲೂ ಆದಿನಾಥನ ಚರಿತ್ರೆಯ ಜೊತೆಗೆ ಮುಂತಾದ ಕೃತಿಗಳಲ್ಲೂ ಆದಿನಾಥನ ಚರಿತ್ರೆಯ ಜೊತೆಗೆ ಭರತ – ಬಾಹುಬಲಿಯರ ಕಥೆಯೂ ಅಡಕವಾಗಿರುವುದನ್ನು ಗುರುತಿಸಬಹುದು.

ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡಿರುವ ರವಿಷೇಣನ (ಕ್ರಿ.ಶ ೬೭೬), 'ಪದ್ಮಪುರಾಣ', ಪುನ್ನಾಟ ಸಂಘದ

ಜಿನಸೇನಾಚಾರ್ಯರ (ಕ್ರಿ.ಶ ೮ನೇಶ), ಹರಿವಂಶಪುರಾಣ' ಸೇನ ಸಂಘದ ಜಿನಸೇನಾಚಾರ್ಯರ (ಕ್ರಿ.ಶ ೯ನೇಶ), 'ಪೂರ್ವಪುರಾಣ', ಪುಷ್ಪದಂತನ (ಕ್ರಿ. ಶ.೯೬೫). 'ಮಹಾಪುರಾಣ' ಮುಂತಾದ ಕೃತಿಗಳು ಭರತ–ಬಹುಬಲಿಯರ ಕಥೆಯನ್ನು ನಿರೂಪಿಸುತ್ತದೆ.

ಕನ್ನಡ ಭಾಷೆಯ ಕೃತಿಗಳಲ್ಲಿ ಪಂಪನ (ಕ್ರಿ.ಶ ೯೪೨), 'ಆದಿಪುರಾಣ' ವೇ ಪ್ರಥಮ ಕೃತಿಯಾಗಿದೆ. ಅನಂತರ ಬಂದಿರುವ ಚಾವುಂಡರಾಯನ (ಕ್ರಿ.ಶ.೯೭೮), 'ತ್ರಿಷಷ್ಠಿಶಲಾಕ ಪುರುಷಮಹಾಪುರಾಣ' ಬೊಪಣ್ಣ ಪಂಡಿತನ (ಕ್ರಿ.ಶ ೧೧೮೦), 'ಗೊಮ್ಮಟಸ್ತುತಿ', ಹಸ್ತಿಮಲ್ಲನ (ಕ್ರಿ.ಶ.೧೨೯೦) 'ಪೂರ್ವ ಪುರಾಣ ಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು. ಅಂತೆಯೇ ನಾಗಾರ್ಜುನನ (೧೪೩೧) 'ಪುಣ್ಯಸ್ರಾವ', ಕೇಶವರ್ಣಿಯ (೧೩೫೯) 'ಬಾಹುಬಲಿ ಚರಿತ' ಗ್ರಂಥಗಳನ್ನು ಇಲ್ಲಿ ನೆನೆಯಬಹುದು.

ತುಳುನಾಡಿನವರೇ ಆದ ಕಲ್ಯಾಣ ಕೀರ್ತಿಯ (ಕ್ರಿ.ಶ. ೧೪೦೦) 'ಕಾಮನ ಕಥೆ', ರತ್ನಾಕರವರ್ಣಿಯು (೧೫೫೭), 'ಭರತೇಶ ವೈಭವ' ಕೃತಿಗಳನ್ನು ನಾವು ಮರೆಯುವಂತಿಲ್ಲ. ಚದುರ ಚಂದ್ರಮನು ಈ ಎರಡೂ ಕೃತಿಗಳಿಂದಲೂ ಸಾಕಷ್ಟು ಪ್ರಭಾವಿತನಾಗಿದ್ದಾನೆ.

ಅನಂತರ ಕಾಲಘಟ್ಟದಲ್ಲಿ ರಚನೆಗೊಂಡಿರುವ ಚಿಕ್ಕಣ ಪಂಡಿತ (ಕ್ರಿ. ಶ.೧೫ನೇಶ), ಶಾಂತಣವರ್ಣಿ (ಕ್ರಿ.ಶ ೧೬೧೨), ಪದ್ಮರಸ (೧೬೧೩), ಚದುರಚಂದ್ರಮ (ಕ್ರಿ.ಶ. ೧೬೪೬), ಶಾಂತಕೀರ್ತಿ (೧೭೬೮) ಮುಂತಾದವರು ಭರತ – ಬಾಹುಬಲಿಯ ಕಥೆಯನ್ನಾಯ್ದುಕೊಂಡು ಕಾವ್ಯ ರಚಿಸಿದ್ದಾರೆ. ಇವರಲ್ಲಿ ಚಿಕ್ಕಣ್ಣ ಪಂಡಿತ, ಶಾರ್ತ್ಕಣವರ್ಣಿ, ಅನಂತಕವಿ ಮುಂತಾದವರು ಶ್ರವ
ಣಬೆಳಗೊಳದ ಗೊಮ್ಮಟೇಶ್ವರ ಶಿಲ್ಪ ನಿರ್ಮಾಣದ ಹಿನ್ನೆಲೆಯಲ್ಲಿ ಕೃತಿ ರಚಿಸಿದರೆ ಕಾರ್ಕಳದ ಗೊಮ್ಮಟೇಶ್ವರನ ಹಿನ್ನೆಲೆಯಲ್ಲಿ ಚದುರ ಚಂದ್ರಮನು ಕಾವ್ಯ ರಚಿಸಿರುವುದು ವಿಶೇಷವಾಗಿದೆ. ಕಾರ್ಕಳದ ಗೊಮ್ಮಟೇಶ್ವರ ಶಿಲ್ಪದ ಕುರಿತು ರಚನೆಗೊಂಡಿರುವ ಏಕೈಕ ಕೃತಿ ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ.

ಚದುರ ಚಂದ್ರಮ ತನ್ನ ಗೊಮ್ಮಟೇಶ್ವರ ಚರಿತೆ ಕಾವ್ಯಕ್ಕೆ ಆಕರವಾಗಿ ಜಿನ ಸೇನರ ಪೂರ್ವಪುರಾಣ ಗ್ರಂಥವನ್ನು ವಿಶೇಷವಾಗಿ ಬಳಸಿಕೊಂಡಿದ್ದಾನೆ.

ಕಾವ್ಯರಚನೆಯ ಸಂದರ್ಭದಲ್ಲಿ ಕವಿಯ ಮೇಲೆ ಪಂಪನ ಪ್ರಭಾವ ತೀವ್ರವಾಗಿರುವುದು ಕಂಡು ಬರುತ್ತದೆ. ಈ ಅಂಶವನ್ನು ವಿದ್ವಾಂಸರು ಗುರುತಿಸಿದ್ದಾರೆ.

ಉದಾಹರಣೆಗೆ ಪಂಪನ ಅನೇಕ ಪದ್ಯಗಳನ್ನು, ವಾಕ್ಯಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಬಳಸಿಕೊಂಡಿದ್ದಾನೆ. ಉದಾ:೧೪ ನೇ ಸಂಧಿಯ ೧, ೩೪, ೬೬, ೭೯, ೮೩, ೮೬, ೮೭, ೯೨, ೧೦೫ ಸಂಖ್ಯೆಯ

ಪದ್ಯಗಳನ್ನು ಗಮನಿಸಬಹುದು. ಪಂಪನ ಜಗತ್‌ಪ್ರಸಿದ್ಧ 'ನೆಲಸುಗೆ ನಿನ್ನ ವಕ್ಷದೊಳ್' ಎಂಬ ಪದ್ಯವು ಚಂದ್ರಮನ ಕೈಯಲ್ಲಿ 'ನಿನ್ನ ವಕ್ಷಸ್ಥಳದೊಳ್ ಭಾಗ್ಯಲಕ್ಷ್ಮಿ ತಾನಿನ್ನು ಸುಸ್ಥಿರವಾಗಿ ನಿಲಲಿ' ಎಂದು ಪರಿವರ್ತನೆಗೊಂಡಿದೆ. ಇಂತಹ ಹಲವಾರು ದೃಷ್ಟಾಂತಗಳನ್ನು ನಾವು ಗಮನಿಸಬಹುದು.

ಪಂಪನು ಹೃಸ್ವಗೊಳಿಸಿದ ಕಥೆಯನ್ನು ಚಂದ್ರಮನು ಹೃಸ್ವಗೊಳಿಸಿದ್ದಾನೆ. ಕೆಲವೆಡೆ ಪಂಪನು ಕೈಬಿಟ್ಟ ಕಾವ್ಯಭಾಗಗಳನ್ನು ಕವಿಯು ಜಿನಸೇನರ ಪೂರ್ವಪುರಾಣದಿಂದ ಎತ್ತಿಕೊಂಡಿದ್ದಾನೆ. ಉದಾ : ೧೩ನೇ ಸಂಧಿಯ 'ಬಾಹುಬಲಿಯ ಚಂದ್ರಿಕಾ ವಿಹಾರ'ದ ಪ್ರಸಂಗವು ಪೂರ್ವಪುರಾಣದಿಂದ ನೇರವಾಗಿ ಪ್ರಭಾವಿತವಾಗಿದೆ.

ಕಾವ್ಯದ ಆರಂಭದಲ್ಲಿ ಕವಿಯು ತಾನು ಪೂರ್ವಶಾಸ್ತ್ರದಲ್ಲಿ ನಿರೂಪಿತವಾಗಿರುವ ಕಥೆಯನ್ನು ಎತ್ತಿಕೊಂಡಿರುವುದಾಗಿ ತಿಳಿಸಿರುವುದರಿಂದ ಇವನು ಪೂರ್ವ ಪರಂಪರೆಗೆ ಅತಿನಿಷ್ಠನಾಗಿದ್ದಾನೆಂದು ಭಾವಿಸಬಹುದು. ಇವನ ಕಾವ್ಯಶೈಲಿಯ ಮೇಲೆ ರತ್ನಾಕರವರ್ಣಿಯ ಪ್ರಭಾವವೂ ದಟ್ಟವಾಗಿ ಕಂಡುಬರುತ್ತದೆ. ಆದರೆ ಕಥಾ ವಿವರಣೆಯಲ್ಲಿ ರತ್ನಾಕರನಂತೆ ಕಥೆಯನ್ನು ಬದಲಾಯಿಸುವ ಸ್ವಾತಂತ್ರ್ಯವನ್ನು ವಹಿಸಿಲ್ಲ. ಪಂಪ ಜಿನಸೇನರಿಗೆ ಅತಿ ನಿಷ್ಠನಾಗಿ ನಡೆದುಕೊಂಡಿದ್ದಾನೆ.

ಇಷ್ಟಾಗಿಯೂ ಚಂದ್ರಮನ ಐತಿಹಾಸಿಕ ದೃಷ್ಟಿ ಹರಿತವಾದುದು. ಪೂರ್ವ ಕವಿಗಳಿಂದ ಉಪಕೃತನಾಗಿಯೂ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ತನ್ನ ಕಾಲದ ಸಾಂಸ್ಕೃತಿಕ ವಿವರಗಳನ್ನು ಅನಾವರ್ಣಗೊಳಿಸಿರುವುದರ ಜೊತೆಗೆ ತನ್ನ ಕಣ್ಣೆದುರು ನಡೆದ ಘಟನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಈ ದೃಷ್ಟಿಯಿಂದ ನೋಡಿದರೆ ಇವನ ಕಾವ್ಯಕ್ಕೆ ವಿಶೇಷವಾದ ವೈಶಿಷ್ಟ್ಯವೂ ಇದೆ. ಮಹತ್ವವು ಇದೆ.

ಕಾರ್ಕಳದ ಭೈರರಸರ ಚರಿತ್ರೆಯನ್ನು ಕಾವ್ಯಮುಖೇನ ಚಿರಸ್ಥಾಯಿಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಅವರ ಸಾಧನೆ, ಸಿದ್ಧಿಗಳ ಚಿತ್ರವನ್ನು ಔಚಿತ್ಯಪೂರ್ಣವಾಗಿ ನೀಡಿ ಉಪಕರಿಸಿದ್ದಾನೆ. ಹೀಗಾಗಿ ಇವನ ವಿಶ್ವಾಸಾರ್ಹತೆಯ ಬಗ್ಗೆ ಯಾವ ಸಂದೇಹವೂ ಇಲ್ಲ.

ಪಾಂಡ್ಯರಾಯನ ಧಾರ್ಮಿಕ ಪ್ರವೃತ್ತಿ, ದಾನಶೀಲತೆ, ಗೊಮ್ಮಟ ಮೂರ್ತಿಯ ನಿರ್ಮಾಣ ಸಂಕಲ್ಪ, ಕೆತ್ತನೆ, ಸಾಗಾಣಿಕೆ, ಪ್ರತಿಷ್ಠಾಪನೆ ಹೀಗೆ ಪ್ರತಿಯೊಂದು ಘಟನೆಗಳನ್ನು ಸ್ವಾರಸ್ಯಕರವಾಗಿ ನಿರೂಪಿಸುತ್ತ ಹೋಗಿರುವುದರಿಂದ ಚರಿತ್ರೆಗಾರರಿಗೆ, ಕಾವ್ಯಾಭ್ಯಾಸಿಗಳಿಗೆ ಅಪೂರ್ವ ದಾಖಲೆಯಾಗಿ ನಿಲ್ಲುತ್ತದೆ.

---

೧. ಡಾ.ಎಸ್.ಡಿ ಶೆಟ್ಟಿ, ಕಾರ್ಕಳದ ಗೊಮ್ಮಟೇಶ್ವರ ಚರಿತೆ. ಪ್ರಸ್ತಾವನೆ ಪುಟ ೯

೨. ಡಾ.ಎಸ್.ಡಿ ಶೆಟ್ಟಿ, ಕಾರ್ಕಳದ ಗೊಮ್ಮಟೇಶ್ವರ ಚರಿತೆ, ಪ್ರಸ್ತಾವನೆ ಪುಟ ೧೦.

೩. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ –೪ ಬಾಗ ೨ ಪುಟ ೩೧೫.

ಈ ಹಿನ್ನೆಲೆಯಲ್ಲಿ ವಿಮರ್ಶಕರು ಗುರುತಿಸಿರುವಂತೆ ಮರುದೇವನ ಹಿರಿಯ ಮಕ್ಕಳಾದ ಭರತ–ಬಾಹುಬಲಿಯರ ಪುರಾಣ ಕಥೆಯ ಜೊತೆಗೆ ಕಾರ್ಕಳದಲ್ಲಿ ಗೊಮ್ಮಟ ವಿಗ್ರಹ ಪ್ರತಿಷ್ಠೆಯಾದುದನ್ನು ಬೆಸೆದು ಚಂದ್ರಮ ಕವಿಯು ಕಾರ್ಕಳದ ಗೊಮ್ಮಟೇಶ್ವರ ಚರಿತ್ರೆಯು ಹಳೆಯ ವಸ್ತುವಿನೊಡನೆ ಸಮಕಾಲೀನ ಇತಿಹಾಸವು ಬೆಸೆದು ಹೊಸ ಕಸುವು ಬಂದಿದೆ. ಎಂದ ಮಾತು ಲಕ್ಷಿಸತಕ್ಕದ್ದಾಗಿದೆ. ಅಂತು ಕನ್ನಡ ಸಾಹಿತ್ಯಕ್ಕೆ ಅತ್ಯುತ್ತಮ ಚಾರಿತ್ರಿಕ ಕಾವ್ಯ ನೀಡಿರುವ ಚಂದ್ರಮ ಕವಿಗೆ ಸಾಹಿತ್ಯ ಪ್ರಪಂಚದಲ್ಲಿ ಉತ್ತಮ ಸ್ಥಾನವಿದೆ.

೧.೫ ಕಾವ್ಯ ವಸ್ತು ವಿವೇಚನೆ

ಚದುರಚಂದ್ರಮನು ರಚಿಸಿದ 'ಗೊಮ್ಮಟೇಶ್ವರ ಚರಿತೆ' ಕಾವ್ಯವು ಕಾರ್ಕಳವನ್ನಾಳಿದ ಅರಸರು, ಪ್ರಥಮ ತೀರ್ಥಂಕರ ವೃಷಭದೇವ, ಆತನ ಮಕ್ಕಳು, ಕಾರ್ಕಳದ ಅರಸರಿಂದ ನಡೆಸಲ್ಪಟ್ಟ ಗೊಮ್ಮಟೇಶ್ವರನ ಉತ್ಸವದ ಕಥೆಯನ್ನು ಒಳಗೊಂಡ, ಚಾರಿತ್ರಿಕ ಮಹತ್ವವನ್ನು ಹೊಂದಿದ ಕೃತಿಯಾಗಿದೆ.

ಈ ಕೃತಿಯನ್ನು ಚದುರಚಂದ್ರಮನು ೧೭ ಸಂಧಿಗಳಲ್ಲಿ ರಚಿಸಿದ್ದಾನೆ. ಅಲ್ಲದೆ ಪ್ರತೀ ಸಂಧಿಯ ಪ್ರಾರಂಭದಲ್ಲಿ ಗೊಮ್ಮಟ ಸ್ತುತಿಯನ್ನು ಹಾಗೂ ಕೊನೆಯಲ್ಲಿ ತನ್ನ ಗುರುಗಳನ್ನು ಕುರಿತು ಸ್ತುತಿಸಿದ ಪದ್ಯವನ್ನು ಗಮನಿಸಬಹುದು.

ಒಂದನೆಯ ಸಂಧಿ : ಪೂರ್ವ ಪೀಠಿಕೆ

"ಸುರನರಪತಿನುತ ಚರಣ ಸರೋಜ ಭಾ।ಸುರತರ ಕೇವಲ ಬೋಧ ॥
ಪರಮಾರ್ಹಂತ ಲಕ್ಷ್ಮೀಪತಿ ನಮಗೆ ನೀ । ಶರಣಾಗು ನೇಮಿಜಿನೇಶ ॥ ೧ –೧
"ತರಣಿ ಮಂಡಲದ ನೇಳಿಪ ಧರ್ಮಚಕ್ರವ। ಶಿರದೊಳು ಧರಿಸಿ ಭವ್ಯರಿಗೆ ॥
ವರವಿತುತಿ ರಕ್ಷಿಪ ಸರ್ವಾಹ್ಣ ಯಕ್ಷನೀ । ಪರಿಹರಿಸೆಮ್ಮ ವಿಘ್ನಗಳ ॥ ೧– ೯
"ಪನಸೋಗೆಯ ಸಿಂಹಾಸನ ಪೂರ್ವಾದ್ರಿ । ಗನುಪಮ ಸೂರ್ಯನೆಂದೆನಿಪ ॥
ಮುನಿಪತಿ ದೇವ ಕೀರ್ತ್ಯಾಚಾರ್ಯನ ಪದ । ವನಜಗಳನು ಬಲಗೊಂಬೆ ॥ ೧–೧೮

ಕಾವ್ಯಾರಂಭದಲ್ಲಿ ಕವಿ ಕಾರ್ಕಳದ ನೇಮಿನಾಥ, ಗೊಮ್ಮಟೇಶ, ಸರ್ವಾಹ್ಣ ಯಕ್ಷರನ್ನು ಸ್ತುತಿಸಿದ್ದಾನೆ. ಮಹೇಂದ್ರಕೀರ್ತಿ, ಬಲ್ಲಾಳರಾಯ, ಜೀವರಕ್ಷಕ, ಚಾರು ಕೀರ್ತಿ, ವೀರಸೇನ ಮುಂತಾದ ಗುರುಪರಂಪರೆಯನ್ನು ನೆನೆದು ಅವರಿಗೆ ಗೌರವವನ್ನು ಸಲ್ಲಿಸುವುದರ ಮೂಲಕ ಕವಿ ಚಂದ್ರಮ ತನ್ನ ಕಾವ್ಯವನ್ನು ಪ್ರಾರಂಭಿಸುತ್ತಾನೆ.

'ಕಬ್ಬಿನೊಳಿದ್ದ ರಸವ ಬಿಟ್ಟು ಸೋಗೆಯ । ಕೊಬ್ಬಿದ ಕುರಿ ಸೇವಿಪಂತೆ
ಕಬ್ಬದೊಳಿದ್ದ ಗುಣವ ಬಿಟ್ಟು ದುರ್ಜನ । ರುಬ್ಬಿ ದೋಷ್ಷನರಸುವರು ॥ ೧–೩೯

[illegible]

ಹಾಲು ನೀರೊಂದಾಗಿ ಕೂಡೆ ನೀರನು ಬಿಟ್ಟು । ಹಾಲ ಸೇವಿಪ ಹಂಸೆಯಂತೆ

ಲೀಲೆ ಕೈಮಿಗೆ ಗುಣವನು ಪೇಳ್ವೆ ಸಜ್ಜನ । ಜಾಲಕೆ ನಾನೆರಗುವೆನು ॥ ೧–೪೦

ಎಂದು ಕವಿಗಳನ್ನು ಕುರಿತು ನಿಂದಿಸುತ್ತಾ ಕಾವ್ಯದಲ್ಲಿ ಕೆಟ್ಟ ಅಂಶಗಳನ್ನು ಕಡೆಗಣಿಸಿ, ಒಳ್ಳೆಯ ಗುಣವನ್ನು ಸ್ವೀಕರಿಸುವ ಸಜ್ಜನರ ಗುಣವನ್ನು ಮೆಟ್ಟಿ ಅವರಿಗೆ ನಮಸ್ಕರಿಸುತ್ತಾ, ಕವಿಗಳ ಕೆಲವು ಗುಣ–ದೋಷಗಳನ್ನು ತಿಳಿಸುತ್ತಾನೆ.

ಕವಿ ಭೂಮಂಡಲದ ವರ್ಣನೆಯನ್ನು ಅದ್ಭುತವಾಗಿ ವರ್ಣಿಸುತ್ತಾನೆ. ಭೂಮಂಡಲದ ಸೂರ್ಯಮಂಡಲವನ್ನು, ಅನೇಕ ದ್ವೀಪ ಸಾಗರಗಳನ್ನು ಒಳಗೊಂಡಿದ್ದು ಅದರಲ್ಲಿ ಸುತ್ತ ಲವಣಾಬ್ಧಿಯಿಂದ ಕೂಡಿದ ಜಂಬೂದ್ವೀಪ ವಿದ್ದು ಅದು ಪರ್ವತ, ವನ, ಅಪೂರ್ವವೂ, ಅಕೃತಿಮವೂ ಆದ ಜಿನಗೃಹ, ಮಾನಸ್ತಂಭ, ಗೋಪುರಗಳನ್ನು ಒಳಗೊಂಡಿದೆ.

ಹೀಗೆ ಜಂಬುದ್ವೀಪದ ದಕ್ಷಿಣ ಭಾಗದಲ್ಲಿ ಭರತ ಷಟ್ಖಂಡವಿದ್ದು ಅದರಲ್ಲಿ ಭೂಕಾಂತೆಯ ಸಿರಿಮುಖದಂತೆ, ಶ್ರೀಕಾರ್ಕಳವೆಂಬ ಪಟ್ಟಣವಿರುವುದಾಗಿ, ಅದು ಅನೇಕ ಪಟ್ಟಣಗಳನ್ನು ಒಳಗೊಂಡಿದ್ದು ಅದರಲ್ಲಿ ಬೆಟ್ಟದಂಗಡಿಯೂ ಒಂದಾಗಿದ್ದು ಅದು ಶ್ರೀ ಪಾಂಡ್ಯ ನಗರಿ ಎಂಬ ಹೆಸರನ್ನು ಪಡೆದಿತ್ತು ಎಂಬುದಾಗಿ ಕವಿ ಕಾರ್ಕಳವನ್ನು ವರ್ಣಿಸುತ್ತಾನೆ.

ಇಲ್ಲಿ ಮುತ್ತು, ರತ್ನಗಳಿಂದ ಅಲಂಕೃತಗೊಂಡ ಮನೆಗಳು, ಹಲವಾರು ವರ್ಗಕ್ಕೆ ಸೇರಿದ ಜನರ ಕೇರಿಗಳು, ಇದ್ದುದಾಗಿ ತಿಳಿಸುತ್ತಾನೆ. ಅದು ಅನೇಕ ಬಸದಿ, ಜಿನ ಚೈತ್ಯಾಲಯ, ಕೆರೆ, ಅರಮನೆ, ಸಿಂಹಾಸನಗಳನ್ನು ಒಳಗೊಂಡಿದ್ದು ಅಲ್ಲಿನ ಜನರು ಆಹಾರ, ಅಭಯ, ಔಷಧ ಶಾಸ್ತ್ರದಾನಗಳಲ್ಲಿ ನಿರತರಾಗಿದ್ದಾರೆಂದೂ ಇವೆಲ್ಲದರಿಂದ ಈ ಕಾರ್ಕಳವು ಪುಣ್ಯಭೂಮಿಯಂತಾಗಿದೆ.

ಹೀಗೆ ಪ್ರಥಮ ಅಧ್ಯಾಯವು ಭೂಮಂಡಲದ ವರ್ಣನೆಯನ್ನು ಒಳಗೊಂಡಿದೆ.

ಎರಡನೆ ಸಂಧಿ – ಗೊಮ್ಮಟ ಮೂರ್ತಿಯ ನಿರ್ಮಾಣ ಸಂಕಲ್ಪ

ಉತ್ತರ ಮಧುರೆಯ ದೊರೆಗಳ ಕುಲದೀಪ । ಚಿತ್ತಜ ಸನ್ನಿಭ ರೂಪ ॥

ಬಿತ್ತರವಾದ ಬಿರುದಿನ ಕಲಾಪರ । ಜೋತ್ತಮ ಶ್ರೀ ಪಾಂಡ್ಯ ಭೂಪ ॥ ೨ –೩

ಈ ಸುಂದರವಾದ ಕಾರ್ಕಳ ಪಟ್ಟಣವನ್ನು ಆಳುತ್ತಿದ್ದ ಪಾಂಡ್ಯ ನೃಪಾಲ ರಾಜನ ಕುರಿತು ಕವಿ ಎರಡನೇ ಅಧ್ಯಾಯದಲ್ಲಿ ವಿವರಿಸುತ್ತಾನೆ.

ಉತ್ತರಮಧುರೆಯ ಪರಂಪರೆಯ ರಾಜರುಗಳಲ್ಲಿ ಕುಲದೀಪನೂ, ಅರಿರಾಯ ಗಂಡಭೇರುಂಡ ಎಂಬ ಹೆಸರಿನ ಖ್ಯಾತಿ ಪಡೆದ ಪಾಂಡ್ಯ ನೃಪಾಲನು ದಕ್ಷ ರಾಜನಾಗಿದ್ದು ಆತನನ್ನು ಕವಿ ಜಿನ ಕೈರವರತ್ನನೆಂದೂ

ನವನಾಟಕಶಾಲೆಯ ರಾಯನೆಂದೂ ಲೋಕವು ಬಣ್ಣಿಸುತ್ತದೆ.

ಹೀಗೆ ದಕ್ಷನೂ ಸದ್ಗುಣನೂ ಪ್ರಭಾವಶಾಲಿಯೂ ಆದ ಪಾಂಡ್ಯ ನೃಪಾಲ ಅರಸನು ಕಾರ್ಕಳ ರಾಜ್ಯವನ್ನು ಆಳುತ್ತಿರಲು ಒಮ್ಮೆ ತನ್ನಿಂದ ಏನಾದರೂ ಒಂದು ಧಾರ್ಮಿಕ ಕಾರ್ಯವು ನೆರವೇರಬೇಕೆಂದು ಯೋಚಿಸುತ್ತಾನೆ. ಈ ರೀತಿಯಾಗಿ ಒಂದು ಧರ್ಮಕಾರ್ಯವನ್ನು ಮಾಡಲಾರದವನ ಜನ್ಮ ವ್ಯರ್ಥವೆಂದು ಭಾವಿಸುತ್ತಾನೆ.

ಮೂಜಗದರಸುಗಳೆಲ್ಲರ ಕೈಯಿಂದ । ಪೂಜಿಸಿಕೊಂಬ ಸಂಪದವು ॥

ಶ್ರೀ ಜಿನಧರ್ಮದ ಫಲವೆಂದು ಮನದೊಳು । ರಾಜಾಧಿರಾಜ ಚಿಂತಿಸಿದ ॥ ೨–೩೪

ಇಂದು ತನಗೆ ಮೂರು ಲೋಕದ ಜನರಿಂದ ಅರಸರಿಂದ ಗೌರವ, ಸತ್ಕಾರ, ಕಾಣಿಕೆ ಎಲ್ಲವೂ ಸಿಕ್ಕಿದೆ ಯೆಂದಾದರೆ, ಅದು ತಾನು ಜೈನ ಧರ್ಮದಲ್ಲಿ ಹುಟ್ಟಿದುದರ ಫಲವೆಂದು ಭಾವಿಸುತ್ತಾನೆ. ಅಂತಹ ಧರ್ಮದಲ್ಲಿ ಹುಟ್ಟಿದ ತಾನು ಆ ಧರ್ಮಕ್ಕಾಗಿ ಏನನ್ನಾದರೂ ಮಾಡಲೇಬೇಕೆಂದು ನಿರ್ಧರಿಸುತ್ತಾನೆ. ಹೀಗೆ ಚಿಂತನೆಗಳಿಗೆ ಮಂತ್ರಿಗಳಿಂದ ಸಲಹೆ ಸೂಚನೆಗಳನ್ನು ಪಡೆಯುವ ಉದ್ದೇಶದಿಂದ ಒಂದು ಸಭೆಯನ್ನು ಕರೆಯುತ್ತಾನೆ. ಸಾಂಪ್ರದಾಯಿಕವಾಗಿ ಸಭೆ ಆರಂಭಗೊಂಡ ನಂತರ ರಾಜ ತನ್ನ ಮಂತ್ರಿವರ್ಗದವರಲ್ಲಿ ಧರ್ಮ, ಅರ್ಥ, ಕಾಮಗಳಲ್ಲಿ ಯಾವುದು ಮುಖ್ಯ. ಸ್ವಮೋಕ್ಷ ಯಾವುದರಿಂದ ಸಾಧ್ಯ ಎಂದು ಪ್ರಶ್ನಿಸಿ ಅವರ ನಿರ್ಮಲ ಮನಸ್ಸಿನ ಉತ್ತರಕ್ಕಾಗಿ ಕಾಯುತ್ತಾನೆ. ರಾಜನ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಉತ್ತರಿಸಿದ ನಂತರ, ಒಬ್ಬ ವ್ಯಕ್ತಿ ತನ್ನ ಮಾತುಗಳಲ್ಲಿ ಹೀಗೆ ಹೇಳುತ್ತಾನೆ.

ಮರನಿಲ್ಲದಿದ್ದರೆ ಕುಸುಮ ಫಲಂಗಳ। ಗಿರವೆತ್ತಣಿಂದ ಬಂದ ಪುದು ॥

ಮರನ ಕಡಿದು ದುರುಳರು ಪುಷ್ಪಫಲಗಳ। ನಿರದೆ ಸೇವಿಸುವರೆ ಸ್ವಾಮಿ ॥ ೨–೫೭

ಧರ್ಮವನ್ನು ಮರೆತು ಕೇವಲ ಐಹಿತ ಸುಖಗಳಲ್ಲಿ ಮರೆಯುವ ಕೆಲವು ಮೂಢರು ಆ ಕರ್ಮಫಲಗಳನ್ನು ಮುಂದಿನ ಜನ್ಮದಲ್ಲಿ ಅನುಭವಿಸಿ, ಅನಂತರ ಸ್ವಮೋಕ್ಷವನ್ನು ಗಳಿಸುತ್ತಾರೆ. ಆದರೆ ಧರ್ಮವೇ ಕಾಮಾರ್ಥಗಳಿಗಿಂತ ಮೊದಲನೆಯದು ಹಾಗಾಗಿ ಭರತೇಶ ಮುಂತಾದ ಚಕ್ರವರ್ತಿಗಳೆಲ್ಲರೂ ಧರ್ಮವೇ ಮುಖ್ಯವೆಂದು ಧರ್ಮವನ್ನು ಮೊದಲು ಪಾಲಿಸಿ. ಅನಂತರ ಇತರ ಸುಖಭೋಗಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟರು ಎನ್ನುತ್ತಾನೆ.

ಈತನ ಮಾತುಗಳನ್ನು ಕೇಳಿದ ಪಾಂಡ್ಯನೃಪಾಲನ ನಿರ್ಧಾರ ಮತ್ತಷ್ಟು ದೃಢವಾದರೂ ಧರ್ಮವನ್ನು ಸಂರಕ್ಷಿಸಿ ಬಗೆ ಹೇಗೆ? ಎಂದು [illegible] ಚಿಂತಿಸುತ್ತಾನೆ.

ದಾನ ಪೂಜೆಗಳು ಶೀಲೋಪವಾಸಗಳೆಂದು । ನಾನಾ ತೆರನುಂಟು ಧರ್ಮ

ನಾನಿದರೊಳಗಿನ್ನೇನ ಮಾಡಲಿಯೆಂದು । ತಾನು ಯೋಚಿಸಿದ ನರೇಂದ್ರ ॥ ೨–೬೪

ಧರ್ಮದಲ್ಲಿ ದಾನ, ಪೂಜೆ, ಶೀಲೋಪಾವಾಸಗಳೆಂದು ಮೂರು ವಿಧಗಳಿವೆ. ಅದರಲ್ಲಿ ಚೈತ್ಯಾಲಯ ಬಿಂಬಗಳನ್ನು

ಮೂಡಿಸಿ ಪ್ರತಿಷ್ಠಾ ವಿಧಿಗಳನ್ನು ನಡೆಸಿದರೆ, ಜನರು ಸಂತೋಷ ಪಡುತ್ತಾರೆ. ಆದರೆ ಈ ಪಂಚಮ ಕಾಲದಲ್ಲಿ ಲೋಹದ ಪ್ರತಿಮೆಯನ್ನು ಮೂಡಿಸುವುದು ಉಚಿತವಲ್ಲವೆಂದು ತಾನು ಶಿಲೆಯಿಂದಲೇ ಬಿಂಬವನ್ನು ತಿದ್ದಿಸಿದರೆ ಆ, ಮೂರ್ತಿಯೊಂದಿಗೆ ತನ್ನ ಹೆಸರೂ ಚಿರಸ್ಥಾಯಿಗೊಳ್ಳುವುದೆಂದು ಯೋಚಿಸುತ್ತಾನೆ. ಕೊನೆಗೆ ಪಾಂಡ್ಯ ನೃಪಾಲ ಶಿಲಾ ಪ್ರತಿಮೆಯನ್ನು ನಿರ್ಮಿಸಿ ತನ್ನ ಅರಮನೆಯ ಹತ್ತಿರದ ಶಿಲಾಫಟಕದಲ್ಲಿ ಪ್ರತಿಷ್ಠಾಪಿಸುವುದೆಂದು ತೀರ್ಮಾನಿಸಿ ಈ ವಿಚಾರವನ್ನು ತನ್ನ ಗುರುಗಳಲ್ಲಿ ಹೇಳಿ ಅವರಿಂದ ಆಶೀರ್ವಾದ ಸಲಹೆಗಳನ್ನು ಪಡೆಯುತ್ತಾನೆ. ಅನಂತರ ಆ ಶಿಲಾಫಟಕವನ್ನು ಜಲ ಗಂಧಾಕ್ಷತೆ, ಪುಷ್ಪ, ನೈವೇದ್ಯಗಳಿಂದ ಭಕ್ತಿಪೂರ್ವಕವಾಗಿ ಅರ್ಚಿಸುತ್ತಾನೆ. ಮತ್ತು ಯೋಚಿಸಿದ ಕೆಲಸ ಸುಸೂತ್ರವಾಗಿ ನೆರವೇರುವ ತನಕ ಪ್ರತಿದಿನ ಮುನಿಗಳಿಗೆ ಭಿಕ್ಷೆ ನೀಡದೆ ತಾನು ಊಟ ಮಾಡಲಾರನೆಂದು ವ್ರತ (ಹರಕೆ)ವನ್ನು ಕೈಗೊಳ್ಳುತ್ತಾನೆ.

ಹೀಗಿರಲು ರಾಜನ ನಿರೀಕ್ಷೆಯಂತೆ ಮುನಿಗಳು ಬಂದಾಗ ಅರಸನು ಅತ್ಯಂತ ಸಂಭ್ರಮ, ಭಕ್ತಿಪೂರ್ವಕವಾಗಿ ಆಹಾರ ದಾನ ನೀಡಿ ಅವರ ಸೇವೆಗೈಯುತ್ತಾನೆ. ಸಂತುಷ್ಟರಾದ ಮುನಿಗಳು ಪಾಂಡ್ಯನೃಪಾಲನಿಗೆ "ಅಕ್ಷಯದಾನ ಸತ್ಫಲ ಮಸ್ತು', ಪಂಚಮ ಗತಿಸಿದ್ಧಿರಸ್ತು" ಎಂದು ಆಶೀರ್ವದಿಸುತ್ತಾರೆ. ಅನಂತರ ರಾಜ, ಮುನಿಗಳಿಗೆ ದಾನ ನೀಡಿ ಉಳಿದ ಶೇಷಾನ್ನವನ್ನು ತನ್ನ ಪತ್ನಿ (ರಾಣಿಯರು) ಮಕ್ಕಳು, ಅಳಿಯಂದಿರ ಜೊತೆಗೂಡಿ ಸಂಭ್ರಮದಿಂದ ಸ್ವೀಕರಿಸುವಲ್ಲಿಗೆ ಎರಡನೇ (ಅಧ್ಯಾಯ) ಸಂಧಿಯು ಕೊನೆಗೊಳ್ಳುತ್ತದೆ.

ಮೂರನೆಯ ಸಂಧಿ – ಗೊಮ್ಮಟನ ಕೆತ್ತನೆ – ಪ್ರತಿಷ್ಠಾಪನೆ

ಧರ್ಮ, ಅರ್ಥ, ಕಾಮಗಳಲ್ಲಿ ಪ್ರಮುಖವಾಗಿ ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಗೊಮ್ಮಟಸ್ವಾಮಿಯ ಶಿಲಾಮೂರ್ತಿಯನ್ನು ಕೆತ್ತಿಸುವ ಸಲುವಾಗಿ ಪಾಂಡ್ಯನೃಪಾಲ ಬೇರೆ ಬೇರೆ ಕಡೆಗಳಿಂದ ಶ್ರೇಷ್ಠ ಶಿಲ್ಪಿಗಳನ್ನು (ಕರೆಯಿಸುತ್ತಾನೆ) "ಬರಮಾಡಿಕೊಂಡು .... ಸುವಿವೇಕದಿಂದ ಗುಮ್ಮಟ ಸ್ವಾಮಿಯ ಚೆಲ್ವಿನವ ಯವಗಳ ತಿದ್ದಬೇಕು" (೩–೩) ಎಂದು ದಶದಿಕ್ಕುಗಳಲ್ಲಿ ಇದರ ಕೀರ್ತಿ ಪಸರಿಸುವಂತೆ ವಿವೇಕದಿಂದ ಗೊಮ್ಮಟ ಸ್ವಾಮಿಯ ವಿಗ್ರಹವನ್ನು ತಿದ್ದಿಕೊಡಬೇಕೆಂದು ತನ್ನ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಆಗ ಒಬ್ಬ ಶಿಲ್ಪಿಯು ಭರತೇಶನು ಪೌದನಪುರದಲ್ಲಿ ಮರಕಡಮಣಿಯಿಂದ ಮೂರುಲೋಕ ಮೆಚ್ಚುವಂತೆ ತಿದ್ದಿಸಿದ್ದಾನೆ. ಚಾವುಂಡರಾಯನು ಬೆಳಗೊಳದಲ್ಲಿ ಗೊಮ್ಮಟ ಮೂರ್ತಿಯನ್ನು ಕೆತ್ತಿಸಿ ಪ್ರಖ್ಯಾನಾಗಿದ್ದಾನೆ. ಹಾಗೇ ನಿನ್ನ ಕೀರ್ತಿಯು ಸಹ ಮೂರು ಲೋಕದಲ್ಲಿ ಬೆಳಗುವ ಹಾಗೆ ಶಿಲ್ಪವನ್ನು ತಿದ್ದಿಸಬೇಕು ಎಂದು ತನ್ನ ಅಭಿಪ್ರಾಯವನ್ನು ತಿಳಿಸುತ್ತಾನೆ.

"ಮೂರ್ತಿಯೊಳಗೆ ಚೆಲ್ವಿಗೆ ಪುಟ್ಟಿದಲ್ಲದೆ । ಕೀರ್ತಿ ನಿಲ್ಲದು ಜಗದೊಳಗೆ
ಕೀರ್ತಿಗೆ ನೀಗೆ ಕಾರಣವೆಂದವನೊಳು । ಕೂರ್ತು ನುಡಿದನಾ ನೃಪಲೆ ॥ ೩–೧೦

ಅನಂತರ ರಾಜ ಬ್ರಾಹ್ಮಣರನ್ನು, ಜೋಯಿಸರನ್ನು ಕರೆಯಿಸಿ ಒಂದು ಶುಭ ಮುಹೂರ್ತದಲ್ಲಿ ಮೂರ್ತಿಯನ್ನು ಕೆತ್ತಿಸುವ ಕೆಲಸಕ್ಕೆ ಅಪ್ಪಣೆ ನೀಡುತ್ತಾನೆ. ಹೀಗೆ ಒಂದು ಹಂತದವರೆಗೆ ಮೂರ್ತಿ ಕೆತ್ತನೆ, ಆದ ನಂತರ ಆ ಮೂರ್ತಿಯನ್ನು ಬೆಟ್ಟಕ್ಕೆ ಕೊಂಡೊಯ್ದು ಪ್ರತಿಷ್ಠಾಪಿಸುವ ಯೋಜನೆಯನ್ನು ರಾಜ ಕೈಗೊಳ್ಳುತ್ತಾನೆ.

ಇಪ್ಪತ್ತು ಗಾಲಿಗಳಿಂದ ಸೊಬಗನಾಂ । ತೊಪ್ಪುವ ಬಂಡಿಯನಾಗ
ಉಪ್ಪರವಾಗಿ ಮಾಡಿಸಿದನು ಕರ್ಬೊನ್ನ। ದಪ್ಪದ ಕೀಲ್ಗಳಿಂ ಬಳಸಿ ॥ ೩–೪೦
ಹತ್ತು ಸಾವಿರ ಸನ್ನೆಗಳಿಂದ ಬಿಂಬವ । ನೆತ್ತಿಸಿ ಬಂಡಿಗೈದಿಸಿದ ।
ಕತ್ತದ ಮಿಣಿಗಳ ಜೋಡಿಸಿ ಜನರ ತಾ। ನಿತ್ತರದಲಿ ನಿಲ್ಲಿಸಿದನು ॥ ೩–೪೧

ಇಪ್ಪತ್ತು ಗಾಲಿಗಳುಳ್ಳ ದೊಡ್ಡ ಬಂಡಿಯನ್ನು ತಯಾರಿಸಿ ಅದಕ್ಕೆ ಕಬ್ಬಿಣದ ಕೀಲುಗಳನ್ನು ಜೋಡಿಸಿ, ಒಂದು ಹಂತದವರೆಗೆ ಕೆಲಸ ನಡೆದ ಮೂರ್ತಿಯನ್ನು ೧೦ ಸಾವಿರ ಸನ್ನೆಗಳನ್ನು ಬಳಸಿ ಆ ಬಂಡಿಯಲ್ಲಿರಿಸುತ್ತಾನೆ. ಮತ್ತು ಆ ಬಂಡಿಗೆ ಕತ್ತದ ದಪ್ಪ ಹಗ್ಗವನ್ನು ಕಟ್ಟಿ ಎಳಿಯುವ ವ್ಯವಸ್ಥೆಯನ್ನೂ ಮಾಡುತ್ತಾನೆ.

"ಅರಸು ಪ್ರಧಾನರು ದಂಡನಾಯಕರು ಮ । ತ್ತರಿಕೆಯ ರಾಜಮನ್ನೆಯರು॥
ಕರಣಿಕ ಮುಂತಾದ ಪ್ರಜೆ ಪರಿವಾರಗ । ಳ್ಬೆರಸಿ ಪಿಡಿದ ರಾ ಮಿಣಿಯ॥೩–೪೨

ಅರಸ, ಪ್ರಧಾನ ದಂಡನಾಯಕ, ರಾಜಮನ್ನೆಯರು ಕರಣಿಕರೂ, ಪ್ರಜೆಗಳು ಹೀಗೆ ಒಟ್ಟು ಪರಿವಾರದವರು ಒಟ್ಟಾಗಿ ತಮ್ಮಲ್ಲಿ ಯಾವುದೇ ಬೇಧ, ಭಾವ ಮೈಮನಸ್ಸನ್ನಿರಸದೆ ಸಕ್ರಿಯರಾಗಿ ಪಾಲ್ಗೊಳ್ಳುತ್ತಾರೆ. ಅಲ್ಲದೆ ಮದ್ದಾನೆಗಳಿಂದಲೂ ಈ ಬಂಡಿಯನ್ನು ನೂಕಿಸುವ ವ್ಯವಸ್ಥೆಯನ್ನು ರಾಜ ಮಾಡಿಸುತ್ತಾನೆ.

ಕೆಲಸ ಮಾಡುತ್ತಿದ್ದ ಜನರ ಹಸಿವು, ಬಾಯಾರಿಕೆ ಆಯಾಸವನ್ನು ನಿವಾರಿಸಲು ಜನರಿಗೆ ಕಡುಬು, ಹೂರಿಗೆ, ತುಪ್ಪ, ಗಾರಿಗೆ,ಕಜ್ಜಾಯ ಶ್ರೀಗಂಧ ಇತ್ಯಾದಿ ಆಹಾರ ಪದಾರ್ಥಗಳನ್ನು ನೀಡುವ ವ್ಯವಸ್ಥೆ ಮಾಡುತ್ತಾನೆ.

ಹೀಗೆ ಒಂದು ತಿಂಗಳ ಪರ್ಯಂತ ಬಂಡಿಯನ್ನು ಬೆಟ್ಟದ ಮೇಲೆ ಎಳೆಯಿಸಿ ಬೆಟ್ಟದ ತುದಿಗೆ ಕೊಂಡೊಯ್ಯುತ್ತಾರೆ. ಅನಂತರ ಆ ಮೂರ್ತಿಯನ್ನು ಚಪ್ಪರ ನಿರ್ಮಿಸಿ ಅದರಲ್ಲಿ ಮೂರ್ತಿಯನಿಟ್ಟು ಉಳಿದ ಕೆಲಸಗಳನ್ನು ಮಾಡಿಸುವ ವ್ಯವಸ್ಥೆಯನ್ನು ರಾಜ ಮಾಡುತ್ತಾನೆ. ಹೀಗೆ ಒಂದು ವರ್ಷದ ತರುವಾಯ ಸುಂದರವಾದ ಮೂರ್ತಿಯು ಸಿದ್ಧಗೊಳ್ಳುತ್ತದೆ.

ಆ ಸುಂದರವಾದ ಮೂರ್ತಿಯನ್ನು ಕಂಡು ಸಂತೋಷ ಪಟ್ಟ ರಾಜ ಶಿಲ್ಪಿಗಳಿಗೆ ಉಡುಗೊರೆಯನ್ನು ನೀಡಿ ಸನ್ಮಾನಿಸುತ್ತಾನೆ. ಕೊನೆಗೆ ಮೂರ್ತಿಯ ಪ್ರತಿಷ್ಠೆ ಮಾಡಲು ಬೆಟ್ಟದಲ್ಲಿ ಒಂದು ಸೂಕ್ತ ಸ್ಥಳದ ಶೋಧನೆ ನಡೆಸಿ ಬೆಟ್ಟದ ಮಧ್ಯದಲ್ಲಿ ವಿಗ್ರಹ ನಿಲ್ಲುವಂತೆ ಪಂಚಾಂಗ ನಿರ್ಮಿಸುತ್ತಾನೆ. ಮತ್ತು ಒಂದು ಶುಭ ಮುಹೂರ್ತದಲ್ಲಿ ವಾದ್ಯಘೋಷಗಳ

ಸಂಭ್ರಮದಲ್ಲಿ ಕವಿ, ಗಮಕಿ, ಪುರದ ಜನರ, ಜೋತಿಷ್ಯರ, ಪರಿವಾರದವರ ಸಮ್ಮುಖದಲ್ಲಿ ರಾಜ ವಾಸ್ತುಪೂಜೆ, ಧಾಮಶುದ್ಧಿ, ಬಿಂಬಶುದ್ಧಿ, ನವಗ್ರಹ ಶಾಂತಿ ಮುಂತಾದ ಪ್ರತಿಷ್ಠಾ ಕಾರ್ಯಗಳ್ಳನ್ನು ನೆರವೇರಿಸುತ್ತಾನೆ.

ನಾಲ್ಕನೆಯ ಸಂಧಿ : ಮಾನವ ವಿಕಾಸ

ಶೀರ್ಷಿಕೆಯೇ ಹೇಳುವಂತೆ ಈ ಸಂಧಿಯು ಸುಮಾರು ೧೦ ಜನಮನುಗಳನ್ನು ಕುರಿತು ತಿಳಿಸುತ್ತದೆ. ಕವಿ ಪೌರಾಣಿಕ ನಂಬಿಕೆಯನ್ನು ತನ್ನ ಕಾವ್ಯದಲ್ಲಿ ತುಂಬಿ ಆ ನಂಬಿಕೆಗಳಿಗೆ ಋಣಿಯಾಗಿದ್ದಾನೆ ಎನ್ನಬಹುದು.

ಧಾರ್ಮಿಕ ಉದ್ದೇಶದಿಂದ ಪ್ರತಿಷ್ಠಾಪಿಸಿದ ಗೊಮ್ಮಟ ಮೂರ್ತಿಗೆ ಶಾಶ್ವತವಾದ ಕ್ರಮಬದ್ಧವಾದ ಪೂಜೆ-ಪುನಸ್ಕಾರಗಳು ನೆರವೇರಬೇಕೆಂದು ಬಯಸಿದ ರಾಜನು, ಗ್ರಾಮ ಸೀಮೆಗಳನ್ನು ಶಾಸನಾಂಕಿತ ಮಾಡಿ ಬಿಟ್ಟುಕೊಟ್ಟು ಪೂಜಾ ವ್ಯವಸ್ಥೇಯನ್ನು ಮಾಡಿಸುತ್ತಾನೆ. ಹೀಗೆ ಪಾಂಡ್ಯ ನೃಪಾಲನು ತನ್ನಿಂದ ನಡೆಸಲ್ಪಟ್ಟ ಈ ಧಾರ್ಮಿಕ ಕೆಲಸದ ಬಗ್ಗೆ ತೃಪ್ತನಾಗಿ ತನ್ನ ಗುರುಗಳ ಬಳಿಗೆ ಬಂದು ಜೈನ ಧರ್ಮದ ಕುಲತಿಲಕನಾದ ಗೊಮ್ಮಟ ಸ್ವಾಮಿಯ ಕಥೆಯನ್ನು ಕೇಳಿ ಆ ಮೂಲಕ ತನ್ನ ಜನ್ಮವನ್ನು ಸಾರ್ಥಕ ಪಡಿಸಬೇಕೆಂದು ಕೇಳಿಕೊಳ್ಳುತ್ತಾನೆ.

ಪ್ರಥಮಾನುಯೋಗ ದೊಳದಿಜಿನೇಶನ । ಕಥೆಯೊಳೀ ಗುಮ್ಮಟ ಜಿನನ
ಕಥೆಯ ನಿರೂಪಿಸಿ ನೀವೆನಗೆಂದರಿ । ಮಥನ ಕುಮಾರ ಪಾಂಡ್ಯೇಂದ ॥ ೪-೧೧

ಪಾಂಡ್ಯ ನೃಪಾಲನ ಅಭಿಲಾಷೆಯಂತೆ ಗುರುಗಳು ಪುರುದೇವ . ಆತನ ಮಕ್ಕಳಾದ ಭರತ, ಬಾಹುಬಲಿಯ ಕಥೆಯನ್ನು ಹೇಳಲು ತೊಡಗುತ್ತಾರೆ.

ಭೋಗ ಭೂಮಿಯ ವ್ಯವಸ್ಥೆಯಲ್ಲಿದ್ದ ಭೂಮಿಯನ್ನು ಕ್ರಮೇಣ ಉಂಟಾಗುವ ಬದಲಾವಣೆ, ಅದಕ್ಕೆ ಭಯಪಡುವ ಜನರನ್ನು ಕುರಿತು ಉಲ್ಲೇಖಿಸುತ್ತಾನೆ. ಪ್ರತಿ ಸನ್ಮತಿ, ಕ್ಷೇಮಂತರ ಮೊದಲಾದವರಿಂದ ತೊಡಗಿ ನಾಭಿರಾಜನವರೆಗಿನ ಮನುಗಳು ಭೂಜನರಿಗೆ ಕೃಷಿ, ಮಕ್ಕಳ ಲಾಲನೆ-ಪಾಲನೆ, ಪಶುಗಳ ರಕ್ಷಣೆ, ಹಿಂಸಾ ಪ್ರಾಣಿಗಳಿಂದ ರಕ್ಷಣೆ,ಈ ಮುಂತಾದ ವಿಷಯಗಳ ಬಗ್ಗೆ ಜನರಿಗೆ ಭೋಧಿಸುವುದನ್ನು ಕುರಿತು ಕವಿ ತಿಳಿಸುತ್ತಾನೆ.

ಮುಂದೆ ಕೊನೆಯ ಮನು ನಾಭಿರಾಜ, ಮರುದೇವಿಯವರಿಗೆ ಭಾವೀ ತೀರ್ಥಂಕರನಾದ ವೃಷಭದೇವನು ಹುಟ್ಟುವನು ಎಂದು ತಿಳಿದ ದೇವೇಂದ್ರನು ಅವರಿಗಾಗಿ ವಿಶ್ವಕರ್ಮನಿಂದ ಸಾಕೇತಪುರವೆಂಬ ಒಂದು ನೂತನ ನಗರವನ್ನು ನಿರ್ಮಿಸಿ ಅಲ್ಲಿನ ಪ್ರಜೆಗಳಿಗೆ ನಾಭಿರಾಜನನ್ನು ಅರಸನನ್ನಾಗಿ ಮಾಡುವಲ್ಲಿ ಈ ಸಂಧಿಯು ಕೊನೆಗೊಳ್ಳುತ್ತದೆ.

ಐದನೆಯ ಸಂಧಿ - ಗರ್ಭಾವತರಣ ಕಲ್ಯಾಣ - ಜನ್ಮಾಭಿಷೇಕ

ಮರುದೇವಿಯ ಗರ್ಭದಲ್ಲಿ ವೃಷಭದೇವನು ಜನಿಸಲಿರುವ ವಿಷಯ ತಿಳಿದ ದೇವತಾಸ್ತ್ರೀಯರು ಆಕೆಯ

ಸೇವೆಗಾಗಿ ಬರುತ್ತಾರೆ. ಮರುದೇವಿಗೆ ನವಮಾಸ ತುಂಬಿ ಒಂದು ಸೂರ್ಯೋದಯದ ಸಮಯದಲ್ಲಿ ಆಕೆ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಈ ಶುಭ ಸುದ್ದಿಯನ್ನು ತಿಳಿದ ದೇವೇಂದ್ರನು ಶಚಿದೇವಿ, ಮತ್ತಿತರ ದೇವತೆಗಳೊಂದಿಗೆ ನಾಭಿರಾಜನ ಅರಮನೆಗೆ ಬರುತ್ತಾರೆ. ಯಾರಿಗೂ ತಿಳಿಯದಂತೆ ಮರುದೇವಿಗೆ ಮಾಯಾ ನಿದ್ರೆಯನ್ನು ಬರಿಸಿ ಆಕೆಯ ಪಕ್ಕದಲ್ಲಿದ್ದ ಜಿನಬಾಲಕನನ್ನು ಎತ್ತಿಕೊಂಡು ಪಾಂಡುಕಶಿಲೆಗೆ ತೆರಳುತ್ತಾರೆ. ದೇವದುಂದುಭಿ, ದೇವಾಂಗನೆಯರ ನರ್ತನ, ಜನ ಜಯ ಘೋಷದ ಸಂಭ್ರಮದೊಂದಿಗೆ ಕ್ಷೀರ ಸಮುದ್ರದ ಪವಿತ್ರ ಜಲವನ್ನು ತಂದು ಜಿನ ಬಾಲಕನ 'ಜನ್ಮ ಕಲ್ಯಾಣ' ವನ್ನು ದೇವೇಂದ್ರಾದಿಗಳು ಸಂಭ್ರಮದಿಂದ ನಡೆಸುತ್ತಾರೆ.

ಜಲಗಂಧಾಕ್ಷತೆ ಪುಷ್ಪ ನೈವೇದ್ಯ ದೀಪಾ । ವಲಿ ಧೂಪ ಸತ್ಫಲದಿಂದ ॥

ಕುಲಿಶಧರನು ಜಿನರಾಜನ ಶ್ರೀಪಾದ । ನಳಿನಗಳನು ಪೂಜಿಸಿದನು ॥ ೫-೧೦೬

ಮತ್ತು ಭಕ್ತಿಭಾವದಿಂದ ದೇವೇಂದ್ರನು ಭಾವೀ ತೀರ್ಥಂಕರನ ಪಾದಗಳನ್ನು ಜಲ-ಗಂಧಾಕ್ಷತೆ, ಪುಷ್ಪಗಳಿಂದ ಪೂಜಿಸುತ್ತಾನೆ. ಹೀಗೆ ಕಲ್ಯಾಣೋತ್ಸವದ ನಂತರ ಆ ಜಿನ ಬಾಲಕನನ್ನು ದೇವೇಂದ್ರನು ಪುನಃ ಸಾಕೇತಪುರಕ್ಕೆ ಕೊಂಡೊಯ್ಯುತ್ತಾನೆ. ಇದ್ಯಾವುದರ ಅರಿವೇ ಇಲ್ಲದ ನಾಭಿರಾಜನು ತನ್ನ ಮಗುವಿನ ಜನ್ಮಕಲ್ಯಾಣಕ್ಕಾಗಿ ಇಡೀ ಸಾಕೇತಪುರವನ್ನೇ ಸುಂದರವಾಗಿ ಅಲಂಕರಿಸುತ್ತಾನೆ. ಅದನ್ನು ಕಂಡು ಸ್ವತಃ ದೇವೇಂದ್ರನೇ ಅಚ್ಚರಿ ಪಡುತ್ತಾನೆ. ಕೊನೆಗೆ ಮಾಯಾನಿದ್ರೆಯಿಂದ ಎಚ್ಚೆತ್ತ ಮರುದೇವಿಯು ಮಗುವಿನ ಮುಖವನ್ನು ಕಂಡು ಸಂತೋಷ ಪಡುತ್ತಾ ಮತ್ತು ಮಗುವಿನ ಸ್ನಾನ, ಅಲಂಕಾರ, ಭೋಜನ, ಅನುಲೇಪನ ಮುಂತಾದವುಗಳಿಗೆ ವ್ಯವಸ್ಥೆ ಮಾಡುವಲ್ಲಿ ಈ ಸಂಧಿಯು ಸಂಪೂರ್ಣಗೊಳ್ಳುತ್ತದೆ.

ಆರನೆಯ ಸಂಧಿ : ರಾಜ್ಯಾಭಿಷೇಕ - ಭರತ - ಬಾಹುಬಲಿಯರ ಜನನ

ಜಿನಬಾಲಕನಾದ ವೃಷಭದೇವನು ತನ್ನ ಸಹಜ ಬಾಲಲೀಲೆಯೊಂದಿಗೆ ತೊದಲು ನುಡಿಯೊಂದಿಗೆ ಇಡೀ ಸಾಕೇತಪುರಕ್ಕೆ ಸಂತೋಷ, ಸಂಭ್ರಮವನ್ನು ಉಂಟು ಮಾಡುತ್ತ, ಬೆಳೆದು ದೊಡ್ಡವನಾದ· ಆದಿನಾಥನ ರೂಪು, ಲಾವಣ್ಯ, ಯೌವನವನ್ನು ಕಂಡ ನಾಭಿರಾಜನು ಮಗನಿಗೆ ಮದುವೆ ಮಾಡುವ ಯೋಚನೆಯನ್ನು ಕೈಗೊಳ್ಳುತ್ತಾನೆ.

ಭಾಪೆಯಶಸ್ವತೀ ದೇವಿ ಸುನಂದಾ। ದೇವಿಯರೆಂಬ ಕನ್ನೆಯರ ॥

ಆವಿಧಿಯಿಂದ ಮದುವೆಯ ಮಾಡಿಸಿದನಾ । ದೇವಗೆ ನಾಭಿರಾಜೇಂದ್ರ ॥ ೬-೨೭

ಆದಿದೇವನ ವಿವಾಹವು ಕಚ್ಛಾ ಮಹಾಕಚ್ಛರೆಂಬ ರಾಜರ ತಂಗಿಯರಾದ ಯಶಸ್ವತಿದೇವಿ ಹಾಗೂ ಸುನಂದಾದೇವಿಯರೊಂದಿಗೆ ನಡೆಯುತ್ತದೆ. ಯಶಸ್ವತಿದೇವಿ ಭರತ, ಬ್ರಾಹ್ಮೀಯರಿದಂತೆ ನೂರುಜನ ಮಕ್ಕಳಿಗೆ ಹಾಗೂ ಸುನಂದ ದೇವಿ ಬಾಹುಬಲಿ ಮತ್ತು ಸೌಂದರಿ ಎಂಬ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಹೀಗೆ ಬೆಳೆದು ದೊಡ್ಡವರಾದ

ಮಕ್ಕಳಿಗೆ ಆದಿದೇವನು ಸಮಾನವಾದ ಹಾಗೂ ಶ್ರೇಷ್ಠವಾದ ವಿದ್ಯೆಗಳನ್ನು ಕಲಿಸಿ ತನ್ನ ಸಾಮ್ರಾಜ್ಯವನ್ನು ಪ್ರಜೆಗಳನ್ನು ನಿಶ್ಚಿಂತೆ. ದಕ್ಷತೆಯಿಂದ ರಾಜ್ಯಭಾರ ನಡೆಸಲಿ ಎಂದು ಹೇಳುವಲ್ಲಿ ಈ ಕಥಾಭಾಗವು ಕೊನೆಗೊಳ್ಳುತ್ತದೆ.

ಏಳನೆಯ ಸಂಧಿ : ಪರಿನಿಷ್ಕರಮಣ ಕಲ್ಯಾಣ

ಇದು ವೃಷಭದೇವನಿಗೆ ವೈರಾಗ್ಯ ಉಂಟಾಗುವ ಕಥೆಯನ್ನು ಒಳಗೊಂಡ ಭಾಗವಾಗಿದೆ.

ತನ್ನ ಅವಧಿ ಜ್ಞಾನದಿಂದ ವೃಷಭದೇವನಿಗೆ ನಿಷ್ಕ್ರಮಣ ಸಮೀಪಿಸಿತೆಂದು ತಿಳಿದ ದೇವೇಂದ್ರನು ಆತನಿಗಾಗಿ ಒಂದು ಸಭೆಯನ್ನು ಏರ್ಪಡಿಸುವನು. ಅದರಲ್ಲಿ ನರ್ತಕಿಯಾಗಿದ್ದ 'ನೀಲಾಂಜನೆ' ಎನ್ನುವ ದೇವತೆಯ ಆಯುಷ್ಯಾವಸಾನವಾಗುವುದು. ತಕ್ಷಣ ಯಾರಿಗೂ ರಸಭಂಗವಾಗದಿರಲೆಂದು ಇಂದ್ರ ಅದನ್ನು ಸರಿಪಡಿಸುವುದು. ಕ್ಷಣ ಮಾತ್ರದಲ್ಲಾಗುವ ಬದಲಾವಣೆಯನ್ನು ಗ್ರಹಿಸಿದ ಆದಿದೇವನ ಒಳಗಣ್ಣು ತೆರೆಯುವುದನ್ನು ಕುರಿತು ಈ ಕಥಾಭಾಗ ಚಿತ್ರಿಸುತ್ತದೆ.

ಈ ಸಂಸಾರ ಶರೀರ ಭೋಗಗಳೆಲ್ಲ । ಈ ಸುದತಿಯ ರೂಪಿನಂತೆ ॥
ಆಸಕ್ತಿಯನು ಪುಟ್ಟಿಸಿ ಬಯಲಪ್ಪವು । ಲೇಸಿಲ್ಲವೆಂದು ಭಾವಿಸಿದ ॥ ೭–೩೭

ಇನ್ನು ಮುಂದೆ ತಾನು ಸಂಸಾರ ಸಾಗರದಲ್ಲಿ ಈಜುವುದು ಸಾಧ್ಯವಿಲ್ಲ ಎಂದು ಅರಿತ ವೃಷಭದೇವನು ವೈರಾಗ್ಯವನ್ನು ತಾಳುತ್ತಾನೆ. ರಾಜ್ಯವನ್ನು ತನ್ನ ಎಲ್ಲಾ ಮಕ್ಕಳಿಗೆ ಸಮಾನವಾಗಿ ಹಂಚಿ, ರಾಜ್ಯಭಾರದ ಜವಾಬ್ದಾರಿಯನ್ನು ನಿರ್ವಹಿಸಿಕೊಟ್ಟು, ಸಂಸಾರ, ರಾಜ್ಯ, ರಾಜ, ಪದವಿಯನ್ನು ತೊರೆಯುತ್ತಾನೆ. ಅನಂತರ ದೇವೇಂದ್ರಾದಿಗಳು ಸಂಸಾರದ ಭವ ಬಂಧನದಿಂದ ಮುಕ್ತನಾದ ಆದಿದೇವನಿಗೆ ಪರಿನಿಷ್ಕ್ರಮಣ ಕಲ್ಯಾಣವನ್ನು ನಡೆಸುತ್ತಾರೆ. ಹೀಗೆ ಆದಿದೇವನು ಕಠಿಣ ತಪಸ್ಸನ್ನು ಕೈಗೊಂಡು ಭಿಕ್ಷಗೆ ಹೋಗುವಲ್ಲಿಗೆ ಈ ಸಂಧಿಯು ಮುಕ್ತಾಯವಾಗುತ್ತದೆ.

ಕೇವಲ ಜ್ಞಾನ ಕಲ್ಯಾಣ – ಎಂಟನೆಯ ಸಂಧಿ :

ಇದು ಜೈನ ಸಂಸ್ಕೃತಿಯಲ್ಲಿ ಒಂದಾದ ಅಕ್ಷಯ ತೃತೀಯ ಹಬ್ಬದ ಆಚರಣೆಗೆ ಮೂಲಕಾರಣವನ್ನು ತಿಳಿಸುವ ಕತೆಯಾಗಿದೆ. ಮೋಕ್ಷ ಸಂಪಾದಿಸುವ ಸಲುವಾಗಿ ಕಠಿಣ ತಪಸ್ಸಿನ ನಂತರ ಭಿಕ್ಷೆಗೆ ಹೊರಟಂತಹ ಆದಿದೇವನಿಗೆ ಶ್ರೇಯಾಂಸ ಮತ್ತು ಸೋಮಪ್ರಭ ಎಂಬ ಸಹೋದರರು ವಿಧಿವತ್ತಾಗಿ ಆಹಾರ ದಾನವನ್ನು ನೀಡಿ ಅವನ ಸೇವೆಯನ್ನು ಮಾಡುತ್ತಾರೆ. ಇದರಿಂದ ಸಂತುಷ್ಟನಾದ ಆದಿದೇವನು ಅವರಿಗೆ ಆಶೀರ್ವದಿಸುತ್ತಾನೆ.

ಅಕ್ಷಯಂ ದಾನ ಫಲವು ನಿಮಗಸ್ತೆಂ । ದಾಕ್ಷಿತಿಪರನು ಪರಸಲು ॥
ಅಕ್ಷಯ ತದಿಗೆ ಯೆಂದಂದಿದಾದುದು । ಯೀಕ್ಷಿತಿಯೊಳು ಪುಣ್ಯದಿವಸ ॥ ೮–೨೩

ಹೀಗೆ ಶ್ರೇಯಾಂಸ, ಸೋಮಪ್ರಭರಿಗೆ ಆದಿದೇವನು ಮಾಡಿದ 'ಅಕ್ಷಯ ದಾನ ಫಲಮಸ್ತು' ಎಂಬ ಆಶೀರ್ವಾದದಿಂದ ಅಂದು ಆಚರಿಸಲ್ಪಟ್ಟ ಅಕ್ಷಯ ತದಿಗೆಯ ಆಚರಣೆಯನ್ನು ಇಂದಿಗೂ ನಡೆಸಲಾಗುತ್ತಿದೆ ಎನ್ನಬಹುದು.

ಹೀಗೆ ಹಲವು ಕಾಲದವರೆಗೆ ತಪಸ್ಸಿನಲ್ಲಿ ತೊಡಗಿ ದ ವೃಷಭದೇವನು ಕೇವಲ ಜ್ಞಾನವನ್ನು ಸಂಪಾದಿಸುತ್ತಾನೆ. ಅದನ್ನು ತಿಳಿದ ದೇವೇಂದ್ರನು ವೃಷಭ ದೇವನಿಗೆ 'ಕೇವಲ ಜ್ಞಾನ ಕಲ್ಯಾಣ' ವನ್ನು ನಡೆಸುತ್ತಾನೆ.

ಇದೇ ಸಂದರ್ಭದಲ್ಲಿ ಭರತನ ಆಯುಧಾಗಾರದಲ್ಲಿ ಚಕ್ರರತ್ನದ ಉದಯ, ಆತನ ರಾಣಿಗೆ ಪುತ್ರೋತ್ಸವ, ವೃಷಭದೇವನಿಗೆ ಕೇವಲ ಜ್ಞಾನಪ್ರಾಪ್ತಿ-ಈ ಮೂರು ಶುಭ ಸುದ್ದಿಗಳು ಒಂದೇ ಕಾಲಕ್ಕೆ ಸಂಭವಿಸುತ್ತದೆ. ಭರತನು ತನ್ನ ತಂದೆಯ ದರ್ಶನ, ಆಶೀರ್ವಾದವನ್ನು ಪಡೆಯುತ್ತಾನೆ. ಆದಿದೇವನು ದೀಕ್ಷೆ ಪಡೆದು ಮಾಳವ ಮಗಧ, ಕಾಶ್ಮೀರ, ಕರ್ನಾಟಕ ಮುಂತಾದ ದೇಶಗಳಿಗೆ ಸಂಚರಿಸಲು ಹೊರಡುತ್ತಾನೆ.

ಒಂಭತ್ತನೆಯ ಸಂಧಿ : ಭರತೇಶನ ದಿಗ್ವಿಜಯ

ತನ್ನ ಆಯುಧಾಗಾರದಲ್ಲಿ ಉದಯಿಸಿದ ಚಕ್ರರತ್ನಕ್ಕೆ ಭರತನು ಭಕ್ತಿಯಿಂದ ಪೂಜಿಸಿ ದಿಗ್ವಿಜಯಕ್ಕೆ ಹೋಗುವುದಾಗಿ ಆದೇಶ ನೀಡುತ್ತಾನೆ. ಭರತನ ದಿಗ್ವಿಜಯದ ಸಿದ್ಧತೆ ಭರದಿಂದ ನಡೆಯುತ್ತದೆ. ಕೊನೆಗೆ ಒಂದು ಶುಭ ಮುಹೂರ್ತದಲ್ಲಿ ಭರತನ ದಿಗ್ವಿಜಯದ ಯಾತ್ರೆಯನ್ನು ಬೆಳೆಸುತ್ತಾನೆ.ಮುಂದುಗಡೆ ಚಕ್ರರತ್ನ ಇದ್ದು, ಅದರ ಹಿಂದೆ ಭರತನ ಚತುರಂಗ ಸೈನ್ಯ, ಅಂತಪುರದ ರಾಣಿಯರು, ಪುರದವರು, ಸೇವಕರು ಹೀಗೆ ಭರತನ ಪರಿವಾರವೇ ಭರತನೊಂದಿಗೆ ದಿಗ್ವಿಜಯಕ್ಕೆ ಹೊರಡುತ್ತದೆ.

ಪೂರ್ವಾಭಿಮುಖವಾಗಿ ಚಕ್ರರತ್ನದ ಕಾಂತಿ । ಪೋಗುತ ಗಗನ ದೊಳಗೆಯ್ದೆ ॥
ಸರ್ವಸನ್ನಾಹದಿ ಚತುರಂಗ ಬಲಗೂಡಿ । ಸಾರ್ವಭೌಮನು ತೆರಳಿದನು ॥ ೯– ೩೦

ಪೂರ್ವ ದಿಕ್ಕಿನಲ್ಲಿ ಪ್ರಕಾಶಮಾನವಾದ ಕಾಂತಿಯನ್ನು ಹೊರಡಿಸುತ್ತಾ, ಚಕ್ರರತ್ನವು ಗಗನದಲ್ಲಿ *ಸಂಚರಿಸುತ್ತಿತ್ತು* ಭರತನ ಚತುರಂಗ ಸೈನ್ಯವು ಪೂರ್ವ ದಿಕ್ಕಿನತ್ತ ಚಲಿಸುತ್ತಿದ್ದ ಚಕ್ರರತ್ನವನ್ನು ಹಿಂಬಾಲಿಸಿಕೊಂಡು ಹೋಗುತ್ತಿತ್ತು. ಹೀಗೆ ಭರತನ ದಿಗ್ವಿಜಯದ ಯಾತ್ರೆಯೊಂದಿಗೆ ಒಂಭತ್ತನೆಯ ಅಧ್ಯಾಯ (ಸಂಧಿ) ಕೊನೆಗೊಳ್ಳುತ್ತದೆ.

ಹತ್ತನೆಯ ಸಂಧಿ : ಮಾಗಧ ಗರ್ವಭಂಗ

ತನುವೆಂಬ ದೇಗುಲದೊಳಗೆ ತನ್ನಾತ್ಮವ । ಜಿನನೆಂದು ಭಾವಿಸಿ ಬಳಿಕ ॥
ತನುವಿಸಿಂದಗಲಿದ ಸಿದ್ಧಾತ್ಮತಾನೆಂದು । ನೆನೆದನು ಭಾವಶುದ್ಧಿಯೊಳು ॥ ೧೦–೬

ಭರತೇಶನು ಸ್ನಾನ ಸಂಧ್ಯಾವಂದನೆಯನ್ನು ಮುಗಿಸಿ ಆತ್ಮಧ್ಯಾನದಲ್ಲಿದ್ದು ತನ್ನ ಪೂಜಾವಿಧಿಗಳನ್ನು ನಿಷ್ಠೆಯಿಂದ ಆಚರಿಸುತ್ತಾನೆ. ಪುನಃ ಭರತನ ದಿಗ್ವಿಜಯ ಯಾತ್ರೆಯನ್ನು ಮುಂದುವರಿಸುತ್ತಾನೆ. ಹೀಗೆ ಸಮುದ್ರದ ಕಡೆಗೆ

ಮುಂದುವರಿಯುತ್ತ ಬಂದ ಭರತನಿಗೆ ಮಾಗಧನ ಕೋಟೆ ಕಾಣುತ್ತದೆ. ಭರತ ಒಂದು ಬಾಣದಲ್ಲಿ ತನಗೆ ಶರಣಾಗುವಂತೆ ಓಲೆಯನ್ನು ಬರೆದು. ಆ ಬಾಣವನ್ನು ಮಾಗಧನ ಕೋಟೆಗೆ ಹೂಡುತ್ತಾನೆ. ಕೋಪಗೊಂಡ ಮಾಗಧ ಅಹಂಕಾರ, ದರ್ಪದಿಂದ ತಾನು ಭರತನ ವಿರುಧ್ಧ ಯುದ್ದ ಹೂಡಿ ಆತನನ್ನು ಸೋಲಿಸುವುದಾಗಿ ಯುದ್ಧಕ್ಕೆ ಸಿಧ್ಧನಾಗುತ್ತಾನೆ.

ಆಗ ಕುಲವೃದ್ಧರು ಮಾಗಧನನನ್ನು ತಡೆದು ಭರತನ ಶೌರ್ಯದ ಕುರಿತು ತಿಳಿಹೇಳಿ ಆತನಿಗೆ ಶರಣಾಗುವಂತೆ ಪ್ರೇರೇಪಿಸುತ್ತಾನೆ. ಹಿರಿಯರ ಹಿತನುಡಿಗೆ ಮಾಗಧನ ಗರ್ವ ಕರಗಿ ಸೋಲನ್ನೊಪ್ಪಿಕೊಂಡು ಭರತನಿಗೆ ಕಪ್ಪ ಕಾಣಿಕೆಯನ್ನು ನೀಡಿ ಶರಣಾಗುತ್ತಾನೆ.

ಹನ್ನೊಂದನೆಯ ಸಂಧಿ : ವಜ್ರಕವಾಟ ಭೇದನ

ದಕ್ಷಿಣ ದಿಕ್ಕಿಗೆ ತನ್ನ ಪರಿವಾರದೊಂದಿಗೆ ದಿಗ್ವಿಜಯಕ್ಕೆ ಬಂದ ಭರತನಿಗೆ ಅಲ್ಲಿ ವರತ,ವ್ಯಂತ್ತರ,ಪ್ರಭಾಸುರರು ಕಪ್ಪ ಕಾಣಿಕೆಯನ್ನು ನೀಡಿ ಶರಣಾಗುತ್ತಾರೆ. ಅನಂತರ ಭರತ ಅಲ್ಲಿಂದ ವಜ್ರಕವಾಟದ ಬಳಿ ಬಂದಾಗ ಅಲ್ಲಿ ಆವರ್ತ ಮತ್ತು ಚಿಲಾತ ರಾಜರು ಎದುರಾಗುತ್ತಾರೆ. ಘೋರ ಯುಧ್ಧನಡೆದರೂ ಅವರಿಗೆ ಭರತನನ್ನು ಸೋಲಿಸುವುದು ಅಸಾಧ್ಯವಾದಾಗ ಇಬ್ಬರೂ ಅವರ ಕುಲದೈವವಾದ ಕಾಲಮುಖ ಮತ್ತು ಮೇಘಮುಖರಿಗೆ ಮೊರೆ ಹೋಗುತ್ತಾರೆ. ಕೊನೆಗೆ ಈ ದೈವಗಳಿಗೂ ಭರತನನ್ನು ಸೋಲಿಸಲಾಗದೆ ದೈವಗಳೇ ಭರತನಿಗೆ ಶರಣಾಗುತ್ತವೆ. ಆವರ್ತ, ಚಿಲಾತರೂ ಸೆರೆಯಾಗುತ್ತಾರೆ.

ಅನಂತರ ಭರತನ ಸೈನ್ಯವು ವೃಷಭ ಪರ್ವತದ ಕಡೆ ತೆರಳುತ್ತದೆ. ಅಲ್ಲಿನ ಬೃಹತ್ತಾದ ಶಿಖರವನ್ನು ಕಂಡ ಭರತ ಅಲ್ಲಿ ತನ್ನ ಪ್ರಶಸ್ತಿಯನ್ನು ಬರೆಸಬೇಕೆಂದು ಬಯಸುತ್ತಾನೆ. ಆದರೆ ಅದರಲ್ಲಿ ಭರತನಿಗೂ ಮೊದಲು ಇತರ ವೀರ ರಾಜರು ತಮ್ಮ ಪ್ರಶಸ್ತಿಯನ್ನು ಬರೆಯಿಸಿದ್ದರಿಂದ ಭರತನ ಪ್ರಶಸ್ತಿಯನ್ನು ಬರೆಸಲು ಸ್ವಲ್ಪವೂ ಸ್ಥಳವಿರುವುದಿಲ್ಲ. ಅದನ್ನು ಕಂಡ ಭರತನಿಗೆ ಅದುವರೆಗೆ ಇದ್ದ 'ತಾನೇ ಶ್ರೇಷ್ಠ'ಎನ್ನುವಅಹಂಕಾರ ಗರ್ವ ಮೆಲ್ಲಗೆ ಸೋರಿ ಹೋಗುತ್ತದೆ. ತನ್ನ ಬಗ್ಗೆ ಅಸಹ್ಯ ಪಟ್ಟು ಕೊನೆಗೂ ಕಾಕಿಣೀ ರತ್ನದಿಂದ ಅಲ್ಲಿದ್ದ ಒಂದು ಪ್ರಶಸ್ತಿಯನ್ನು ಅಳಿಸಿ ತನ್ನ ಪ್ರಶಸ್ತಿಯನ್ನು ಕೆತ್ತಿಸುತ್ತಾನೆ.

ಅನಂತರ ಈಶಾನ್ಯ ದಿಕ್ಕಿಗೆ ಬಂದ ಭರತ ನಮಿರಾಜನ ಮಗಳನ್ನು ಮತ್ತು ವಿದ್ಯಾಧರ ಸ್ತ್ರೀಯರನ್ನು ವಿವಾಹವಾಗುತ್ತಾನೆ. ಅನಂತರ ಭರತ ತನ್ನ ತಂದೆಯ ದರ್ಶನ ಮತ್ತು ಆಶೀರ್ವಾದ ಪಡೆಯಲು ಕೈಲಾಸ ಪರ್ವತಕ್ಕೆ ಹೋಗುತ್ತಾನೆ.

ಹನ್ನೆರಡನೆಯ ಸಂಧಿ : ಚಕ್ರರತ್ನ ಸ್ಖಲನ

ಈ ಸಂಧಿಯು, ಭರತನು ದಿಗ್ವಿಜಯ ಯಾತ್ರೆಯನ್ನು ಮುಗಿಸಿ ತನ್ನ ಅರಮನೆಗೆ ವಾಪಾಸು ಬಂದಾಗ ಚಕ್ರರತ್ನವು ಸಾಕೇತಪುರದ ಒಳಗೆ ಪ್ರವೇಶಿಸದಾಗ . ಭರತ ತನ್ನ ಮಂತ್ರಿ ಪುರೋಹಿತರಿಂದ ಕಾರಣವನ್ನು

ತಿಳಿಯುತ್ತಾನೆ. ಆಗ ಎಲ್ಲರನ್ನು ಗೆದ್ದ ಭರತನು ತನ್ನ ತಮ್ಮಂದಿರನ್ನು ಗೆದ್ದಿಲ್ಲ ಎನ್ನುವ ವಿಚಾರ ತಿಳಿದು ಬರುತ್ತದೆ. ಭರತ ತಕ್ಷಣ ತನ್ನ ತಮ್ಮಂದಿರಿಗೆ ತನಗೆ ಬಂದು ಶರಣಾಗುವಂತೆ ಓಲೆಯನ್ನು ಕಳುಹಿಸುತ್ತಾನೆ.

ನಮ್ಮಯ್ಯ ಕೊಟ್ಟ ರಾಜ್ಯದೊಳು ನಾವಿರುತಿರ್ದ । ದಮ್ಮಯ್ಯವೆಂದೀತನಿಗೆ ॥
ಒಮ್ಮೆಯ್ಯೊಳು ಪೋಗಿಯೆರಗಿ ಬಾಗುದರಿಂ । ದೆಮ್ಮಯ್ಯಗೆರಗುವ ನಾವು ॥ ೧೨-೩೭

ಭರತನ ತಮ್ಮಂದಿರು ಅಣ್ಣನಿಗೆ ಶರಣಾಗಲು ಇಷ್ಟ ಪಡಲಿಲ್ಲ. ಅಣ್ಣನಿಗೆ ಶರಣಾಗಿ ಸಾಮಂತರಾಗಿ ಬದುಕುವ ಬದಲಿಗೆ ತಂದೆಗೆ ಶರಣಾಗುತ್ತೇವೆಂದು ತಮ್ಮ ರಾಜ್ಯವನ್ನು ಅಣ್ಣನಿಗೆ ಧಾರೆ ಎರೆದು ಅವರೆಲ್ಲರೂ ತಪಸ್ಸಿಗೆ ತೆರಳುತ್ತಾರೆ. ಆದರೆ ಬಾಹುಬಲಿ ಮಾತ್ರ ಅಣ್ಣ ಕೇವಲ ಚಕ್ರರತ್ನದ ನೆರವಿನಿಂದ ದಿಗ್ವಿಜಯಕ್ಕೆ ಹೊರಟಿದ್ದಾನೆಯೇ ಹೊರತು ಸ್ವ-ಶಕ್ತಿಯಿಂದಲ್ಲ ಎಂದು ಅದಕ್ಕಾಗಿ ತಾನು ಆತನಿಗೆ ತಲೆಬಾಗಲಾರೆನು ಎನ್ನುತ್ತಾನೆ.

ಹಿರಿಯಣ್ಣಗೆರಗಬಹುದು ನೆಲ್ತೆಯೊಳು ತಂದು । ಕರಗಸ ವಿಟ್ಟೆರಗಿಸುವ ॥
ಭರತಣ್ಣಾಜಿಯ ಭಯಕೆರಗುವೆನೆನಾ । ಪುನರುಜಿನಪತಿಯ ` ಸುತನಲ್ಲೆ ॥ ೧೨-೧೨೬

ಅಣ್ಣನು ತನಗೆ ಶರಣಾಗೆಂದು ಒತ್ತಾಯ ಪೂರ್ವಕವಾಗಿ ಪ್ರಯತ್ನಿಸಿದರೆ ತಾನು ಯುದ್ಧಕ್ಕೆ ತೊಡಗುವುದಾಗಿ ಭರತನ ಮಂತ್ರಿಯಲ್ಲಿ ತಿಳಿಸುತ್ತಾನೆ.

ಹದಿಮೂರನೇ ಸಂಧಿ : ಬಾಹಬಲಿಯ ಚಂದ್ರಿಕಾ ವಿಹಾರ

ಬಾಹುಬಲಿಯು ತನ್ನ ಗೆಳೆಯರು, ಆಪ್ತ ವಿದೂಷಕನೊಂದಿಗೆ ಚಂದ್ರಿಕಾ ವಿಹಾರವನ್ನು ಕೈಗೊಳ್ಳಲು ಹೊರಡುತ್ತಾನೆ. ಅಲಂಕಾರಗೊಂಡ ಪುರದಲ್ಲಿ ಅಂದು ಸಂಭ್ರಮ ತುಂಬಿತ್ತು. ವಿನೋದದಲ್ಲಿ ತೊಡಗಿದ್ದ ಹೆಂಗಳೆಯರು, ಹೂ ಮಾರುವ ಮುಗ್ಧೆಯರು, ಇವರನ್ನೆಲ್ಲಾ ನೋಡುತ್ತಾ ಬಾಹಬಲಿ ತನ್ನ ಅರಮನೆಗೆ ಬರುತ್ತಾನೆ.

ಮಾರನೆಯ ದಿನ ಬಾಹಬಲಿ ದೇವತಾರ್ಚನೆಯನ್ನು ಮುಗಿಸಿ ತಾಯಿ ಸುನಂದಾದೇವಿಯನ್ನು ಕಂಡು ಅಕ್ಕರೆಯಿಂದ ಮಾತನಾಡಿಸುತ್ತಾನೆ.

ಸೊಸೆಯ್ಯರೊಡಗೂಡಿ ಸುಖದಿ ನೀವಿರಿ ನಾನು । ಬೆಸಸಿದಂತಣ್ಣಾಜಿಯನು ॥
ಒಸಗೆಯಿಂ ಪುರವನು ಪೊಗಿಸಿ ಬರ್ಪೆನು ತಾ। ಮ ಸ ವಿಲ್ಲೆಂದು ಬೀಳ್ಕೊಂಡ ॥ ೧೩-೮೯

ಬಾಹುಬಲಿಯು "ಸೊಸೆಯರೊಂದಿಗೆ ಸುಖವಾಗಿರು' ಎಂದು ತಾಯಿಯಲ್ಲಿ ತನ್ನ ಮನಸ್ಸಿನಲ್ಲಿ ಯಾವುದೋ ಒಂದು ನಿರ್ಧಾರವನ್ನು ಕೈಗೊಂಡವನಂತೆ ಅರ್ಥಗರ್ಭಿತವಾಗಿ ನುಡಿದು ಬೀಳ್ಕೊಡುತ್ತಾನೆ.

ಹದಿನಾಲ್ಕನೆ ಸಂಧಿ : ಧರ್ಮಯುದ್ಧ - ಬಾಹುಬಲಿ ವೈರಾಗ್ಯ

ಭರತ ಬಾಹುಬಲಿಯರ ಯುದ್ಧ ನಡೆಯುವುದು ಖಚಿತವೆಂದು ತಿಳಿದ ಮೇಲೆ ಎರಡೂ ಕಡೆಯಿಂದ

ಸಮರ ಸನ್ನಾಹ ಭೇರೀರವಗಳು ಮೊಳಗಿದವು. ಇಬ್ಬರ ನಡುವೆ ನಡೆಯುವ ಯುದ್ಧದ ಭೀಕರತೆಯನ್ನು ಗ್ರಹಿಸಿದ ಭರತ– ಬಾಹುಬಲಿಯ ಮಂತ್ರಿಗಳು ಹೀಗೆನ್ನುತ್ತಾರೆ,

ಇವರಿರ್ವರು ಚರಮಾಂಗರು ಕಾದಿದೊಡಿವರಿಗೆ ಬಾಧೆಗಳಿಲ್ಲ ॥

ಇವರ ಯುದ್ಧವು ಕ್ರೂರ ಗ್ರಹ ಯುದ್ಧದಂತೆ ಸಂ । ಭವಿಸುವುದು ಪ್ರಜೆಗೆ ಕೇಡೆಂದು ॥ ೧೪–೩೪

'ಆದಿ ತೀರ್ಥಂಕರನ ಮಕ್ಕಳಾದ ಇವರು ಚರಮ ದೇಹಿಗಳು. ಯುದ್ಧದಿಂದ ಇವರಗೇನು ಕೇಡುಂಟಾಗದು; ಸಾವು – ನೋವು ಸಂಭವಿಸದು. ಆದರೆ ಇವರು ನಡೆಸುವ ಯುದ್ಧದಿಂದ ಅಪಾರ ಸಂಖ್ಯೆಯ ಸೈನ್ಯ ಸಾವು ನೋವು ಸಂಭವಿಸುತ್ತದೆ' ಎಂದು ಯೋಚಿಸುತ್ತಾರೆ. ಮತ್ತು ಈ ಯುದ್ಧವನ್ನು ತಡೆಯ ಒಂದು ಉಪಾಯವನ್ನು ಹೂಡುತ್ತಾರೆ.

ಇಬ್ಬರೂ ತಮ್ಮ ಅರಸರ ಬಳಿ ಬಂದು ಅವರಲ್ಲಿ ದೃಷ್ಟಿಯುದ್ಧ, ಮಲ್ಲಯುದ್ದ, ಜಲಯುದ್ಧ ಎಂಬ ಮೂರು ವಿಧದ ಧರ್ಮಯುದ್ಧಗಳನ್ನು ಮಾಡಲು ಒಪ್ಪುವಂತೆ ವಿನಂತಿಸುತ್ತಾರೆ. ಕೊನೆಗೆ ಹಿರಿಯರ ಮಾತನ್ನೂ ಮೀರಲಾರದೆ ಇಬ್ಬರೂ ಧರ್ಮಯುದ್ಧಕ್ಕೆ ಒಪ್ಪುತ್ತಾರೆ.

ನಡೆದ ಮೂರು ಯುದ್ಧದಲ್ಲಿ ಬಾಹುಬಲಿ ಜಯವನ್ನು ತನ್ನದಾಗಿಸುತ್ತಾನೆ. ಸೋತು, ಅವಮಾನದಿಂದ ಭರತ ಚಕ್ರರತ್ನವನ್ನೇ ಅಧರ್ಮಕ್ಕೆ ಬಳಸಿಕೊಳ್ಳುತ್ತಾನೆ. ಆದರೆ ಭರತ ಧರ್ಮಕ್ಕೆ ಕುರುಡನಾದರೂ, ಚಕ್ರರತ್ನ ಮಾತ್ರ ಧರ್ಮವನ್ನು ಪಾಲಿಸಿ, ಧರ್ಮೋದ್ಧಾರಕನಾದ ಬಾಹುಬಲಿಗೆ ಮೂರು ಪ್ರದಕ್ಷಿಣೆ ಬಂದು ಆತನ ಬಲಭಾಗದಲ್ಲಿ ನಿಲ್ಲುತ್ತದೆ.

ತನ್ನಿಂದ ಅಣ್ಣನಿಗಾದ ಅವಮಾನಕ್ಕೆ ವ್ಯಥೆ ಪಟ್ಟು ಆ ಪಾಪದ ದೋಷವನ್ನು ತಪಸ್ಸಿನ ಮೂಲಕ ನೀಗುವುದಾಗಿ ತಿಳಿಸಿ, ತನ್ನ ಪೌದನಪುರ ಹಾಗೂ ರಾಜ ಪದವಿಯನ್ನು ಮಗ ಮಹಾಬಲನಿಗೆ ನೀಡಿ ತಪಸ್ಸಿಗೆ ತೆರಳುತ್ತಾನೆ.

ಆದರೂ ತಾನು ಅಣ್ಣನಿಗೆ ದಾನ ಮಾಡಿದ ನೆಲದ ಮೇಲೆ ನಿಂತಿದ್ದೇನೆಂಬ ಭಾವನೆಯು ಅವನ ಮೋಕ್ಷಕ್ಕೆ ಅಡ್ಡಿಯಾಗಿತ್ತು. ಇದನ್ನು ತನ್ನ ತಂದೆ ಆದಿದೇವನಿಂದ ಅರಿತ ಭರತೇಶನು ಬಾಹುಬಲಿಯ ಬಳಿ ಬಂದು ಆತನಿಗೆ ಸಾಷ್ಟಾಂಗವೆರಗಿ "ಈ ರಾಜ್ಯವು ನಿನ್ನದೇ ಆಗಿದೆ. ನೀನು ಕರುಣಿಸಿದ್ದರಿಂದ ನಾನಿದನ್ನು ಅನುಭವಿಸುತ್ತಿದ್ದೇನೆ. ಆದುದರಿಂದ ಈ ಭೂಮಿ ನನ್ನದು ಎನ್ನುವ ಮನಕಷಾಯವನ್ನು ಬಿಡು" ಎಂದು ಬೇಡಿಕೊಳ್ಳುತ್ತಾನೆ.

ಇದರಿಂದ ಬಾಹುಬಲಿಯ ಮನಕಷಾಯ ದೂರವಾಗಿ ತಂದೆಗಿಂತಲೂ ಮೊದಲು ಮೋಕ್ಷವನ್ನು ಸಂಪಾದಿಸುತ್ತಾನೆ.

ಹದಿನೈದನೆಯ ಸಂಧಿ : ಪರಿನಿಷ್ಕ್ರಮಣ ಕಲ್ಯಾಣ

ಈ ಸಂಧಿಯಲ್ಲಿ ಕವಿಯು ಚಕ್ರವರ್ತಿ ಭರತನಿಗೆ ನಡೆಯುವ ರಾಜ್ಯ ಪಟ್ಟಾಭಿಷೇಕ. ಆ ಸಂದರ್ಭದಲ್ಲಿ ಆತನು ಅಹಿಂಸಾವ್ರತವನ್ನು ಕೈಗೊಂಡ ಜನರನ್ನು 'ದ್ವಿಜ' ರೆಂದು ನಾಮಕರಣ ಮಾಡಿದುದನ್ನು ಕುರಿತು ತಿಳಿಸುತ್ತಾನೆ. ಭರತ

ಹದಿನಾರು ವಿಲಕ್ಷಣ ಸ್ವಪ್ನಗಳನ್ನು ಕಾಣುತ್ತಾನೆ. ಮತ್ತು ಆ ಕುರಿತು ತನ್ನ ತಂದೆಯಲ್ಲಿ ಹೇಳುತ್ತಾನೆ. ಅವಧಿ ಜ್ಞಾನದಿಂದ ಸ್ವಪ್ನವನ್ನು, ಅದರ ಫಲವನ್ನು ಕುರಿತು ಆದಿದೇವನು ಭರತನಲ್ಲಿ ತಿಳಿಸುತ್ತಾನೆ.

ದ್ವಿಜರನು ಧರ್ಮಾರ್ಥದಿಂದ ನಡೆಸಲೆಂದು । ಸೃಜಿಸಿದುದದುವೆ ಲೇಸಾಯ್ತು ॥

ನಿಜಧರ್ಮದೊಳು ಕೃತಯುಗ ಪರಿಯಂತರ । ದ್ವಿಜರು ನಡೆವರಲ್ಲಿಂದ ॥ ೧೫-೩೫

"ನೀನು ದ್ವಿಜ ವರ್ಗದವರನ್ನು ಸೃಷ್ಟಿಸಿದುದರಿಂದ ದೋಷವಿಲ್ಲ. ಕೃತಯುಗ ಮುಗಿಯುವವರೆಗೆ ಅವರು ಯೋಗ್ಯವಾಗಿದ್ದು, ಕಲಿಯುಗ ಪ್ರಾರಂಭವಾದೊಡನೆ, ಜಾತಿ-ಮದದಿಂದ ಅವರು ಆಚಾರ ಭ್ರಷ್ಟರಾಗುತ್ತಾರೆ. ಜೈನಧರ್ಮಕ್ಕೆ ವಿರುದ್ಧವಾಗಿ ನಡೆದು ಸಿರಿ ಸಂಪತ್ತಿನ ಆಸೆಗೆ ಬಿದ್ದು ಮಿಥ್ಯಾಶಾಸ್ತ್ರಗಳನ್ನು ಸೃಷ್ಟಿಸಿ ಜನರನ್ನು ವಂಚಿಸುತ್ತಾರೆ" ಎಂದು ಭರತನಿಗೆ ತಿಳಿಸುತ್ತಾನೆ. ಮತ್ತು ಈ ಸಮಸ್ತ ವಿಘ್ನಗಳ ಪರಿಹಾರಕ್ಕಾಗಿ ಧರ್ಮದಲ್ಲಿ ನಂಬಿಕೆ, ಶ್ರದ್ಧೆಯನ್ನು ಇಡಬೇಕೆಂದು ತಿಳಿಸುತ್ತಾನೆ.

ಆದಿದೇವನ ಮಾತಿನಂತೆ ಭರತನು ಧರ್ಮಕ್ಕೆ ಪ್ರಾಶಸ್ತ್ಯ ನೀಡಿ, ಧರ್ಮರಕ್ಷಣೆಗಾಗಿ ಮತ್ತು ಲೋಕಕಲ್ಯಾಣಕ್ಕಾಗಿ ಕೈಲಾಸಗಿರಿಯಲ್ಲಿ ಜಿನಭವನಗಳನ್ನು ಮಾಡಿಸಿ, ನವರತ್ನಗಳ ಜಿನ ಬಿಂಬಗಳನ್ನು ಪ್ರತಿಷ್ಠಾಪಿಸುತ್ತಾನೆ.

ಹೀಗಿರಲು ವೃಷಭದೇವನಿಗೆ ಅಂತಿಮ ಕಾಲ ಸಮೀಪಿಸಿತೆಂದು ತಿಳಿದ ದೇವೇಂದ್ರನು ವೃಷಭದೇವನ ಪರಿನಿರ್ವಾಣ ಕಲ್ಯಾಣವನ್ನು ನೆರವೇರಿಸುತ್ತಾನೆ. ಅಲ್ಲಿಗೆ ಪುರುದೇವನ ಕಥೆ ಮುಗಿಯುತ್ತದೆ.

ಹೀಗೆ ಗುರುಗಳು ಪಾಂಡ್ಯನೃಪಾಲನಿಗೆ ಹೇಳಿದ ಆದಿ ತೀರ್ಥಂಕರ, ಆತನ ಮಕ್ಕಳಿಂದಾದ ಧರ್ಮದ ಉದ್ಧಾರದ ಕತೆಯನ್ನು ಕೇಳಿ ತಿಳಿದು ಸಂತೋಷಪಟ್ಟ ಗುರುಗಳಿಗೆ ವಂದಿಸಿ ಸಂಭ್ರಮದಿಂದ ಬೀಳ್ಕೊಡುತ್ತಾನೆ.

ಇಲ್ಲಿಗೆ ಪಾಂಡ್ಯ ನೃಪಾಲನ ಕಥೆಯೂ ಸಹ ಮುಕ್ತಾಯಗೊಂಡು ಕಾರ್ಕಳವನ್ನಾಳಿನ ಜೈನ ಅರಸರ ವಂಶವನ್ನು ಕುರಿತು ಮುಂದಿನ ಸಂಧಿಯಲ್ಲಿ ತಿಳಿಸುತ್ತಾನೆ.

ಹದಿನಾರನೆಯ ಸಂಧಿ : ಇಮ್ಮಡಿ ಭೈರವನಿಂದ ಮಸ್ತಕಾಭಿಷೇಕ ಪೂರ್ವ ಸಿದ್ಧತೆ

ಈ ಸಂಧಿಯು ಪಾಂಡ್ಯ ನೃಪಾಲನ ವಂಶದಲ್ಲಿ ಜನಿಸಿದ, ಧರ್ಮದ ಉದ್ಧಾರಕ್ಕಾಗಿ ಹಾಗೂ ತಂದೆಯ ಕೀರ್ತಿಗಾಗಿ ಗೊಮ್ಮಟ ಸ್ವಾಮಿಯ ಪುನರ್ ಪ್ರತಿಷ್ಠೆ, ಮಸ್ತಕಾಭಿಷೇಕವನ್ನು ನಡೆಸಿದ ಇಮ್ಮಡಿ ಭೈರವರಾಯನ ಕಥೆಯನ್ನು ಒಳಗೊಂಡಿದೆ.

ಕಲಿಕಾಲ ದೋಷದಿಂದ ನಿಂತು ಹೋಗಿದ್ದ ಗೊಮ್ಮಟನ ಪೂಜೆಯನ್ನು ಪುನಃ ಪ್ರಾರಂಭಿಸುವ ಇಚ್ಛೆಯನ್ನು ತನ್ನ ಗುರು ಲಲಿತಕೀರ್ತಿಗಳಲ್ಲಿ ತಿಳಿಸಿ ಅವರ ಬೆಂಬಲ, ಆಶೀರ್ವಾದದಿಂದ ಈ ಕಾರ್ಯವನ್ನು ನಡೆಸುತ್ತಾನೆ.

ಆಗ ಅರಸನು ಲೋಕಕಲ್ಯಾಣಕ್ಕಾಗಿ ನಡೆಸುವ ಈ ಧಾರ್ಮಿಕ ಕ್ರಿಯೆಯಲ್ಲಿ ಜನರೆಲ್ಲರೂ ತಮ್ಮ ಜಾತಿ, ಧರ್ಮ,

ಪ್ರತಿಷ್ಠೆ, ಅಂತಸ್ಥಿನ ಅಂತರವನ್ನು ಮರೆತು ಸ್ವಾಮಿಯ ಕೃಪೆಗೆ ಪಾತ್ರರಾಗುವ ಉದ್ದೇಶದಿಂದ ಎಲ್ಲರೂ ಒಟ್ಟಾಗಿಒಗ್ಗಟ್ಟಿನಿಂದ ಒಂದೊಂದು ಕೆಲಸದಲ್ಲಿ ತೊಡಗಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುವುದನ್ನು ಕವಿ ಈ ಕಥಾಭಾಗದಲ್ಲಿ ವರ್ಣಿಸಿದ್ದಾನೆ. ಈ ಮೂಲಕ ಕವಿ ಒಟ್ಟು ತುಳುನಾಡಿನ ಸಂಸ್ಕೃತಿಯನ್ನು ದಾಖಲಿಸಿದ್ದಾನೆ ಎಂದು ಹೇಳಬಹುದು.

ಶತ್ರುಗಳೆಲ್ಲರು ತಮ್ಮ ಕೋಪವ ಬಿಟ್ಟು । ಮಿತ್ರರಪ್ಪರು ಜಗದೀಶ ॥
ಸ್ತೋತ್ರವ ಮಾಡಲು ನಿನ್ನ ಪಾದಂಗಳ । ನೇತ್ರಾನಂದೈಕ ರೂಪ ॥ ೧೬–೪೯

ಮೂಡಬಿದರೆ – ಕಾರ್ಕಳದ ನಡುವೆ ಅದುವರೆಗೆ ಏನೇ ಅಸಮಾಧಾನವಿದ್ದರೂ ಅದು ಇನ್ನು ಮುಂದುವರಿಯಬಾರದೆಂದು ಅಲ್ಲಿನ ಜನರು ಸಹ ಈ ಸ್ವಾಮಿ ಕಾರ್ಯದಲ್ಲಿ ತನು–ಮನ–ಧನಗಳಿಂದ ನೀಡುವ ಸಹಕಾರ. ... ನೆರೆಯ ರಾಜ್ಯದ ರಾಜರು, ಅಜಿಲಭೂಪಾಲರು, ಚೌಟರು, ಶ್ರಾವಕರು, ಕೆಳದಿ ಅರಸರು ನೀಡುವ ಕಾಣಿಕೆ-ಸಹಕಾರಗಳು, ಈ ಸಂಭ್ರಮದಲ್ಲಿ ಪಾಲ್ಗೊಳ್ಳಲು ಬರುವ ಜನರು ಭಕ್ತಿಪೂರ್ವಕವಾಗಿ ತರುವ ಹೊರೆಕಾಣಿಕೆಗಳನ್ನು,ರಾಜ ಮಸ್ತಕಾಭಿಷೇಕಕ್ಕಾಗಿ ನಡೆಸುವ ತಯಾರಿ ವ್ಯವಸ್ಥೆಯನ್ನು ಕುರಿತು ಚಿತ್ರಿಸುತ್ತಾನೆ.

ಈ ಉತ್ಸವಕ್ಕೆ ವ್ಯಾಪಾರಕ್ಕಾಗಿ ಬರುವ ವ್ಯಾಪಾರಿ ಸಂಘದ ಅಂಗಡಿಗಳ ನಿರ್ಮಾಣ,ಬಂದ ಜನರಿಗೆ ಯಾವುದೇ ತೊಂದರೆ, ಸಮಸ್ಯೆಯಾಗದಿರಲೆಂದು ಜನರ ವಸತಿ, ಆಹಾರಕ್ಕಾಗಿ ರಾಜ ಮಾಡಿಸುವ ವ್ಯವಸ್ಥೆಯನ್ನು ಕುರಿತು ಕವಿ ವಿವರಿಸಿದ್ದಾನೆ.

ಈ ಉತ್ಸವಕ್ಕಾಗಿ ಪುರದ ತುಂಬ ಅಲಂಕಾರ, ಅಲ್ಲದೆ ಪ್ರತೀ ಒಂದು ಮನೆಗಳನ್ನು ಅಲಂಕರಿಸಿ, ನಡೆಸುವ ಸಿದ್ಧತೆ, ಊರು ಪರಊರುಗಳಿಗೆ ಈ ಸಂಭ್ರಮದ ವಿಷಯವನ್ನು ತಿಳಿಸುವ ಪರಿ, ಮಸ್ತಕಾಭಿಷೇಕಕ್ಕಾಗಿ ಉಪ್ಪರಿಗೆಯ ನಿರ್ಮಾಣ, ಅದರ ಅಲಂಕಾರ ಹೀಗೆ ಹತ್ತು ಹಲವಾರು ರೀತಿಯಲ್ಲಿ ರಾಜ ಈ ಸಂಭ್ರಮಕ್ಕಾಗಿ ಸಿದ್ಧತೆ ವ್ಯವಸ್ಥೆ ಮಾಡಿದುದನ್ನು ಕವಿ ಇಲ್ಲಿ ತಿಳಿಸುತ್ತಾನೆ.

ಹದಿನೇಳನೆಯ ಸಂಧಿ : ಗೊಮ್ಮಟ ಸ್ವಾಮಿಗೆ ಮಹಾಮಸ್ತಕಾಭಿಷೇಕ

ಈ ಕಾವ್ಯದ ತುಂಬ ಕವಿ ಜೈನ ಧರ್ಮದ ಸಂಸ್ಕೃತಿಯನ್ನು ದಾಖಲಿಸಿದ್ದಾನೆ. ಏಕೆಂದರೆ ಇಮ್ಮಡಿ ಭೈರವನು ನಡೆಸುವ ಧಾರ್ಮಿಕ ಕೆಲಸದ ಮೊದಲು ತನ್ನ ಕುಲ – ಇಷ್ಟದೈವವನ್ನು ನೆನೆದು ಬಂದು ಶುಭ ಮುಹೂರ್ತದಲ್ಲಿ ಪ್ರತಿಷ್ಠಾ ಕಾರ್ಯವನ್ನು ಪ್ರಾರಂಭಿಸುತ್ತಾನೆ. ಅಲ್ಲದೆ ವ್ರತವನ್ನು ಸಹ ಕೈಗೊಂಡು ಆಯ್ದ ಕೆಲಸವನ್ನು ನಿರ್ವಿಘ್ನವಾಗಿ ನಡೆಸಿಕೊಡೆಂದು ದೇವರಲ್ಲಿ ಪ್ರಾರ್ಥಿಸುತ್ತಾನೆ.

ಇಂದ್ರರಲ್ಲಿ ಶ್ರೇಷ್ಠನೆನಿಸಿದ ನಾಗಚಂದ್ರನನ್ನು ಈ ಪ್ರತಿಷ್ಠಾ ಕಾರ್ಯಕ್ಕಾಗಿ ನಿಯೋಜಿಸುತ್ತಾನೆ.

ಪ್ರತಿಷ್ಠೆಯ ದಿನ ರಾಜ ಪಲಕ್ಕಿ, ವಾದ್ಯ, ಕುಂಭ ಕಳಸಗಳಲ್ಲಿ ಮೆರವಣಿಗೆಯೊಂದಿಗೆ ಸಾಂಪ್ರದಾಯಿಕವಾಗಿ

ನಾಗಚಂದ್ರನನ್ನು ಬರಮಾಡಿಕೊಳ್ಳುತ್ತಾನೆ. ಆತನಿಗೆ ಮುತ್ತೈದೆಯರಿಂದ ವಿಧಿಪೂರ್ವಕವಾಗಿ ಎಣ್ಣೆ ಸ್ನಾನ ಮಾಡಿಸಿ, ಬೆಲೆಬಾಳುವ ವಸ್ತುಗಳನ್ನು ಉಡುಗೊರೆಯಾಗಿ ನೀಡುವುದರ ಮೂಲಕ ಗೌರವಿಸುತ್ತಾನೆ. ಆ ದಿನ ರಾತ್ರಿ ಹಲವಾರು ಪೂಜಾ ವಿಧಾನಗಳನ್ನು ಮಾಡಿಸಿ, ಮರುದಿನ ಮುತ್ತೈದೆಯರಿಂದ ಹದಿನೆಂಟು ತರಹದ ಧಾನ್ಯಗಳನ್ನು ಬಿತ್ತಿಸುತ್ತಾನೆ.

ಅನಂತರ ಸರ್ವೌಷದ ಜಲವನ್ನು ತುಂಬಿದ ಕಳಸದಿಂದ ಜಿನನಿಗೆ ಕಳಸನ್ಯಾಸವನ್ನು ಮಾಡಿದನು. ಧಾಮಶುದ್ಧಿ, ಬಿಂಬಶುದ್ಧಿ, ಗರ್ಭಾವತರಣ ಮುಂತಾದ ವಿಧಿ–ವಿಧಾನಗಳನ್ನು ನಡೆಸುತ್ತಾನೆ.

ಹೀಗೆ ಮೂರು ದಿನಗಳ ಕಾಲ ಲೋಕಶಾಂತಿಯ ನಿಮಿತ್ತ ಹಲವಾರು ಧಾರ್ಮಿಕ ವಿಧಿ ವಿಧಾನಗಳನ್ನು ಕ್ರಮ ಪ್ರಕಾರವಾಗಿ ರಾಜ ನೆರವೇರಿಸುತ್ತಾನೆ. ಅನಂತರ ವೈಭವದಿಂದ ರಥೋತ್ಸವವನ್ನು ಸಹ ನಡೆಸುತ್ತಾನೆ. ಮತ್ತು ಕಲಶಾಭಿಷೇಕ, ತೆಂಗಿನಕಾಯಿ ಜಲಾಭಿಷೇಕ, ಬೆಲ್ಲ, ಸಕ್ಕರೆ, ಸಿಂಧೂರ, ಕುಂಕುಮ, ಕರ್ಪೂರ, ಪುಷ್ಪ ಮುಂತಾದ ದ್ರವ್ಯಗಳಿಂದ ಗೊಮ್ಮಟ ಸ್ವಾಮಿಯ ಮೂರ್ತಿಗೆ ಅಭಿಷೇಕ ಮಾಡಿಸುತ್ತಾನೆ. ಇದೆಲ್ಲವೂ ನಡೆದ ನಂತರ ಕೊನೆಯದಾಗಿ ರಾಜ ನವಗ್ರಹ ಶಾಂತಿ ಹೋಮಗಳನ್ನು ಮಾಡಿಸುತ್ತಾನೆ. ಅಲ್ಲದೆ ಓಕುಳಿಯಾಟ ಸಂಭ್ರಮವನ್ನು ಸಹ ವಿಜೃಂಭಣೆಯಿಂದ ಆಚರಿಸುತ್ತಾನೆ.

ಕೊನೆಯಲ್ಲಿ ಗೊಮ್ಮಟಸ್ವಾಮಿಯ ಸಂಭ್ರಮದ ಉತ್ಸವದಲ್ಲಿ ಪಾಲ್ಗೊಂಡ ಎಲ್ಲರಿಗೂ

ಆಹಾರ ವಸ್ತುಗಳನ್ನು ದಾನವಾಗಿ ನೀಡುತ್ತಾನೆ.

ಭೂರಿದಾನಗಳನ್ನುಯಾಚಕರಿಗೆ ಕೊಟ್ಟ । ಧಾರಿಣಿ ಪೊಗಳು ವಂದದೊಳು ॥

ಮಾರಮಣರಿಗುಡು ಗೊರೆಯನು ಕೊಟ್ಟನು । ದಾರ ಶಿರೋಮಣಿ ಯಾಗ ॥ ೧೭–೧೪೩

ಹೀಗೆ ಮಸ್ತಕಾಭಿಷೇಕದ ಸಲುವಾಗಿ ನಡೆಸಿದ ಎಲ್ಲಾ ಪೂಜಾ ವಿಧಿಗಳು ಉತ್ಸವಗಳು, ಸಂಭ್ರಮ, ಸುಸೂತ್ರವಾಗಿ ನಡೆದು ನಂತರ ರಾಜ ತನ್ನ ಹರಕೆಯಂತೆ ದೇವರ ಸನ್ನಿಧಾನಕ್ಕೆ ಭೇಟಿ ಕೊಡುತ್ತಾನೆ.

ತಾನು ನಡೆಸಿದ ಈ ಧಾರ್ಮಿಕ ಕಾರ್ಯಕ್ಕೆ ಅನುಗ್ರಹ, ಆಶೀರ್ವಾದವನ್ನು ನೀಡಿದ ಹೊಂಬುಜದ ಪದ್ಮಾವತಿ ದೇವಿಗೆ ವಂದಿಸಿ, ಚಿನ್ನದಾಭರಣಗಳನ್ನು ಒಪ್ಪಿಸಿ, ಬೆಟ್ಟದ ದೇವನಿಗೆ ತೈಲ ಮಜ್ಜನದ ಸೇವೆಯನ್ನು ನೀಡಿ ಅಭಿಷೇಕಗಳನ್ನು ನೀಡುವುದರ ಮೂಲಕ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿ ಸಾರ್ಥಕ್ಯವನ್ನು ಪಡೆಯುತ್ತಾನೆ.

೧.೬ ಕಾರ್ಕಳದ ಭೈರರಸರು

ಪ್ರಭಾವಶಾಲಿಯಾದ ಮಹಾಮಾಂಡಲಿಕ ರಾಜಮನೆತನದ ಸಾಂತರರದು. ಇವರು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಅತಿಶಯ ಕ್ಷೇತ್ರವೆನಿಸಿದ ಹೊಂಬುಜ್ಜವನ್ನು ರಾಜಧಾನಿಯಾಗಿಸಿ 'ಸಾಂತಳಿಗೆ ಸಾಸಿರ' ಹೆಸರಿನ ನಾಡನ್ನು ಸಾಸಿರ ವರ್ಷಗಳಿಗಿಂತಲೂ ಹೆಚ್ಚು ದೀರ್ಘಕಾಲ ಆಳ್ವಿಕೆ ನಡೆಸಿದರು.

ಕ್ರಿ.ಶ ೧೦೭೭ ರ ಒಂದು ಶಾಸನದಂತೆ ಈ ವಂಶದ ಮೂಲದ ವಿವರಗಳು ಹೀಗಿವೆ. ಸಾಂತರರು ಉಗ್ರವಂಶಕ್ಕೆ

ಸೇರಿದವರು. ಉತ್ತರ ಮಧುರೆ (ಮಥುರಾ) ಯವರು. ಸಾಕಾರ ಮಹಾರಾಯನ ಮಗನಾದ ಜಿನದತ್ತರಾಯನು ಜೈನಯಕ್ಷಿ ಪದ್ಮಾವತಿದೇವಿಯ ಕೃಪಾಕಟಾಕ್ಷದಿಂದ ದಕ್ಷಿಣಕ್ಕೆ ಬಂದು ಕನಕಪುರ (ಈಗಿನ ಹುಂಚ, ಪೊಂಬುಚ್ಚ) ದಲ್ಲಿ ರಾಜ್ಯ ಸ್ಥಾಪಿಸಿದನು.ಈಘಟನೆ ಕ್ರಿ.ಶ ಸು. ೬–೭ ನೇ ಶತಮಾನದಲ್ಲಿ ನಡೆದಿರುವುದು ಎಂದು ಶಾಸನಗಳಿಂದ ದೃಢಪಟ್ಟಿದೆ. ಏಕೆಂದರೆ ಸಾಂತರನೆಂಬ ದೊರೆಯು ೭ನೇ ಶತಮಾನದ ಎರಡು ಶಾಸನಗಳು ಬೆಳಕಿಗೆ ಬಂದಿವೆ. (ಈ.ಸಿ.೭, ಕೆ.ಪಿ ೩೯.೪೦) ಇವರು 'ವಾನರಧ್ವಜ' ರೆಂದೂ, ಸಿಂಹಲಾಂಛನರೆಂದೂ, ಶಾಸನಗಳು (ಈ.ಸಿ.೭, ಕೆ.ಪಿ ೩೫ – ೪೮) ಸ್ಪಷ್ಟಪಡಿಸಿದೆ. ಸಾಮಾನ್ಯವಾಗಿ ಇವರ ಶಾಸನಗಳಲ್ಲಿ ಕಂಡು ಬರುವ "... ಸಮಸ್ತ ಭುನಾಶ್ರಯಂ ಶ್ರೀ ಪ್ರಥ್ವೀವಲ್ಲಭಂ ಮಹಾರಾಜಾಧಿರಾಜಂ ರಾಜಪರಮೇಶ್ವರಂ ಉತ್ತರ ಮಧುರಾಧೀಶ್ವರಂ ಪೊಟ್ಟಪೊಂಬುಚ್ಚಪುರವರಾಧಿಶ್ವರಂ ಮಹೋಗ್ರವಂಸ ಲಲಾಮಂ ಪದ್ಮಾವತೀ ದೇವಿಲಬ್ಧವರ ಪ್ರಸಾದಾಸಾಧಿತರುಂ ...." ಎಂಬ ಪ್ರಶಸ್ತಿಯು ಇವರ ಪ್ರಾಚೀನತೆಯನ್ನು ಗುರುತಿಸುವಲ್ಲಿ ಸಹಕಾರಿಯಾಗುತ್ತದೆ.

ಇವರು ಗಂಗ, ಕದಂಬ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮುಂತಾದ ಸಾಮ್ರಾಟರ ಕಾಲದಲ್ಲಿ ಅವರ ಮಹಾಮಂಡಳೇಶ್ವರರಾಗಿಯೂ, ಕೆಲವೊಮ್ಮೆ ಸ್ವತಂತ್ರರಾಗಿಯೂ, ತೀರ್ಥಹಳ್ಳಿ, ಬಾಳೆಹೊನ್ನೂರು, ಶೃಂಗೇರಿ, ಕಳಸ, ಮೂಡಿಗೆರೆ, ಚಿಕ್ಕಮಗಳೂರು ಮುಂತಾದ ಪ್ರದೇಶಗಳನ್ನೊಳಗೊಂಡ 'ಸಾಂತಳಿಗೆ ಸಾಸಿರ' ಪ್ರದೇಶವನ್ನು ಅತಿ ದಕ್ಷತೆಯಿಂದ ಸಂರಕ್ಷಿಸಿಕೊಂಡು ಬಂದಿದ್ದರು. ಇಲ್ಲಿನ ಪರಂಪರೆಯಲ್ಲಿ ರಾಡ (ರಾಳ), ಶ್ರೀಕೇಶಿ, ಜಯಕೇಶಿ, ರಣಕೇಶಿ, ವಿಕ್ರಮಾದಿತ್ಯ ಸಾಂತರ (ಕ್ರಿ.ಶ.೮೯೭), ಚಾಗಿ ಸಾಂತರ, ವೀರ ಸಾಂತರ (ಕ್ರಿ.ಶ ೯೫೦), ಕನ್ನರ, ಕಾಮ, ರಾಯಸಾಂತರ, ಚಿಕ್ಕವೀರ, ಅಮ್ಮಣ್ಣದೇವ, ತೈಲಪದೇವ, ಬೀರದೇವ (ಕ್ರಿ.ಶ. ೧೦೬೦), ನನ್ನಿಸಾಂತರ (ಕ್ರಿ.ಶ೧೦೭೭), ತ್ರೈಲೋಕ್ಯಮಲ್ಲ (ಕ್ರಿ.ಶ ೧೧೪೯), ತ್ರಿಭುವನ ಮಲ್ಲ (ಕ್ರಿ.ಶ. ೧೧೭೫) ಮುಂತಾದ ಅರಸರು ಸಮರ್ಥ ಆಡಳಿತ ನಡೆಸಿದ್ದರು.

ಅನಂತರ ೧೨ನೇ ಶತಮಾನದ ಸುಮಾರಿಗೆ ಈ ಮನೆತನವು ಎರಡು ಕವಲುಗಳಾಗಿ ಒಂದು ಶಾಖೆ ಕಳಸದ ರಾಜಧಾನಿಯಿಂದಲೂ, ಮತ್ತೊಂದು ಶಾಖೆ ಸಾಗರದ ಹತ್ತಿರದ ಹೊಸಗುಂದದ ಅರಮನೆಯಿಂದಲೂ ಆಳ್ವಿಕೆಯನ್ನು ನಡೆಸಿದವು.

ಮೂಡಿಗೆರೆಯಲ್ಲಿ ಕ್ರಿ.ಶ. ೧೨೦೯ ರ ಶಾಸನವು ವೀರಬಲ್ಲುದೇವ, ಮಲ್ಲುದೇವ ಮತ್ತು ಮರುದೇವ ಇವರು ಕಳಸ, ಕಾರ್ಕಳದ ಆರಂಭದ ದೊರೆಗಳೆನ್ನುವುದನ್ನು ತಿಳಿಸುತ್ತದೆ. ಇವನ ಚಾಕಲದೇವಿ, ಕಾಳಲ ಮಹಾದೇವಿ ಎಂಬ ರಾಣಿಯರೂ ಇವನ ಆಡಳಿತದಲ್ಲಿ ನೇರವಾಗಿ ಭಾಗವಹಿಸಿದ್ದರು ಎನ್ನುವುದನ್ನು ಇದು ದಾಖಲಿಸುತ್ತದೆ.

ಮುಂದೆ ಹೊಯ್ಸಳರ ಪ್ರಾಬಲ್ಯ ಪ್ರಭಾವದಿಂದಾಗಿ ಇವರು ಘಟ್ಟ ಪ್ರದೇಶದ ಕೆಳಗಿನ ಕಾರ್ಕಳ, ಕೆರವಸೆ ಮತ್ತು ಶಿಶಿಲಗಳನ್ನೇ ರಾಜಧಾನಿಯಾಗಿ ಅವಲಂಬಿಸುತ್ತಾರೆ.

ಕ್ರಿ.ಶ. ೧೩೩೪ ಬೊಮ್ಮಿದೇವರಸನ ಮಗನಾಗಿರುವ ಲೋಕನಾಥರಸನ ಶಾಸನವು ಕಾರ್ಕಳದಲ್ಲಿ ಭೈರರಸರ ಸ್ವತಂತ್ರ ಆಳ್ವಿಕೆಯನ್ನು ಕುರಿತು ಉಲ್ಲೇಖಿಸುತ್ತದೆ.

ಲೋಕನಾಥರಸನು ಬೊಮ್ಮಿದೇವರಸನ ನಂತರ ಕಾರ್ಕಳವನ್ನು ಆಳಿದ ಅರಸನೆನ್ನುವುದನ್ನು ಶಾಸನ ತಿಳಿಸುತ್ತದೆ. ಲೋಕನಾಥರಸನ ಆಳ್ವಿಕೆಯ ಸಂದರ್ಭದಲ್ಲಿ ಕಾರ್ಕಳದಲ್ಲಿ ಜೈನಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎನ್ನುವುದನ್ನು ಗಮನಿಸಬಹುದು.

ಲೋಕನಾಥರಸನ ನಂತರ ಕೆರೆವಸೆಯಲ್ಲಿ ವೀರ ಚೆನ್ನರಸನು ಆಳಿದನೆಂದು ತಿಳಿಯುತ್ತದೆ.

ಭೈರರಸನ ಕಾಲದಲ್ಲಿ ರಾಜ್ಯವು ಶಾಂತಿ, ಸಮೃದ್ಧಿಗಳಿಂದ ಕೂಡಿತ್ತಲ್ಲದೆ, ಸಾಂಸ್ಕೃತಿಕ ಕಲೆಗಳಿಗೂ ಪ್ರೋತ್ಸಾಹ ದೊರಕಿತ್ತು. ಉದಾರನಾದ ವೀರ ಭೈರರಸನು ಹಿರಿಯಂಗಡಿ, ಕೆರೆವಸೆ, ಕಳಸದ ಬಸದಿಗಳಿಗೆ ಭೂಮಿ ಧನ–ಧಾನ್ಯಗಳನ್ನು ದಾನ ನೀಡಿದ್ದನು. ಹಿರಿಯಂಗಡಿಯಲ್ಲಿ ನೇಮಿನಾಥ,ಬಾರಕೂರಿನಲ್ಲಿ ಪಾರ್ಶ್ವನಾಥನ ಬಸದಿಗಳನ್ನು ನಿರ್ಮಿಸಿದ್ದನು. ಅಲ್ಲದೆ ಕಳಸದ ಕಲಶೇಶ್ವರ, ಕೆರೆವಸೆಯಲ್ಲಿನ ಮಹದೇವ, ಹೆರ್ಮುಂಡೆಯ ವಿಷ್ಣುಮೂರ್ತಿ ದೇವಾಲಯಗಳಿಗೆ ದಾನ ನೀಡಿದ್ದನೆಂದು ಉಲ್ಲೇಖಗಳು ಸಿಗುತ್ತವೆ.

ವೀರಭೈರರಸನ ನಂತರ ಕೆರೆವಸೆಯನ್ನು ಕ್ರಿ.ಶ. ೧೩೯೦ – ೧೪೨೦ ರ ವರೆಗೆ ಆತನ ಮಕ್ಕಳಾದ ಪಾಂಡ್ಯ ಮತ್ತು ರಾಮನಾಥರು ಆಳ್ವಿಕೆ ನಡೆಸುತ್ತಾರೆ. ರಾಮನಾಥನು ನಿರ್ಮಿಸಿದ ವಿಶಾಲವಾದ ಸಮುದ್ರವು ಮುಂದೆ ರಾಮಸಮುದ್ರ ಎಂಬ ಕೀರ್ತಿಗೆ ಒಳಪಡುತ್ತದೆ.

ಕ್ರಮೇಣ ರಾಮನಾಥನ ಮರಣಾನಂತರ ಕೆರೆವಸೆಯಲ್ಲಿ ಆಳ್ವಿಕೆ ನಡೆಸಿದವನು ಪಾಂಡ್ಯ. ಈತ ಮೂರನೇ ಪಾಂಡ್ಯ, ಅಭಿನವ ಚಾವುಂಡರಾಯ, ವೀರಪಾಂಡ್ಯ ಮುಂತಾದ ಹೆಸರು ಬಿರುದಿಗೆ ಪಾತ್ರನಾಗಿದ್ದ ದಕ್ಷ ಆಡಳಿತಗಾರನಾಗಿದ್ದನು. ಈತನ ಆಸ್ಥಾನದಲ್ಲಿ ಕವಿ, ಗಮಕಿ, ವಾದಿ, ವಾಗ್ಮಿ ಪಂಡಿತರಿಗೆ ವಿಶೇಷ ಸ್ಥಾನ ಗೌರವ ಉದಾರವಾಗಿ ದೊರಕುತ್ತಿತ್ತು. ಅಲ್ಲದೆ ಇತರ ಕವಿ, ಸಾಹಿತಿಗಳಿಗೆ ಆಶ್ರಯದಾತನಾದ ಈತನೂ ಸಹಾ ಕವಿಯಾಗಿದ್ದನು. ಸಂಸ್ಕೃತದಲ್ಲಿ 'ಭವ್ಯಾನಂದ ಕಾರಕ' ಎಂಬ ಕಾವ್ಯವನ್ನು ಬರೆದಿದ್ದನು. ಅಲ್ಲದೆ ಕಲೆ, ವಾಸ್ತುಶಿಲ್ಪಗಳಿಗೂ ಪಾಂಡ್ಯರಸನು ಪ್ರೋತ್ಸಾಹ ನೀಡಿದ್ದು ೧೪೩೨ ರಲ್ಲಿ ಕಾರ್ಕಳದಲ್ಲಿ ಗೊಮ್ಮಟೇಶ್ವರನ ವಿಗ್ರಹವನ್ನು ನಿಲ್ಲಿಸಿದ ಕೀರ್ತಿಗೆ ಪಾತ್ರನಾಗಿದ್ದನು.

ಪಾಂಡ್ಯರಸನ ನಂತರ ೧೫೦೧– ೧೫೪೦ ರ ವರೆಗೆ ಕಾರ್ಕಳವನ್ನು ಆಳಿದ ಅರಸ ೪ನೇ ಭೈರವ ಅಥವಾ ಇಮ್ಮಡಿ ಭೈರರಸ ಒಡೆಯನು ಆಡಳಿತ ನಡೆಸಿದ್ದಾನೆ.

ಭೈರವ ರಾಯನ ನಂತರ ೬ನೆಯ ಪಾಂಡ್ಯ ಅಥವಾ ವೀರ ಪಾಂಡ್ಯಪ್ಪೊಡೆಯ ಕಾರ್ಕಳವನ್ನು ಆಳುತ್ತಾನೆ. ಕೆರೆಬಸದಿಯ ಶಾಸನವು ಇವನನ್ನು 'ಅರಿರಾಯ ಗಂಡರ ದಾವಣಿ' ಎಂಬ ಹೆಸರನ್ನು ಉಲ್ಲೇಖಿಸಿದೆ. ಈತ ಕೆರೆವಸೆಯ

ಮಹಾದೇವ, ಪೆರ್ವಾಜೆಯ ಮಹಾದೇವ, ಮಾಳದ ವಿಷ್ಣುಮೂರ್ತಿ ದೇವಾಲಯಗಳಿಗೆ ದಾನವನ್ನು ನೀಡಿದ್ದು, ಈತ ಧಾರ್ಮಿಕ ಕಾರ್ಯಗಳಿಗೆ ಪ್ರೋತ್ಸಾಹ ನೀಡಿದ್ದನ್ನು ಕುರಿತು ತಿಳಿಸುತ್ತದೆ.

ಅನಂತರ ತರುವಾಯ ಕಾರ್ಕಳದಲ್ಲಿ ೭ನೆಯ ಪಾಂಡ್ಯ, ೫ನೆಯ ಭೈರವ, ಇಮ್ಮಡಿ ಭೈರವ, ೮ನೆಯ ಪಾಂಡ್ಯಮತ್ತು ಭೈರರಸ ಹೀಗೆ ಸುಮಾರು ೫ ಜನ ಅರಸರು ಆಳಿದರು ಎಂದು ತಿಳಿಯಬಹುದು.

ಇವರಲ್ಲಿ ೧೫೭೩ ರಲ್ಲಿ ಕಾರ್ಕಳವನ್ನಾಳಿದ ಇಮ್ಮಡಿ ಭೈರವನು ಪ್ರಖ್ಯಾತನಾದ ಅರಸನಾಗಿದ್ದನು. ಪಾಂಡ್ಯನಗರಿಯಲ್ಲಿ ಗೊಮ್ಮಟ ಬೆಟ್ಟಕ್ಕೆ ಇದಿರಾಗಿ ಕ್ರಿ.ಶ. ೧೫೮೬ ರಲ್ಲಿ ಚತುರ್ಮುಖ ಬಸದಿಯೊಂದನ್ನು ಕಟ್ಟಿಸಿದನು. ತನ್ನ ಆಳ್ವಿಕೆಯ ಸಂದರ್ಭದಲ್ಲಿ ಇಮ್ಮಡಿ ಭೈರವನು ಕಾರ್ಕಳದಲ್ಲಿ ಭವ್ಯವಾದ ಬಸದಿಯನ್ನು ನಿರ್ಮಿಸಿದನು. ಅಲ್ಲದೆ ಇತರ ದೇವಾಲಯಗಳಿಗೆ ದಾನವನ್ನು ನೀಡುವುದರ ಮೂಲಕ ಧರ್ಮಕ್ಕೆ ಆತನು ನೀಡಿದ ಕೊಡುಗೆ ಅಪಾರವಾದುದು. ಅಲ್ಲದೆ ವಿದ್ಯಾಭ್ಯಾಸಕ್ಕೂ ಆತನು ನೀಡಿದ ಸಹಾಯ ಗಮನಾರ್ಹ.

ಇಮ್ಮಡಿ ಭೈರರಸನ ತರುವಾಯ ಪಾಂಡ್ಯಪ್ಪೊಡೆಯನು ಕಾರ್ಕಳದ ಅರಸನಾಗಿ ಪಟ್ಟಕ್ಕೆ ಬಂದನು.

ಚದುರ ಚಂದ್ರಮನು ಕಾರ್ಕಳದ ಗೊಮ್ಮಟೇಶ್ವ ಚರಿತ್ರೆಯಲ್ಲಿ ನಿರೂಪಿಸಿರುವಂತೆ ಇಮ್ಮಡಿ ಭೈರವನ ರಾಣಿ ಮಲ್ಲಿದೇವಿಗೆ ಪಾಂಡ್ಯ, ಚಂದ್ರಶೇಖರ, ಇಮ್ಮಡಿ ಭೈರವ ಎಂಬ ಮೂವರು ಗಂಡು ಮಕ್ಕಳು. ಮುಂದೆ ಅಭಿನವ ಭೈರವನ ಕಾಲದಲ್ಲಿ ಗೊಮ್ಮಟೇಶ್ವರನ ಮಸ್ತಕಾಭಿಷೇಕ ನಡೆದ ವಿಚಾರವನ್ನು ಕವಿ ಚಂದ್ರಮನು ವರ್ಣನಾತ್ಮಕವಾಗಿ ಚಿತ್ರಿಸುತ್ತಾನೆ. ಈ ಉತ್ಸವದಲ್ಲಿ ಒಗ್ಗಟ್ಟಿನಿಂದ ಪಾಲ್ಗೊಳ್ಳುವ ಬಂಗರು, ಅಜಿಲರು, ಚೌಟರು, ಕೆಳದಿ ಅರಸರು, ವಿವಿಧ ಅಧಿಕಾರಿಗಳು, ಮುನಿವೃಂದಗಳು, ಜನಸಾಮಾನ್ಯರನ್ನು ಕುರಿತು ಕವಿ ಪ್ರತ್ಯಕ್ಷದರ್ಶಿಯಾಗಿ ಹೇಳುತ್ತಾನೆ.

ಕವಿ ಹೇಳುವ ಈ ವಿಚಾರಗಳು ಇಲ್ಲಿಯ ಸಂಸ್ಕೃತಿಯ ಉನ್ನತ ಮೌಲ್ಯವನ್ನು ಎತ್ತಿ ತೋರಿಸುತ್ತದೆ.

ಹೀಗೆ ಕಾರ್ಕಳದಲ್ಲಿ ತಮ್ಮ ದಕ್ಷ ಆಳ್ವಿಕೆ, ರಾಜಕೀಯ, ಶೈಕ್ಷಣಿಕ, ಸಾಹಿತ್ಯಿಕವಾಗಿ ಕಾರ್ಕಳದಲ್ಲಿ ಆಳಿದ ಅರಸರು ಕಾರ್ಕಳದಲ್ಲಿ ಅಪಾರವಾದ ಪ್ರಭಾವವನ್ನು ಬೀರಿದ್ದರು.

ಕ್ರಮೇಣ ಕಾರ್ಕಳದಲ್ಲಿ ಕೆಳದಿ ಅರಸರು ಪ್ರಭಾರ ಬೀರಲು ತೊಡಗಿದಾಗ, ಬೈರರಸರು ಸಹಜವಾಗಿ ತಮ್ಮ ಪ್ರಭಾವ ಸಾಮರ್ಥ್ಯವನ್ನು ಕಳೆದುಕೊಳ್ಳತೊಡಗಿದರು.

ಕೆಳದಿಯ ದೊಡ್ಡ ಸಂಕಣ್ಣ ನಾಯಕನು, ೫ನೆ ಭೈರವನನ್ನು ಯುದ್ಧದಲ್ಲಿ ಸೋಲಿಸುತ್ತಾನೆ.

ಕ್ರಿ.ಶ. ೧೫೮೬ – ೧೬೨೯ ರಲ್ಲಿ ವೆಂಕಪ್ಪ ನಾಯಕನು ಭೈರರಸನಿಂದ ಕೊಪ್ಪ, ಬೆಳ್ಕಾರೆ ಮೊದಲಾದ ಭಾಗಗಳನ್ನು ಕಿತ್ತುಕೊಂಡು ೭ನೆಯ ಭೈರವನಿಂದಲೂ ಕಪ್ಪವನ್ನು ಪಡೆದುಕೊಳ್ಳುತ್ತಾನೆ.

ಮುಂದೆ ಕ್ರಿ.ಶ. ೧೭೬೩ ರಲ್ಲಿ ಹೈದರ ಆಲಿಯು ನಡೆಸಿದ ಧಾಳಿಯೊಂದಿಗೆ ಭೈರವ ಅರಸರ ಆಳ್ವಿಕೆಯು ಸಂಪೂರ್ಣವಾಗಿ ಕೊನೆಗೊಳ್ಳುತ್ತದೆ.

****

ಅಧ್ಯಾಯ -೨

ಧಾರ್ಮಿಕ ವಿಶ್ಲೇಷಣೆ

೧. ಜೈನ ಧರ್ಮದ ಹಿನ್ನೆಲೆ :

"ಧರ್ಮಂ ಪ್ರಧಾನಂ ಅರ್ಥಂ ಧರ್ಮಾಫಿಫಳಂ

ಅದಕ್ಕೆ ರಸಮದು ಕಾಮಂ" (ಆ.ಪು.೧೦-೫೦)[1]

ಪುರುಷಾರ್ಥಗಳಲ್ಲಿ ಧರ್ಮಕ್ಕೆ ಅಗ್ರಸ್ಥಾನ. ಅರ್ಥ, ಕಾಮ, ಮೋಕ್ಷಗಳು ಧರ್ಮವೆಂಬ ವೃಕ್ಷವು ನೀಡಿದ ಫಲರೂಪಗಳು. ಈ ಮಾತು ಜೈನ ಧರ್ಮದ ಸಾರಸರ್ವಸ್ವವಾಗಿದೆ. ಇದು ಪಂಪನ ಮಾತುಗಳಲ್ಲಿ ಅತ್ಯಂತ ಸುಂದರವಾಗಿ ಅಭಿವ್ಯಕ್ತಗೊಂಡಿದೆ.

ಅವಿರುದ್ಧವಾಗಿ ಧರ್ಮಾ ರ್ಥ ಕಾಮಂಗಳ । ಸವಧರಿಸುವನೆ ಕೃತಾರ್ಥ ॥

ಅವನಿಗಲ್ಲದೆ ಸ್ವರ್ಗ ಮೋಕ್ಷ ಸುಖಂಗಳು । ಸಮನಿಸದೆಂದು ಚಿಂತಿಸಿದ ॥ ೧-೩೫

ಎನ್ನುವಲ್ಲಿ ಚದುರ ಚಂದ್ರಮ ಕೂಡ ಧರ್ಮಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿರುವುದನ್ನು ಕಾಣುತ್ತೇವೆ. [2]

ಗೊಮ್ಮಟೇಶ್ವರ ಚರಿತೆಯು ಜೈನ ಪುರಾಣ ವಿಷಯ, ತತ್ವ ಸಿದ್ಧಾಂತಗಳ ಪರಿಕಲ್ಪನೆಗಳನ್ನೊಳಗೊಂಡ ಕಾವ್ಯವಾಗಿರುವುದರಿಂದ ಸಾಂದರ್ಭಿಕವಾಗಿ ಜೈನ ಧರ್ಮದ ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಆಚರಣೆಯ ಮುಖಗಳು ಕಾವ್ಯದುದ್ದಕ್ಕೂ ತೆರೆದುಕೊಳ್ಳುತ್ತ ಹೋಗುವುದನ್ನು ಕಾಣಬಹುದಾಗಿದೆ. [3]

ಒಂದು ಕಾಲದಲ್ಲಿ ಕರ್ನಾಟಕದ ರಾಜಧರ್ಮವಾಗಿ ಮೆರೆದ ಈ ಧರ್ಮವು "ಮಾನವ ಕುಲ ತಾನೊಂದೆ ವಲಂ"[4] ಎಂಬ ಉನ್ನತ ಆದರ್ಶವನ್ನು ಎತ್ತಿಹಿಡಿದು ಸತ್ಯ, ಅಹಿಂಸೆ, ತ್ಯಾಗ, ದಯೆ, ಬ್ರಹ್ಮಚರ್ಯದಂತಹ ಮಾನವೀಯ ಮೌಲ್ಯಗಳನ್ನು ಕನ್ನಡಿಗರ ಬದುಕಿನಲ್ಲಿ ಚಿರಂತನವಾಗಿ ನೆಲೆ ನಿಲ್ಲುವಂತೆ ಮಾಡಿತ್ತು. ಇದನ್ನು ಶಾಸನ ಕವಿಯೋರ್ವನು[5]

"ಜೈನಧರ್ಮವಾಸವಾದತ್ತಮಳ ವಿನಯದಾಗಾರ ವಾದತ್ತು ಪದ್ಮಾ

ಸನನಿಸ್ಪಾರ್-ಸದ್ಮವಾದತ್ತಲೆ ವಿರದ ಯಶೋಧಾಮವಾದತ್ತು ವಿದ್ಯಾ

---

೧. ಪಂಪನ ಆ.ಪು. ೧೦-೫೦, ಪ.ಸ (೧೦ - ೫೦)
೨. ಚದುರಚಂದ್ರಮನ ಗೊಮ್ಮಟೇಶ್ವರ ಚರಿತೆ, ಪೂರ್ವೋಕ್ತ, ೨-೩೫
೩. ಇನ್ನೊಂದು ಸಂದರ್ಭದಲ್ಲಿ ಪಾಂಡ್ಯ ರಾಜನು 'ಧರ್ಮಾರ್ಥ ಕಾಮಗಳಲ್ಲಿ ಯಾವುದು ಮುಖ್ಯ?' ಎಂದು ಸಭೆಯಲ್ಲಿ ಪ್ರಶ್ನಿಸಿದಾಗ ಸಚಿವರು"ಧರ್ಮವೇ ಕಾಮಾರ್ಥಗಳಿಗೆ ಮೊದಲನೆಯದು" ಎಂದು ಉತ್ತರಿಸುತ್ತಾರೆ. ಭರತೇಶ ಮುಂತಾದವರೆಲ್ಲರೂ ಧರ್ಮವೇ ಮುಖ್ಯವೆಂದು ಆಯ್ದುಕೊಂಡರೆಂದು ಸಮರ್ಥಿಸುತ್ತಾರೆ. ಅದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ೨-೩೦, ೬೦, ೬೧
೪.
೫. E.C. Vol III Part II Pg. 157 ಶಾಸನ ಸಾಹಿತ್ಯ ಪರಿಚಯ ಸಂಚಯ, ಎ.ಎಂ ಅಣ್ಣಿಗೇರಿ, ಪು.೧೬೧

ಧನಜನ್ಯಸಾಧಿನ ವಾದತ್ತ ಸಮತರದ ಗಂಭೀರ ಸದ್ಗೇಹವಾದ

ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂಬಾರು ಕರ್ನಾಟಕದೇಶಂ"

ಎಂದು ವೈಭವೀಕರಿಸುವ ಅಂಶವನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು.

೧೧ನೇಯ ಶತಮಾನದಿಂದ ಕರ್ನಾಟಕದಲ್ಲಿ ತಲೆದೋರಿದ ರಾಜಕೀಯ, ಸಾಮಾಜಿಕ, ಧಾರ್ಮಿಕ ಪಲ್ಲಟಗಳಿಂದಾಗಿ ಜೈನ ಧರ್ಮವು ತನ್ನ ವರ್ಚಸ್ಸನ್ನು ಕಳೆದುಕೊಂಡರೂ, ಕರಾವಳಿ ಪರಿಸರದ ತುಳುನಾಡಿನಲ್ಲಿ ಅದು ತನ್ನ ಭದ್ರನೆಲೆಯನ್ನು ಕಂಡುಕೊಂಡಿತು. ವಿಜಯನಗರ ಚಕ್ರವರ್ತಿಗಳ 'ಸರ್ವಧರ್ಮ ಸಮನ್ವಯ', ದೃಷ್ಟಿ, ಸ್ಥಳೀಯ ತುಂಡರಸರು ಜೈನಮತಾವಲಂಬಿಗಳಾಗಿದ್ದರೂ ಇವುಗಳಿಂದಾಗಿ ಜೈನ ಸಂಸ್ಕೃತಿ ಇಲ್ಲಿ ಗರಿಬಿಚ್ಚಿ ತನ್ನ ಉನ್ನತ ನೆಲೆಯನ್ನು ಕಂಡುಕೊಂಡಿತು. ಇದರಿಂದಾಗಿ ಜೈನ ಸಾಹಿತ್ಯ, ಶಿಲ್ಪ, ವಾಸ್ತುಶಿಲ್ಪ, ಮೂರ್ತಿಕಲೆ, ಚಿತ್ರಕಲೆಗಳು ಅಭಿವೃದ್ಧಿಗೊಂಡವು ಎಂದು ಹೇಳಬಹುದು.

ಕೆಳದಿ ಅರಸರ ಕಾಲದಲ್ಲಿ ಸ್ಥಳಿಯ ತುಂಡರಸರು ತಮ್ಮ ಅಧಿಕಾರವನ್ನು ಕಳೆದುಕೊಂಡರೂ ಸಾಮಾಜಿಕವಾಗಿ ಅದರ ಪ್ರಭಾವವೇನು ಕುಂಠಿತವಾಗಿರಲಿಲ್ಲ.

ಕಾರ್ಕಳದ ಎರಡನೆಯ ಭೈರರಸನ ಆಸ್ಥಾನಕವಿಯಾಗಿದ್ದ ಪ್ರಸ್ತುತ ಚಂದ್ರಮನ ಗೊಮ್ಮಟ ಚರಿತೆ ಗ್ರಂಥದ ಒಳಮಗ್ಗುಲಲ್ಲಿ ಉಲ್ಲೇಖಗೊಂಡಿರುವ ಅನೇಕ ಅಂಶಗಳನ್ನು ವಿಮರ್ಶಿಸಿದರೆ ಇದು ಸ್ಪಷ್ಟವಾಗುತ್ತದೆ.

೨. ಕಾರ್ಕಳದ ಪರಿಸರ :

ಕವಿಯು ಆರಂಭದ ನಾಲ್ಕು ಸಂಧಿಗಳಲ್ಲಿ ಕಾರ್ಕಳದ ಪರಿಸರದ ಚಿತ್ರವನ್ನು ಸ್ವಾರಸ್ಯವಾಗಿ ನೀಡುತ್ತಾನೆ. ಭರತ ಖಂಡದ ಒಳಗಡೆ ಇರುವ ಆರ್ಯಖಂಡವು ಚಪನ್ನ ದೇಶಗಳಿಂದೊಡಗೂಡಿ ವೈಭವದಿಂದ ಶೋಭಿಸುತ್ತದೆ. ಇದರ ಒಂದು ದಿಕ್ಕಿನಲ್ಲಿ ಲವಣ ಸಮುದ್ರವನ್ನು ಒಳಗೊಂಡಿದ್ದು ಇತರ ಪ್ರದೇಶಗಳಲ್ಲಿ ವೀತರಾಗನ ಸದ್ಭಕ್ತಿಯುತರು ವಾಸವಿದ್ದು ಅವರು ಧರ್ಮಮಾರ್ಗದಲ್ಲಿ ನಡೆಯುತ್ತಿದ್ದಾರೆಂದು ಕವಿ ಸ್ಪಷ್ಟಪಡಿಸುತ್ತಾನೆ.

ಆ ಭರತದ ಷಟ್ಖಂಡ ಭೂಮಿಗಳೊಳು । ಶೋಭಿಸುವಾರ್ಯಖಂಡ ॥
ಭೂ ಭಾಗದಲ್ಲಿ ಚಪ್ಪನ್ನ ದೇಶಂಗಳು । ಸೌಭಾಗ್ಯದಿಂದೊಪ್ಪುತಿಪವು ॥ ೧-೬೩

ಅವರೊಳು ತೌಳವ ದೇಶವಿಹುದು ಉಪ। ಲವಣ ಸಮುದ್ರಗೊತ್ತಿನೊಳು ॥
ವಿವಿಧ ವೈಭವದಿಂದ ಸರಿಯಲ್ಲ ತನಗೆಂದು । ದಿವಿಜ ಲೋಕವನಗುತಿಹುದು ॥ ೧-೬೪

[illegible]

ಈತಿ ಬಾಧೆಗಳಿಲ್ಲ ದುರ್ಭಿಕ್ಷಗಳಿಲ್ಲ । ಜಾತಿ ಸಂತರವೆಂಬುದಿಲ್ಲ ॥

ನೀತಿ ಮೀರಿ ನಡೆದವರಿಲ್ಲ ಶ್ರೀ । ವೀತರಾಗನ ಸದ್ಭಕ್ತಿಯುತರು ॥ ೧-೬೫

ಎಲ್ಲಿ ನೋಡಿದರು ದೇವಸ್ವ ಬ್ರಹ್ಮಸ್ವಗ । ಳೆಲ್ಲಿ ನೋಡಿದರು ಧ್ಯಾನಗಳು ॥

ಎಲ್ಲಿ ನೋಡಿದರು ವಾಪೀ ಕೂಪ ನದಿಗಳು । ಸಲ್ಲೀಲೆಯಿಂದೊಪ್ಪುತಿಹವು ॥ ೧-೭೧

ಎಂದು ಎಲ್ಲಿ ನೋಡಿದರೂ ದೇವಸ್ವ, ಬ್ರಹ್ಮಸ್ವ, ಬಾವಿ, ಕೂಪ, ನದಿ, ಫಲಪುಷ್ಪತರುಗಳು ಸಮೃದ್ಧಗೊಂಡಿದ್ದವು. ಅಮೃತ ಕುಂಭಗಳನ್ನು ಹೊತ್ತ ತೆಂಗಿನ ಮರಗಳು ಮನಸೆಳೆಯುತ್ತಿದ್ದವು. ಕಂತುರಾಯನ ಪೊಳಲಂತೆ ಕಾರ್ಕಳ ಪಟ್ಟಣವಿದ್ದು ಅದು ಹಿರಿಯಂಗಡಿ, ಬೆಟ್ಟದಂಗಡಿ, ಕೆರೆಯಕೋಡಿಗಳಿಂದ ಸುತ್ತುವರಿದಿತ್ತು. ಬೆಟ್ಟದಂಗಡಿಯನ್ನು "ಶ್ರೀಪಾಂಡ್ಯನಗರಿ" ಎಂದು ಕರೆಯುತ್ತಿದ್ದರು.

೨.೩. ಬಸದಿಗಳು ಮತ್ತು ಜಿನಬಿಂಬಗಳು :

ಎಲ್ಲಿ ನೋಡಿದರೂ ಬಸದಿಗಳ ಸಾಲು ಸಾಲು । ಭಾನು ಬಿಂಬವ ನು ಚುಂಬಿಸುವಂತಿರುವ ಶ್ರೀ ನೇಮಿಜಿನೇಶನ ಚೈತ್ರಗ್ರಹದ ಎದುರಿನ ಮಾನಸ್ತಂಭವು 'ಮಣಿ ಘಂಟೆಗಳಿಂದ ಶೃಂಗಾರಗೊಂಡಿದೆ" ಮೂರು ನೆಲೆಗಳಿಂದ ಮೂರು ಲೋಕದ ಚೆಲ್ವ । ತೋರಿಸುವಂತೆ ಭವ್ಯರಿಗೆ" - ಆ ನೇಮಿಜಿನಪನ ಬಸದಿಯು ಶೋಭಿಸುತ್ತದೆ. ಅಲ್ಲಿ

ಮುತ್ತು ಮಾಣಿಕ ನೀಲಪಚ್ಚೆಪವಳ ಚೆನ್ನ । ದುತ್ತಮ ಜಿನಬಿಂಬದಿಂದ ॥

ಸುತ್ತಿದ ಕೋಟೆ ಚೆನ್ನದ ಕಳಸದಿ ಪೆಂಪು । ವೆತ್ತಿಹುದಾ ಜಿನಗೇಹ ॥ ೧- ೧೧೧

ಎಂದು ಅಮೂಲ್ಯ ಜಿನಬಿಂಬಗಳ ಮಾಹಿತಿಯನ್ನು ನೀಡುತ್ತಾನೆ.

ಜೈನಧರ್ಮದಲ್ಲಿ ಶಿಲ್ಪ, ಲೋಹ, ಕಾಷ್ಠಗಳಲ್ಲಿ ಜಿನಬಿಂಬಗಳನ್ನು ಕೆತ್ತಿಸುವಂತೆ, ನವರತ್ನಗಳಿಂದಲೂ ಜಿನಬಿಂಬಗಳನ್ನು ನಿರ್ಮಿಸಿ, ಪೂಜಿಸುವ ಸಂಪ್ರದಾಯವಿತ್ತು. ಅಂದಿನ ಜೈನ ಶ್ರಾವಕರು ಶ್ರೀಮಂತರಾಗಿದ್ದು, ವಿಶೇಷವಾಗಿ ತಮ್ಮನ್ನು ವ್ಯಾಪಾರಗಳಲ್ಲಿ ತೊಡಗಿಸಿಕೊಂಡು ದೇಶ, ವಿದೇಶಗಳಲ್ಲಿ ಮುತ್ತು, ರತ್ನಗಳ ವ್ಯಾಪಾರದಲ್ಲಿ ನಿರತರಾಗಿದ್ದರೆಂದು ಅನ್ಯ ಆಧಾರಗಳಿಂದಲೂ ತಿಳಿದು ಬರುತ್ತದೆ. ತಾವು ಗಳಿಸಿದ ಹೇರಳ ಸಂಪತ್ತನ್ನು ವ್ಯಯಿಸಿ ಅವರು ಬಸದಿಗಳನ್ನು ನಿರ್ಮಿಸಿ, ದಾನ, ಧರ್ಮಗಳನ್ನು ನಡೆಸುತ್ತಿದ್ದರಲ್ಲದೆ ನವರತ್ನಗಳಿಂದ ಜಿನಬಿಂಬಗಳನ್ನು ಮಾಡಿಸಿ ಬಸದಿ,ಮಠಗಳಿಗೆ ದಾನ ನೀಡುತ್ತಿದ್ದರು.

ಹೀಗೆ ದಾನ ನೀಡಿದ ದೃಷ್ಟಾಂತಗಳು ಈಗಲೂ ಮೂಡಬಿದರೆಯ ಜೈನ ಮಠದ ಸಿದ್ಧಾಂತದಲ್ಲಿರುವ ನವರತ್ನಬಿಂಬಗಳ ಪೀಠಸ್ಥ ಶಾಸನಗಳನ್ನು ನೋಡಬಹುದು.

ಇಂಥದೇ ಅಮೂಲ್ಯ ವಿಗ್ರಹಗಳನ್ನು ಹೊಂಬುಜದ ಶ್ರೀ ದೇವೇಂದ್ರಕೀರ್ತಿಗಳ ಜೈನಮಠ, ಶ್ರವಣಬೆಳಗೊಳದ ಶ್ರೀಚಾರುಕೀರ್ತಿಗಳ ಜೈನಮಠದಲ್ಲಿಯೂ ಇವೆ. ಇದು ಕರ್ನಾಟಕದ ಸಾಂಸ್ಕೃತಿಕ ಸಂಪತ್ತುಗಳಾಗಿದ್ದು ಅಧ್ಯಯನದ ದೃಷ್ಟಿಯಿಂದ ಮಹತ್ವದ ವಿಷಯವೆನ್ನಬಹುದು.

೨.೪ ಶ್ರಾವಕರು :

ಜೈನ ಗ್ರಹಸ್ಥರನ್ನು ಶ್ರಾವಕರೆಂದು ಕರೆಯುತ್ತಾರೆ. ಇವರನ್ನು ಭವ್ಯರೆಂದೂ ಹೆಸರಿಸಲಾಗುತ್ತದೆ. ಕಾರ್ಕಳದ 'ಪಾಂಡ್ಯನಗರಿ'ಯಲ್ಲಿ ವಾಸವಿದ್ದ ಶ್ರಾವಕರನ್ನು ಕವಿ ಹೀಗೆ ವರ್ಣಿಸಿದ್ದಾನೆ.

ಆಹಾರ ದಾನವಭಯ ದಾನ ಭೈಷಜ್ಯ। ದಾನ ಶಾಸ್ತ್ರದಾನಗಳ ॥

ಆಹ್ಲಾದದೊಳು ಮಾಳ್ಪ ಭವ್ಯಜನಂಗಳ । ಮೋಹರವಿಹುದೇನನೆಂಬೆ ॥ ೧-೧೨೩

ಜೈನ ಸಂಪ್ರದಾಯದಲ್ಲಿ ಪ್ರತಿಯೊಬ್ಬ ಶ್ರಾವಕನೂ ಆಹಾರದಾನ, ಅಭಯದಾನ, ಭೈಷಜ್ಯ ದಾನ ಮತ್ತು ಶಾಸ್ತ್ರದಾನವೆಂಬ ಚತುರ್ವಿಧ ದಾನಗಳನ್ನು ತಪ್ಪದೇ ಮಾಡಬೇಕಾಗುತ್ತದೆ. ಇದು ಆತನ ಕರ್ತವ್ಯವೂ ಆಗಿದೆ. ಇಂಥ ಜನರ ಸಮೂಹಗಳು ಪಾಂಡ್ಯನಗರಿಯ ಪರಿಸರದಲ್ಲಿ ವಾಸವಾಗಿತ್ತು. ಇವರು

ವಿನಯ ವಿತರಣ ವಿವೇಕ ಸಂಪನ್ನರು । ಜಿನಪೂಜೆಯೊಳಗರ್ತಿಯುತರು ॥

ಅನುದಿನ ವ್ರತಶೀಲ ಚಾರಿತ್ರರತ್ನ ಭೂಷಣರನು ಪಮಭವ್ಯರಲ್ಲಿಹರು ॥೧-೧೨೫

ಎಂದು ಹೇಳಿ ಇವರು 'ಜೈನ ರತ್ನತ್ರಯ'ಗಳಾದ ಸಮ್ಯಕ್ ದರ್ಶನ, ಜ್ಞಾನ, ಚಾರಿತ್ರ್ಯವಂತರಾಗಿದ್ದಾರೆಂದು ಇವರನ್ನು ಪರಿಚಯಿಸುತ್ತಾನೆ. ಇವರು ಸದಾಕಾಲ ಧರ್ಮಮಾರ್ಗದಲ್ಲಿ ನಡೆಯುತ್ತಿದ್ದು, "ಉತ್ತಮ ಮುನಿಗಳಿಗೆ ಆಹಾರ ದಾನವನಿತ್ತು" ಭೋಗೋಪ ಭೋಗಗಳನ್ನು ನಡೆಸುತ್ತಿದ್ದರು. ಹಾಗೂ ಷಟ್ಕರ್ಮನಿರತರೂ ಆಗಿದ್ದರು.

ಷಟ್ಕರ್ಮಗಳೆಂದರೆ : ಗೃಹಸ್ಥನಾದವನು ತನ್ನ ನಿತ್ಯ ಕೆಲಸದಲ್ಲಿ ಅನಿರೀಕ್ಷಿತ, ಅನಿವಾರ್ಯವಾಗಿ ಕೆಲವು ಪಾಪಕರ್ಮಗಳನ್ನು ಮಾಡುತ್ತಾನೆ. ಈ ಪಾಪಕರ್ಮಗಳಿಂದ ಪಾರಾಗಬೇಕಾದರೆ ಆತನು ಷಟ್ಕರ್ಮಗಳೆನ್ನುವ ಆರು ಕ್ರಿಯೆಗಳನ್ನು ಪಾಲಿಸಬೇಕಾಗುತ್ತದೆ. ದೇವಪೂಜೆ, ಗುರುಗಳ ಸೇವೆ, ಸ್ವಾಧ್ಯಾಯ, ಸಂಯಮ, ತಪ, ದಾನಗಳ ಷಟ್ಕರ್ಮಗಳಾಗಿವೆ.

೨.೫ ಚತು : ಸಂಘ ವ್ಯವಸ್ಥೆ:

ಜೈನರಲ್ಲಿ ಚಾತುರ್ವರ್ಣ ವ್ಯವಸ್ಥೆಯಿರಲಿಲ್ಲ. ಅದರ ಬದಲು ಮಹಾವೀರನ ಕಾಲದಿಂದಲೂ ಪ್ರಚಲಿತವಿದ್ದ ಚತುಃಸಂಘ ವ್ಯವಸ್ಥೆ ಎಲ್ಲೆಡೆ ಅಸ್ತಿತ್ವದಲ್ಲಿತ್ತು. ಮುನಿ, ಆರ್ಯಿಕಾ, ಶ್ರಾವಕ, ಶ್ರಾವಿಕಾ ಇವರನ್ನೇ ಚತುಃಸಂಘವೆಂದು ಕರೆಯಲಾಗುತ್ತಿತ್ತು. ಇವರೇ ಜೈನ ಸಮಾಜದ ಪ್ರಧಾನವಾದ ನಾಲ್ಕು ಶಕ್ತಿಗಳಾಗಿದ್ದರು. ಇಲ್ಲಿ ಜಾತಿಭೇದದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇವುಗಳಲ್ಲಿ ಮೊದಲಿನವೆರಡು ಸನ್ಯಾಸಿಗಳದ್ದಾದರೆ, ಉಳಿದವೆರಡು ಗೃಹಸ್ಥ ಜೀವನಕ್ಕೆ ಸಂಬಂಧಿಸಿದವು.

ಪಾಂಡ್ಯರಾಯನು, ಕಾರ್ಕಳ ಪಾಂಡ್ಯ ನಗರಿಯಲ್ಲಿ – ಗೊಮ್ಮಟೇಶನ ವಿಗ್ರಹ ಮಾಡಿಸುವಾಗ ಮತ್ತು ಇಮ್ಮಡಿ ಭೈರವನು ಗೊಮ್ಮಟೇಶ್ವರನ ಪುನರ್ ಪ್ರತಿಷ್ಠೆ ಮಸ್ತಕಾಭಿಷೇಕವನ್ನು ಮಾಡಿಸುವಾಗ, ಚತುಃಸಂಘವನ್ನು ಮುಂದಿಟ್ಟುಕೊಂಡು ಆ ಕಾರ್ಯಗಳನ್ನು ನಡೆಸಿದರೆಂದು ಹೇಳಲಾಗಿದೆ. ಲಲಿತಕೀರ್ತಿ ಮುನಿವರ್ಯನ

ಭೂರಿದಾನಗಳನು ಯಾಚಕರಿಗೆ ಕೊಟ್ಟ । ಧಾರಿಣಿ ಪೊಗಳು ವಂದದೊಳು॥

ಮಾರಮಣರಿಗುಡು ಗೊರೆಯನು ಕೊಟ್ಟನು । ದಾರ ಶಿರೋಮಣಿಯಾಗ ॥ ೭–೧೪೩

ದಾನಸನ್ಮಾನದಿಂದಾ ಚತುಃಸಂಘವ । ತಾನು ಮನ್ನಿಸಲಾ ಮುನಿಪ ॥

ನಾನಾ ದೇಶದ ದೊರೆಗಳು ಶ್ರಾವಕ । ರಾನಂದದಿಂದ್ಯೆತಂದು ॥೧೭–೧೪೪

ಚತುಃ ಸಂಘಕ್ಕೆ ದಾನಗಳನ್ನು ನೀಡಿ ಅವರನ್ನು ತೃಪ್ತಿಪಡಿಸಿದ ಚಿತ್ರವನ್ನು ಕವಿ ನೀಡುತ್ತಾನೆ.

೨.೬ ಧರ್ಮಾಚರಣೆ :

ಜೈನ ಮತೀಯರ ಧರ್ಮಾಚರಣೆಗಳು ನಾನಾ ತೆರನಾಗಿವೆ. ದಾನ, ಪೂಜೆ, ಶೀಲೋಪಾಸಗಳೆಂದು ಅನೇಕ ತರಹ ಆಚರಣೆಗಳನ್ನು ನಡೆಸುತ್ತಾರೆ.

ದಾನ ಪೂಜೆಗಳು ಶೀಲೋಪವಾಸಗಳೆಂದು । ನಾನಾ ತೆರನುಂಟು ಧರ್ಮ

ನಾನಿದರೊಳಗಿನ್ನೇನ ಮಾಡಲಿಯೆಂದು । ತನು ಯೋಚಿಸಿದ ನರೇಂದ್ರ ॥ ೨–೬೪

ಚೈತ್ಯಾಲಯ, ಬಿಂಬ ಪ್ರತಿಷ್ಠೆಗಳನ್ನು ಮಾಡಿಸಿದರೆ ಧರ್ಮ ಜಾಗೃತಿಗೊಂಡು ಎಲ್ಲರೂ ಸಂತೋಷ ಪಡುತ್ತಾರೆ. ಇಂದಿನ ಪಂಚಮ ಕಾಲದಲ್ಲಿ ಕಾಂಚನ, ನವರತ್ನ, ಹಿತ್ತಾಳೆ, ಕಂಚು ಮುಂತಾದ ಲೋಹಗಳಿಂದ ಪ್ರತಿಮೆಗಳನ್ನು ಮಾಡಿಸುವುದು ಸೂಕ್ತವಲ್ಲ. ಇದರಿಂದ ಜನರ ಚಿತ್ತ ಚಂಚಲವಾಗಿ ಅವನ್ನು ಅಪಹರಿಸುವ ಭಯವಿರುತ್ತದೆ.

ಕಾಂಚನ ರತ್ನ ಜಟಿತ ಮುತ್ತು ಹಿತ್ತಾಳೆ । ಕಂಚು ಮುಂತಾದವರಿಂದ ॥

ಪಂಚಮ ಕಾಲದೊಳಗೆ ಪ್ರತಿಮೆಯ ಮಾಡೆ । ಚಂಚಲದಿಂದವನುಳಿದು ॥೨–೬೭

ಶಿಲೆಯೊಳಗೊಂದು ಬಿಂಬವನು ತಿದ್ದಿಸಿದರೆ । ನೆಲೆಗೊಂಡು ನಿಲುವುದು ಕೀರ್ತಿ।

ಕಲಿಯುಗದೊಳಗೊಂದು ಬಲುದೊಡ್ಡ ಬಿಂಬವ । ನಿಲಿಸುವ ಯತ್ನವ ನೆನೆದ ॥ ೨–೬೮

ಇದರಿಂದ ಲೋಹದ ವಿಗ್ರಹವನ್ನು ನಿರ್ಮಿಸುವುದು ಸೂಕ್ತವಲ್ಲವೆಂಬ ಅಭಿಪ್ರಾಯ ಒಂದೆಡೆ ವ್ಯಕ್ತವಾಗಿರುವುದು ಕುತೂಹಲಕಾರಿಯಾಗಿದೆ.

ಶುಭ ಮುಹೂರ್ತದಲ್ಲಿ ಕೆಲಸ ಪ್ರಾರಂಭಿಸಿ, ಜಲ, ಗಂಧ, ಅಕ್ಷತೆ, ನೈವೇದ್ಯ, ದೀಪ, ಧೂಪಗಳಿಂದ ವಿಧಿವತ್ತಾಗಿ

ಶಿಲೆಯನ್ನು ಪೂಜಿಸಿ, ಕೆತ್ತನೆಯ ಕೆಲಸವನ್ನು ಆರಂಭಿಸುತ್ತಾರೆ. ಕೆತ್ತನೆಯ ಕಾರ್ಯ ಮುಗಿಯುವವರೆಗೆ ತಾನು ಮುನಿಗಳಿಗೆ ಭಿಕ್ಷೆ ನೀಡದೆ ಊಟ ಮಾಡುವುದಿಲ್ಲ ಎಂಬ ವ್ರತವನ್ನು ಪಾಂಡ್ಯ ರಾಜನು ಕೈಗೊಳ್ಳುತ್ತಾನೆ.

'ಯತಿಗಳ್ಗೆ ಚರಿಗೆಯ ಮಾಡಿಸಿದಲ್ಲದೆ । ಪ್ರತಿದಿನ ತಾನುಣ್ಣೆನೆಂಬ ॥

ವ್ರತವುಳ್ಳುದಂದು ಮಿಂದು ಧೋತ್ರವನುಟ್ಟು । ಕ್ಷಿತಿಪತಿಯತಿಗಳ ಬರವ । ೨-೮೨

ಅವನ ಆಸೆಯಂತೆ ಮುನಿಗಳು ಚರಿಗೆಗೆ ಬಂದಾಗ ಅವರಿಗೆ ಆಹಾರದಾನ ಮಾಡಿ ಅವರಿಂದ 'ಅಕ್ಷಯ ದಾನ ಸತ್ಫಲ ಮತ್ತು ಪಂಚಮ ಗತಿ ಸಿದ್ದಿರಸ್ತು' ಎಂಬ ಆಶೀರ್ವಾದ ಪಡೆದುಕೊಂಡು ಸಂತುಷ್ಟನಾಗುತ್ತಾನೆ.

೨.೭ ಆರಾಧನೆಗಳು :

ಜೈನ ಸಂಪ್ರದಾಯದಲ್ಲಿ ಅನೇಕ ಆರಾಧನೆಗಳು ಪ್ರಚಲಿತವಲ್ಲಿವೆ.ಅವುಗಳಲ್ಲಿ ಕೆಲವು ಆರಾಧನೆಗಳ ಪ್ರಸ್ತಾಪವನ್ನು ಚಂದ್ರಮನು ತನ್ನ ಕಾವ್ಯದಲ್ಲಿ ಮಾಡಿದ್ದಾನೆ.

ಉದಾಹರಣೆಗೆ : ಸಿದ್ದ ಚಕ್ರ ಯಂತ್ರಾರಾದನೆ (೨-೮೧), ಕುಂಡವೇದಿಕೆ (೩-೯೭), ವಾಸ್ತುಪೂಜೆ (೩-೯೮), ಧಾಮಶುದ್ದಿ (೩-೧೦೨), ಬಿಂಬ ಶುದ್ಧಿ (೩-೯೮), ಪ್ರಾಣಪ್ರತಿಷ್ಠೆ (೩-೧೦೬), ನವಗ್ರಹ ಶಾಂತಿ (೩-೧೦೮) ೧೦೦೮ ಕಲಶಾಭಿಷೇಕ (೩-೧೦೭) ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು.

ಅದೇ ರೀತಿಯಾಗಿ ಸಂಘ ಪೂಜೆ (೧೬-೧೩೪, ೧೪೦, ೧೪೧), ವಾಸ್ತು ಬಲಿದಾನ (೧೨-೨೩), ಧ್ವಜಾರೋಹಣ (೧೭-೨೫), ಅಂಕುರಾರ್ಪಣ ವಿಧಿ (೧೭-೩೩), ಜನ್ಮಾಭಿಷೇಕ (೧೭-೫೧), ಪಟ್ಟಾಭಿಷೇಕ (೧೭-೫೨) ಪರಿನಿಷ್ಟಮಣ ಕಲ್ಯಾಣಗಳು (೧೭-೫೩), ನೇತ್ರೋನ್ಮಿಲನ (೧೭-೫೮)

ಮುಂತಾದವುಗಳನ್ನು ನಡೆಸಿದ ಉಲ್ಲೇಖಗಳೂ ಮತ್ತೊಂದೆಡೆ ಕಂಡು ಬರುತ್ತದೆ. ಅಲ್ಲದೆ ಬಾಹುಬಲಿಯ ಪ್ರತಿಷ್ಠೆಯ ಸಂದರ್ಭದಲ್ಲಿ ನಡೆದ ರಥೋತ್ಸವ ಕಾರ್ಯಕ್ರಮವೂ ವಿಶೇಷವಾದುದು ವೈಭವದಿಂದ ರಥವನ್ನು ಬಾಹುಬಲಿ ಬೆಟ್ಟದಿಂದ ನೇಮಿನಾಥ ಚೈತ್ಯಾಲಯದವರೆಗೆ ಎಳೆಸಲಾಯಿತೆಂದು ಕವಿ ತನ್ನ ಕಾವ್ಯದಲ್ಲಿ ಸೂಕ್ಷ್ಮವಾಗಿ ಸೂಚಿಸಿದ್ದಾನೆ. (೧೭-೮೧).

೨.೮ ಪೂಜಾವಿಧಿಗಳು

ಜೈನರಲ್ಲಿ ಪೂಜಾವಿಧಿಗಳು ನಿತ್ಯ, ನೈಮಿತ್ತಿಕ ಮತ್ತು ಸಾಂದರ್ಭಿಕ ಎಂದು ಮೂರು ವಿಧವಾಗಿ ಪ್ರಚಲಿತವಿರುವುದನ್ನು ಕಾಣುತ್ತೇವೆ. ಪ್ರತಿದಿನ ಜಿನ ಪ್ರತಿಮೆಗೆ ಜಲ, ಕ್ಷೀರ, ಪಂಚಾಮೃತಗಳ ಅಭಿಷೇಕ ಮಾಡಿ, ಮಂತ್ರಪೂರ್ವಕವಾಗಿ ಆರತಿ, ಬೆಳಗಿ ಮಾಡುವ ಪೂಜೆಗೆ ನಿತ್ಯ ಪೂಜೆಯೆಂದು ಕರೆಯಲಾಗುತ್ತದೆ. ಇದನ್ನುಜೈನರು ಮನೆಯಲ್ಲಿಯೂ ಆಚರಿಸುತ್ತಾರೆ.

ವಿಶೇಷ ಪರ್ವ, ಉತ್ಸವಾದಿ ದಿನಗಳಲ್ಲಿ ನಡೆಸುವ ಅಷ್ಟಾಹ್ನಿಕ, ಐಂದ್ರ ಧ್ವಜ, ಚತುರ್ಮುಖ, ಕಲ್ಪದ್ರುಮ ಮತ್ತು ಪ್ರತಿಷ್ಠಾಪನೆ, ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಮಾಡುವ ಪೂಜೆಗೆ ನೈಮಿತ್ತಿಕ ಪೂಜೆ ಎನ್ನುತ್ತಾರೆ. ಸಾಮಾನ್ಯವಾಗಿ ಶ್ರಾವಕರ ಮನೆಗಳಲ್ಲಿ, ಬಸದಿಗಳಲ್ಲಿ ನಡೆಸುವ ಪೂಜಾ ವಿಧಾನಗಳಲ್ಲಿಯೂ ಜೈನ ಸಂಹಿತಾ ಶಾಸ್ತ್ರಗಳಲ್ಲಿ ವಿವರಿಸಲ್ಪಟ್ಟ ಪೂಜೆಗಳೇ ಆಗಿವೆ.

ಜೈನ ಪೂಜಾ ಪದ್ಧತಿಯಲ್ಲಿ ಆಹ್ವಾನ, ಸ್ಥಾಪನಾ, ಸನ್ನಿಧಿಕರಣ, ಪೂಜನ ಮತ್ತು ವಿಸರ್ಜನ ಎಂಬ ಐದು ಅಂಗಗಳಿದ್ದು ಎಲ್ಲಾ ದೇವ ದೇವತೆಯನ್ನು ಇದೇ ಕ್ರಮದಲ್ಲಿ ಪೂಜಿಸುತ್ತಾರೆ. ಪೂಜೆಗೆ ಜಲ, ಗಂಧ, ಅಕ್ಷತೆ, ದೀಪ, ಧೂಪ, ಪುಷ್ಪ, ಚರು ಈ ಎಂಟು ಬಗೆಯ ವಸ್ತುಗಳನ್ನು ಬಳಸುವುದು ಸಂಪ್ರದಾಯ. ಇದಕ್ಕೆ ಅಷ್ಟವಿಧಾರ್ಚನೆಗಳೆಂದು ಹೆಸರು. ಅದೇ ರೀತಿ ಬಸದಿಗೆ ತೆರಳಿ ಪುಂಜವನ್ನು ಇಡುವುದು. ಜಿನ ಮಂದಿರವನ್ನು ಕಟ್ಟಿಸುವುದು. ಜಿನ ಪ್ರತಿಮೆಯನ್ನು ಮಾಡಿಸುವುದು, ದಾನ ದತ್ತಗಳನ್ನು ನೀಡುವುದು. ಮುನಿಗಳಿಗೆ ಆಹಾರ ದಾನ ಮಾಡುವುದು. ಬಡವರಿಗೆ ಆಹಾರ, ಅಭಯ, ವಿದ್ಯೆ, ಔಷಧಗಳನ್ನು ದಾನ ಮಾಡುವುದು ಕೂಡ ನಿತ್ಯಪೂಜೆಯೆಂದು ಭಾವಿಸುತ್ತಾರೆ.

ಚದುರ ಚಂದ್ರಮನು ತನ್ನ ಕೃತಿಯಲ್ಲಿ ಉಲ್ಲೇಖಿಸಿರುವ ಪೂಜೆಗಳು ನಿತ್ಯ ಮತ್ತು ನೈಮಿತ್ತಿಕ ಪೂಜೆಗಳಾಗಿವೆ ಎಂಬುದನ್ನು ಗಮನಿಸಬಹುದಾಗಿದೆ.

ಪಾಂಡ್ಯರಸನು ಬಾಹುಬಲಿ ಮೂರ್ತಿಯನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಕೈಗೊಂಡ 'ಸಿದ್ಧ ಚಕ್ರ ಯಂತ್ರಾರಾಧನೆ' ಲೋಕದ ಹಿತಕ್ಕಾಗಿ ನಡೆಸುವ ಆರಾಧನೆಯಾಗಿದೆ. ಇಂಥ ಅನೇಕ ಆರಾಧನೆಗಳು ಜೈನರಲ್ಲಿ ಪ್ರಚಲಿತವಿದೆ. ಪ್ರತಿಷ್ಠಾ ವಿಧಿಯಲ್ಲಿ ನಡೆಸುವ 'ಪಂಚ ಕಲ್ಯಾಣ' ಮಹೋತ್ಸವ ಅಂಕುರಾರ್ಪಣ ವಿಧಿ, ವೇದಿ ನಿರ್ಮಾಣ, ಧ್ವಜಾರೋಹಣ, ನವಗ್ರಹಶಾಂತಿ, ಬಿಂಬಶುದ್ಧಿ, ಧಾಮಶುದ್ಧಿ, ನವಗ್ರಹ ಶಾಂತಿ ಮುಂತಾದವುಗಳು ಪ್ರತಿ ಸಂದರ್ಭದಲ್ಲಿ ನಡೆಸಲೇಬೇಕಾಗಿರುವ ಧಾರ್ಮಿಕ ವಿಧಿಗಳಾಗಿವೆ. ಇವನ್ನು ಪುರೋಹಿತರು ಅಥವಾ ಇಂದ್ರರು ಮಂತ್ರಪೂರ್ವಕವಾಗಿ ನಡೆಸುತ್ತಾರೆ. ಇವನ್ನು ಸಾಂದರ್ಭಿಕವಾಗಿ ಆರಾಧನೆಗಳೆಂದು ಕರೆಯಬಹುದು.

ಈ ಎಲ್ಲಾ ಕಲಾಪಗಳನ್ನು ಅವರ ಧಾರ್ಮಿಕ ಗ್ರಂಥ 'ಪ್ರತಿಷ್ಠಾ ತಿಲಕ' ದಲ್ಲಿ ಉಲ್ಲೇಖಿಸಿರುವಂತೆ ನಡೆಸಲಾಗುತ್ತದೆ.

ಈ ರೀತಿಯಾಗಿ ಚಂದ್ರಮ ಕವಿ ತಾನು ಪ್ರತ್ಯಕ್ಷದರ್ಶಿಯಾಗಿ ನೋಡಿದ ಸಂಗತಿ, ಘಟನೆಗಳನ್ನು ಇಲ್ಲಿ ಸ್ವಾರಸ್ಯಕರವಾಗಿ ವಿವರಿಸಿದ್ದಾನೆ.

೨.೯ ತೀರ್ಥಂಕರರ ಪಂಚಕಲ್ಯಾಣ :

ಜೈನ ಸಂಪ್ರದಾಯದಲ್ಲಿ ಬಸದಿಗಳಲ್ಲಿ ಪ್ರತಿಷ್ಠಾ ವಿಧಿ, ಮಹಾಅಭಿಷೇಕಗಳು ನಡೆಯುವ ಸಂದರ್ಭದಲ್ಲಿ ಜಿನನಿಗೆ 'ಪಂಚಕಲ್ಯಾಣ' ಮಹೋತ್ಸವವನ್ನು ನಡೆಸುವುದು ಪದ್ಧತಿಯಾಗಿದೆ.

ಈ ಸಂದರ್ಭದಲ್ಲಿ ಬಸದಿಯನ್ನು ಶುದ್ಧಗೊಳಿಸಿ, ಅಲಂಕರಿಸಿ ಈ ಕ್ರಿಯಾ ವಿಧಿಗಳಿಗೆ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದು ಸಹ ವಾಡಿಕೆ. ವಿಶೇಷವೆಂದರೆ ಈ ಎಲ್ಲಾ ಧಾರ್ಮಿಕ ಕಲಾಪಗಳು ಒಂದೊಂದು ದಿನಗಳ ಕಾಲ ನಡೆಯುತ್ತದೆ.

ಅಂತೆಯೇ ಭೈರರಸನು ಸಹ ಜೈನ ಸಂಹಿತೆಯಲ್ಲಿ ತಿಳಿಸಿದ ರೀತಿಯಲ್ಲಿ ಜಿನನ ಪಂಚಕಲ್ಯಾಣ ವಿಧಿಯನ್ನು ಸುಮಾರು ಐದಾರು ದಿನಗಳ ಕಾಲ ಶಾಸ್ತ್ರೋಕ್ತವಾಗಿ, ಸಂಭ್ರಮದಿಂದ ಆಚರಿಸಿದ ಚಿತ್ರವನ್ನು ಕವಿಯು ನೀಡಿದ್ದಾನೆ. ಬಹುಬಲಿಯ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಆದಿದೇವನಿಗೆ ಪಂಚಕಲ್ಯಾಣ ವಿಧಿಗಳು ನಡೆದರೆ, ಬಾಹುಬಲಿ ತೀರ್ಥಂಕರನಲ್ಲವಾದ ಕಾರಣ ಆತನಿಗೆ ಆರಂಭದ ಮೂರು ಕಲ್ಯಾಣಗಳು ಮಾತ್ರ ನಡೆದಂತೆ ಕವಿಯು ತಿಳಿಸಿದ್ದಾನೆ.

ಬಾಹುಬಲಿಗೆ ಬಯಲೇ ಆಲಯವಾದ್ದರಿಂದ

ಧಾಮಶುದ್ಧಿಗೆ ದಾಮವಿಲ್ಲದಿದ್ದುದರಿಂದ। ಸ್ವಾಮಿಯ ಬಿಂಬ ಶುದ್ಧಿಯನು ॥

ತಾ ಮಾಡಿಸಿದನು ಸರ್ವೌಷಧಿ ಜಲದಿಂ । ದಾ ಮುನಿರಾಯ ನುತ್ಸವದಿ ॥ ೧೭-೫೦

ಎಂದು ಹೇಳುತ್ತಾನೆ.

ಜಿನನ ಧಾಮ ಹಾಗೂ ಬಿಂಬ ಶುದ್ಧಿಯನ್ನು ಸರ್ವೌಷಧ ಜಲದಿಂದ ಭಕ್ತಿಪೂರ್ವಕವಾಗಿ ಮಾಡಿಸುತ್ತಾನೆ. ಆ ಬಳಿಕ:

ಗರ್ಭಾವತರಣ ಜನ್ಮಾಭಿಷೇಕಗಳೆಂಬ । ನಿರ್ಭರ ಕರ್ಣಾಣವಿಲ್ಲ ॥

ದರ್ಭೆ ಶಯನ ವಕಾರ ಶುದ್ಧಿಗಳೊಳಂ । ತರ್ಭಾವದೆಂದು ಮಾಡಿಸಿದ ॥೧೭-೫೧

ಆದಿ ಜಿನನ ಗರ್ಭಾವತರಣ, ಜನ್ಮಾಭಿಷೇಕ ಕಲ್ಯಾಣಗಳು ವಿಧಿಗಳು ನಡೆಯುತ್ತವೆ. ಜಿನನು ತಾಯಿಯ ಗರ್ಭಕ್ಕೆ ಬಂದಾಗ ಗರ್ಭಶೋಧನ ಕ್ರಿಯೆ ಜರುಗುತ್ತದೆ. ಜೈನ ಸಂಹಿತೆಯಲ್ಲಿ ನಿರೂಪಿಸಿರುವಂತೆ ಇಂದ್ರನು ಶಚಿದೇವಿ, ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮೀ, ಕಾಂತಿ, ಪುಷ್ಟಿ ಎಂದ ಅಷ್ಟಕನ್ನಿಕೆಯರನ್ನು ಗರ್ಭವತಿಯಾದ ಜಿನಮಾತೆಯ ಗರ್ಭಶೋಧನೆಗಾಗಿ ಕಳುಹಿಸುತ್ತಾನೆ. ಈ ಪೌರಾಣಿಕ ನಂಬಿಕೆಯಂತೆ ರಾಜನು ಬಾಹುಬಲಿಯ ಪ್ರತಿಷ್ಠಾ ಸಂದರ್ಭದಲ್ಲಿ ಸಾಂಕೇತಿಕವಾಗಿ ಆಚರಿಸುತ್ತಾನೆ.

ಜನ್ಮಾಭಿಷೇಕದ ಸಂದರ್ಭದಲ್ಲೂ ಸಹ ಇಂದ್ರನು ಶಚಿದೇವಿ ಹಾಗೂ ಇತರ ದೇವತೆಗಳೊಂದಿಗೆ ಸೇರಿ ಜನ್ಮಾಭಿಷೇಕ ಕಲ್ಯಾಣವನ್ನು ನಡೆಸುತ್ತಾನೆ. ಆ ಸಂದರ್ಭದಲ್ಲಿ ಇಂದ್ರನು ಮರುದೇವಿಗೆ ಹುಸಿ ನಿದ್ದೆಯನ್ನು ಬರಿಸಿ, ಮಗುವನ್ನು ಪಾಂಡುಕಶಿಲೆಗೆ ಕೊಂಡೊಯ್ದು ಅಲ್ಲಿ ಪವಿತ್ರ ಜಲ, ಧೂಪ, ದೀಪ, ಹೂಗಳಿಂದ ಅರ್ಚಿಸಿ ಅವನಿಗೆ ಬಂಗಾರದ ಒಡವೆ, ವಸ್ತ್ರಗಳನ್ನು ನೀಡಿ ಪುನಃ ತಂದು ಮರುದೇವಿಯ ಒಳಗೆ ಬಿಟ್ಟನು ಎಂದು ಚಿತ್ರಿಸಲಾಗಿದೆ. ಅಂತೆಯೇ ರಾಜನು ಸಂಪ್ರದಾಯಬದ್ಧವಾಗಿ ಜಿನನಿಗೆ ಜನ್ಮಾಭಿಷೇಕ ನೆರವೇರಿಸುತ್ತಾನೆ.

ಮುಂದೆ ಆದಿದೇವನು ಪ್ರಾಪ್ತ ವಯಸ್ಸಿಗೆ ಬಂದಾಗ ಆತನ ತಂದೆಯಾದ ನಾಭಿರಾಜನು ಪಟ್ಟಾಭಿಷೇಕ ಕಲ್ಯಾಣವನ್ನು ನೆರವೇರಿಸುತ್ತಾನೆ.

ಯುವರಾಜನ ಪಟ್ಟ ಮುಂತಾದ ವಿಧಿಗಳನು । ಸು ವಿವೇಕದಿಂದ ಮಾಡಿಸಿದ ॥

ಭವಹರ ಜಿನರುಪಚಾರ ಕ್ರಿಯೆಗಳ ವೈಭವದ ತೋರಿಸಲೆಂದಾಗ ॥೧೭-೫೨

ಎಂದು ಅತೀ ವೈಭವದಿಂದ ಜಿನನ ಯುವರಾಜ ಪಟ್ಟಾಭಿಷೇಕ ಕಾರ್ಯವನ್ನು ರಾಜನು ನಡೆಸಿದುದಾಗಿ ಕವಿ ಬಣ್ಣಿಸುತ್ತಾನೆ.

ಅನಂತರ ಮುಂದುವರಿದು, ಆದಿದೇವನ ಬದುಕಿನಲ್ಲಿ ನಡೆದ ಪರಿನಿಷ್ಕ್ರಮಣ ಕಲ್ಯಾಣ ಮತ್ತು ಮೋಕ್ಷ ಕಲ್ಯಾಣಗಳ ಘಟನೆಯನ್ನು ವಿಧಿಪೂರ್ವಕವಾಗಿ ಆಚರಿಸಲಾಗುತ್ತದೆ.

ಪರಿನಿಷ್ಕ್ರಮಣ ಕಲ್ಯಾಣ ವಿಧಿಯ ಮತ್ತೆ । ಪರಮಾನಂದದೊಳಾಗ ॥

ಗುರುಕುಲ ತಿಲಕ ಮಾಡಿಸಿದನು ನಿರ್ವೇಗ। ಕ್ಕರಸು ತಾನಾದುದರಿಂದ ॥ ೧೭-೫೩

ಲೌಕಿಕದ ಎಲ್ಲಾ ಸುಖಭೋಗಗಳನ್ನು ಅನುಭವಿಸಿದ ಜಿನನು ಬದುಕಿನ ಬಗ್ಗೆ ವೈರಾಗ್ಯವನ್ನು ಹೊಂದಿ ಐಹಿಕ ಸುಖ–ಭೋಗಗಳಿಂದ ಮುಕ್ತನಾಗಿ ಮುನಿದೀಕ್ಷೆಯನ್ನು ಪಡೆಯುತ್ತಾನೆ. ತನ್ನ ತಪಸ್ಸಿನಿಂದ ಕೇವಲ ಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದಿ ಶಾಶ್ವತವಾಗಿ ಲೌಕಿಕದ ಸಂಪರ್ಕವನ್ನು ಕಳೆದುಕೊಳ್ಳುತ್ತಾನೆ ಎಂದು ಮುಂದಿನ ಘಟನಾವಳಿಗಳ ಸುಂದರ ಚಿತ್ರವನ್ನು ಕವಿ ಕಾವ್ಯದಲ್ಲಿ ನೀಡಿದ್ದಾನೆ.

ಹೀಗೆ ರಾಜನು ಜಿನನಿಗೆ ನಡೆಸಿದ 'ಪಂಚಕಲ್ಯಾಣ'ದ ಸಂದರ್ಭವನ್ನು ಬಹಳ ಔಚಿತ್ಯಪೂರ್ಣವಾಗಿ ಚಿತ್ರಿಸಿದ್ದಾನೆ.

ಈ ರೀತಿಯಾಗಿ ಜೈನರ ನಂಬಿಕೆಯಲ್ಲಿ ಜಿನನಿಗೆ 'ಪಂಚಕಲ್ಯಾಣ'ಗಳು ನಡೆದಿದ್ದು, ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಈ ಪದ್ಧತಿ ಜೈನ ಧರ್ಮದಲ್ಲಿ ಇಂದಿಗೂ ರೂಢಿಯಲ್ಲಿರುವುದು ಗಮನಾರ್ಹವಾಗಿದೆ.

೨. ೧೦ ರಥೋತ್ಸವ

ಜೈನ ಸಂಪ್ರದಾಯದಲ್ಲಿ ರಥೋತ್ಸವದ ಪರಿಕಲ್ಪನೆ ವಿಶಿಷ್ಟವಾಗಿದೆ. ಇದನ್ನು ತೀರ್ಥಂಕರನ ಸಮವಸರಣ ಮಂಟಪವೆಂದು ಭಾವಿಸಲಾಗುತ್ತದೆ. ಇದರ ಒಟ್ಟು ಆಶಯ ಮತ್ತು ಉದ್ದೇಶವೆಂದರೆ ಕೇವಲ ಜ್ಞಾನವನ್ನು ಪಡೆದ ಬಳಿಕ ತೀರ್ಥಂಕರನು ಸಮಸ್ತ ಜೀವಿಗಳಿಗೆ ಆತ್ಮಕಲ್ಯಾಣಕ್ಕಾಗಿ ಧರ್ಮೋಪದೇಶವನ್ನು ನಡೆಸುತ್ತಾನೆ. ಅದಕ್ಕೆ ತಕ್ಕುದಾದ ಸಭಾಮಂಟಪವನ್ನು ದೇವೇಂದ್ರನ ಆಜ್ಞಾನುಸಾರ ಕುಬೇರನು ನಿರ್ಮಿಸುತ್ತಾನೆ. ಇದೊಂದು ವಿಶಿಷ್ಟ ರಚನೆಯಾಗಿದ್ದು, ಜೈನ ವಾಸ್ತುಕಲೆ, ಶಿಲ್ಪಕಲೆ, ರಥಶಿಲ್ಪಗಳ ನಿರ್ಮಾಣಕ್ಕೆ ಮೂಲ ಕಲ್ಪನೆಯಾಗಿದೆಯೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ (ತು.ಜೆ ಪು.ಸಂ. ೨೦೦) ಒಂದೆಡೆ ಧರ್ಮೋಪದೇಶವು ಮುಗಿದ ಬಳಿಕ ಆ ಮಂಟಪವು ಇನ್ನೊಂದೆಡೆಗೆ

ತೆರಳುತ್ತದೆ. ಇದನ್ನು ರಥೋತ್ಸವದ ಸಂದರ್ಭದಲ್ಲಿ ರಥವನ್ನು ಎಳೆಯುವುದರ ಮುಲಕ ಮತ್ತು ಧಾರ್ಮಿಕ ಸಭೆಗಳನ್ನು ನಡೆಸುವುದರ ಮೂಲಕ ಆಚರಿಸಲಾಗುತ್ತದೆ.

ಚದುರ ಚಂದ್ರಮನು ಬಾಹುಬಲಿ ಪ್ರತಿಷ್ಠೆ ಮತ್ತು ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ನಡೆದ ರಥೋತ್ಸವವನ್ನು ಉಲ್ಲೇಖಿಸಿದ್ದಾನೆ.

ಸಿಂಗರಿಸಿದ ರಥದೊಳು ಜಿನ ಬಿಂಬವ । ಮಂಗಳೋತ್ಸವಕ್ಕೆ ತಂದಿಟ್ಟು ॥
ಮುಂಗಡೆಯೊಳು ನಾಲ್ದೆಸೆಯೊಳು ನಾಲ್ಕು ಗ। ಣಂಗಳಾಚಾರ್ಯರ ಬರೆಸಿ ॥ ೧೭-೭೩

ಆ ರಥವೇರಿಸಿ ಧರ್ಮದೊಳ್ತನ್ನಮ । ನೋ ರಥ ವೆಯ್ದಿಸುವಂತೆ ॥
ಭೂರಿ ವೈಭವದೊಡಗೂಡಿ ಪುರದೊಳಾ। ತೇರನೆಳಸಿದನು ಮುನಿಪಾ ॥ ೧೭-೭೪

ನೆರೆದ ಜನರು ಬಿರುಸು ಬಾಣಗಳನ್ನು ಹಾರಿಸಿ ಸಂತೋಷ ಪಟ್ಟರು. ಪಂಜು, ಹಿಲಾಲು, ದೀವಟಿಗೆಯ ಬೆಳಕಿನಲ್ಲಿ ರಥವನ್ನು ಎಳೆದರು.

ಗಾಲಿಯ ಚೀತ್ಕಾರವಾಗಲಾದಿಚ್ಚಕ್ರ । ವಾಲವನೆಲ್ಲ ವ್ಯಾಪಿಸಲು ॥
ಲಾಲಿಸಿ ದಿಗ್ಗಜ ತಂತಮ್ಮ ದಿಕ್ಕಿನ। ಮೂಲೆಗೆಯಿದ ವೇನನೆಂಬೆ ॥ ೧೭-೭೭

ಎಂದು ಆ ಸಂದರ್ಭದಲ್ಲಿ ವರ್ಣಿಸಿದ್ದಾನೆ. ಮೊಳಗುವ ನಾನಾ ವಾದ್ಯಗಳ ರಭಸಕ್ಕೆ ಜಲಧಿಯ ಜಲ ಮೈಯುಬ್ಬಿ ಬಂತು.

ಸಿಗುರಿಬೆ ಳ್ಗೊಡೆ ಧರ್ಮಚಕ್ರ ಧ್ವಜ । ವಾಗಲೆತ್ತಿದವು ಪತಾಕೆ ॥
ಆಗಸವೆಲ್ಲಿಯು ತೆರಪಿಲ್ಲವೆಂಬಂ । ತಾಗೆಯಾರದ ಮುಂಗಡೆಯ ॥ ೧೭-೭೯

ಸಿಗುರಿ, ಬೆಳ್ಗೊಡೆ, ಧರ್ಮಚಕ್ರ, ಧ್ವಜ, ಪತಾಕೆಗಳು ಆಕಾಶದೆತ್ತರಕ್ಕೂ ಹಾರಿದವು. ರಥದ ಹಗ್ಗವನ್ನು ಅರಸರು, ಹಲರು ಎಲ್ಲರೂ ಒಟ್ಟು ಸೇರಿ

ಬೆಟ್ಟದಂಗಡಿಯಿಂದ ನೇಮಿ ಜಿನೇಶನಾಲಯ । ಮುಟ್ಟಿ ರಥವ ತಾನೆಳೆಸಿ ॥
ಪಟ್ಟದ ಗುರುರಾಯನಾ ಜಿನನಿಗೆ ಮನ । ಮುಟ್ಟಿ ಪೂಜೆಗಳ ಮಾಡಿಸಿದ ॥ ೧೭-೮೨

ಎಂದು ರಥೋತ್ಸವದ ವಿವರಗಳನ್ನು ಸ್ವಾರಸ್ಯಕರವಾಗಿ ನೀಡಿದ್ದಾನೆ.

****

ಅಧ್ಯಾಯ – ೩

ಬಾಹುಬಲಿ ವಿಗ್ರಹ ನಿರ್ಮಾಣ

೩.೧ ಬಾಹುಬಲಿ ವಿಗ್ರಹದ ಕೆತ್ತನೆ

ಬಾಹುಬಲಿ ಜೈನ ಪರಂಪರೆಯಲ್ಲಿ ಪ್ರಥಮ ತೀರ್ಥಂಕರನಾದ ವೃಷಭದೇವನ ಎರಡನೆಯ ಮಗ. ಈತನಿಗೆ 'ಗೊಮ್ಮಟೇಶ್ವರ' ಎಂಬ ಹೆಸರೂ ಇದೆ. ಗೊಮ್ಮಟನೆಂದರೆ ಚೆಲುವ, ಸುಂದರ, ಮನ್ಮಥ, ಕಾಮದೇವ ಎಂದರ್ಥವಿದೆ. ಜೈನ ಪರಂಪರೆಯಲ್ಲಿ ಬಾಹುಬಲಿಯನ್ನು ಆ ಕಾಲದ ಕಾಮದೇವ ಮನ್ಮಥ ಎಂದು ಗೌರವಿಸಲಾಗಿದೆ. ಮುಂದೆ ಜೈನ ಅರಸರು ಈತನ ತ್ಯಾಗ, ದಯೆ, ಶಾಂತಿಯ ಸಂದೇಶದಂತಹ ಮೌಲ್ಯಗಳನ್ನು ಚಿರಸ್ಥಾಯಿಗೊಳಿಸಿದ ಗೊಮ್ಮಟ ಸ್ವಾಮಿಯನ್ನು ಶಿಲೆಯಲ್ಲಿ ಕೆತ್ತುವುದರ ಮೂಲಕ ಆತನನ್ನು ಶಾಶ್ವತ ಹಾಗೂ ನಿರಂತರವಾಗಿ ಆರಾಧಿಸುವ ಹಾಗೂ ಚಾರಿತ್ರಿಕವಾಗಿ ಆತನ ತ್ಯಾಗ ಗುಣವನ್ನು ದಾಖಲಿಸುವ ಪ್ರಕ್ರಿಯೆಯನ್ನು ನಾವು ಗಮನಿಸಬಹುದಾಗಿದೆ.

ಗೊಮ್ಮಟೇಶ್ವರನ ಬೃಹದಾಕಾರದ ಮೂರ್ತಿಯು ಕರ್ನಾಟಕದ ಆರು ಪ್ರಸಿದ್ಧ ಕ್ಷೇತ್ರಗಳಲ್ಲಿ ನಿರ್ಮಾಣಗೊಂಡಿದೆ. ಅವುಗಳಲ್ಲಿ ಮೂರು ಮೂರ್ತಿಗಳು ನಮ್ಮ ತುಳುನಾಡಿನಲ್ಲಿರುವುದು. ಜೈನ ಧರ್ಮದ ಮಹತ್ವದ ಕೊಡುಗೆ ಎಂದೆನ್ನಬಹುದು. ವಿಶ್ವವಿಖ್ಯಾತಿ ಪಡೆದ ಶ್ರವಣಬೆಳಗೊಳದ ಮೂರ್ತಿಯ ನಂತರ ಕಾರ್ಕಳದ ಗೊಮ್ಮಟೇಶ್ವರನ ಮೂರ್ತಿಯು ಪ್ರಸಿದ್ಧಿಯನ್ನು ಪಡೆದಿದೆ.

ಕಾರ್ಕಳದ ಬೆಟ್ಟದ ಮೇಲಿರುವ [1] ಗೊಮ್ಮಟೇಶ್ವರನ ನಲ್ವತ್ತೊಂದುವರೆ ಅಡಿ ಎತ್ತರದ ವಿಗ್ರಹವನ್ನು ಭೈರರಸನ ಮಗನಾದ ವೀರಪಾಂಡ್ಯನು ಕ್ರಿ.ಶ.೧೪೩೨ (ಕ್ರಿ.೧೩ರಂದು) ದೇಶಿಗಣದ ಪನಸೋಗೆ ಬಳಿಯ ಲಲಿತಕೀರ್ತಿ ಮುನಿಗಳ ಉಪದೇಶ, ಸಹಕಾರ ಹಾಗೂ ನೇತೃತ್ವದ (ಸ್ಥಾಪನೆ) ಮಾಡಿದನು; ಎನ್ನುವ ಉಲ್ಲೇಖವನ್ನು ಮೂರ್ತಿಯ ಬಲಭಾಗದಲ್ಲಿರುವ ಶಾಸನದಿಂದ ತಿಳಿಯಬಹುದಾಗಿದೆ. ಅಲ್ಲದೆ, ಕವಿ ಚಂದ್ರಮನು ತನ್ನ 'ಕಾರ್ಕಳದ ಶ್ರೀ ಗೊಮ್ಮಟೇಶ್ವರ ಚರಿತೆ' ಕೃತಿಯಲ್ಲಿಯೂ ಕಾರ್ಕಳದ ಮೂರ್ತಿಯ ಕೆತ್ತನೆ, ಪ್ರತಿಷ್ಠೆ, ಮಸ್ತಕಾಭಿಷೇಕ ಇತ್ಯಾದಿ ವಿವರಗಳನ್ನು ದಾಖಲಿಸಿರುವುದರಿಂದ ಗೊಮ್ಮಟ ಮೂರ್ತಿಯನ್ನು ಕುರಿತಂತೆ ಇತರ ವಿಚಾರಗಳನ್ನು ತಿಳಿಯುವುದು ಸಾಧ್ಯವಾಗಿದೆ.

೩.೧.೧ ಮೂರ್ತಿ ಕೆತ್ತನೆಯ ಹಿನ್ನೆಲೆ :

ಶ್ರೀ ಪಾಂಡ್ಯನಗರಿಯನ್ನು ಅರಿರಾಯ 'ಗಜಗಂಡಭೇರುಂಡ' ನಾದ ಪಾಂಡ್ಯ ನೃಪಾಲನು ಆಳುತ್ತಿದ್ದನು. ಉದಾತ್ತನೂ, ವೀರನೂ, ದೀನಾನಾಥನೂ ಆದ ತನ್ನ ದಕ್ಷ ಆಳ್ವಿಕೆ ಗುಣ ಸಂಪತ್ತಿಗೆ ಲೋಕಕ್ಕೆ ಬೇಕಾದವನಾಗಿರುತ್ತಾನೆ. ಹೀಗಿರಲು ಒಮ್ಮೆ,

---

೧. ARSIE, 1901, No.65, E.P. Ind, Vol VII, pp.111-12 No. 14E ತುಳುನಾಡಿನ ಜೈನಧರ್ಮ ಡಾ. ಎಸ್.ಡಿ ಶೆಟ್ಟಿ. ಪುಟ.೩.೯

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಗಳಿಸಿದರ್ಥಕೆ ಫಲವಾವುದೆಂದರೆ ಧರ್ಮ । ದೊಳು ಬಿತ್ತಿ ಪುಣ್ಯಫಲವನು ॥

ಗಳಿಸಿದವನ ಜನ್ಮವ್ಯರ್ಥವೆಂದವನು ತ । ನ್ನೊಳಗೆ ತಾನಿಂತು ಚಿಂತಿಸಿದ ॥ ೨-೨೯

ಧರ್ಮದಲ್ಲಿ ಹುಟ್ಟಿ ಇಲ್ಲಿನ ಎಲ್ಲಾ ಸುಖಭೋಗಗಳನ್ನು ಅನುಭವಿಸುತ್ತಿದ್ದು ಧರ್ಮಕ್ಕಾಗಿ ಏನೂ ಮಾಡದಿದ್ದವನ ಜನ್ಮ ವ್ಯರ್ಥವೆಂದು ಭಾವಿಸುತ್ತಾನೆ. ಮಾತ್ರವಲ್ಲದೆ ತನ್ನ ಬದುಕಿನ ಜೀವಿತದ ಸಾರ್ಥಕ್ಯ, ಅರ್ಥವಂತಿಕೆಗಾಗಿ ತಾನೇನಾದರೂ ಒಂದು ಧಾರ್ಮಿಕ ಕಾರ್ಯವನ್ನು ಮಾಡಬೇಕೆಂದು ಯೋಚಿಸುತ್ತಾನೆ. ಹಾಗೂ ತಾನು ಈಗ ಅನುಭವಿಸುತ್ತಿರುವ ಈ ರಾಜ್ಯ, ರಾಜ, ಪದವಿ, ಸುಖ, ಸಂಪತ್ತು, ಕುಲದ ಹೆಮ್ಮೆ ಇವೆಲ್ಲವೂ ಲಭಿಸಿದುದು, ತಾನು ಈ ಧರ್ಮದಲ್ಲಿ ಹುಟ್ಟಿದ ಕಾರಣದಿಂದ.ಹಾಗಾಗಿ ತನಗೆ ಈ ಕೀರ್ತಿ ಸಿರಿ ಸಂಪತ್ತನ್ನು ಒದಗಿಸಿಕೊಟ್ಟ ಈ ಧರ್ಮಕ್ಕಾಗಿ ಅದರ ಉದ್ಧಾರಕ್ಕಾಗಿ ತಾನು ಭೂಮಿಯಲ್ಲಿ ಶಾಶ್ವತವಾಗಿ ಧರ್ಮವು ನೆಲೆ ನಿಲ್ಲುವಂತಹ ಒಂದು ಕೆಲಸವನ್ನು ಮಾಡಲೇಬೇಕು ಎಂದು ನಿರ್ಧರಿಸಿಯೇ ಬಿಡುತ್ತಾನೆ.

ಆದರೆ ಧರ್ಮ, ಅರ್ಥ, ಕಾಮಗಳ ಹೊರತಾಗಿ ಮೋಕ್ಷ ಸುಖವನ್ನು ಹೊಂದುವ ದಾರಿಯ ಅರಿವಿಲ್ಲದೆ: ರಾಜ ಮಂತ್ರಿಗಳಲ್ಲಿ ಅದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಅಂತೆಯೇ ಒಮ್ಮೆ ತನ್ನ ಒಡ್ಡೋಲಗದಲ್ಲಿ ಸಭೆ ಸೇರಿದ ಮಂತ್ರಿ ಸಚಿವರೊಡನೆ,

ಧರ್ಮಾರ್ಥ ಕಾಮಂಗಳೊಳಗಾವುದು ಮುಖ್ಯ । ಸ್ವರ್ಮೋಕ್ಷವಾವುದರಿಂದ ॥

ನಿರ್ಮತ್ಸರ ದಿ ಪೇಳಿ ನೀವೆಂದು ನರನಾಥ । ನಿರ್ಮಲ ಮನದಿ ಕೇಳಿದನು ॥ ೨-೪೮

ಎಂದು ಧರ್ಮ, ಅರ್ಥ, ಕಾಮಗಳಲ್ಲಿ ಯಾವುದು ಮುಖ್ಯವಾದುದೆಂದು, ಸಭೆಗೆ ಅವರಿಂದ ಯಾವುದೇ ರೀತಿಯ ಆತಂಕ, ಮುಚ್ಚುಮರೆಯಿಲ್ಲದ ಮುಕ್ತ ಮನಸ್ಸಿನ ಉತ್ತರವನ್ನು ರಾಜ ಪಾಂಡ್ಯ ನೃಪಾಲನು ನಿರೀಕ್ಷಿಸುತ್ತಾನೆ.

ಹಲವು ಸಚಿವರು, ಧರ್ಮ, ಅರ್ಥ, ಕಾಮಗಳ ಬಗೆಗೆ ಹಲವಾರು ರೀತಿಯ ವ್ಯಾಖ್ಯಾನ ಪ್ರತಿಕ್ರಿಯೆಯನ್ನು ನೀಡುತ್ತಾರೆ. ಆದರೂ ಅದ್ಯಾವುದೂ ರಾಜನ ಮನಸ್ಸಿಗೆ ಹಿತವೆಂದು ತೋರುವುದಿಲ್ಲ. ಆದರೆ ಒಬ್ಬ ಮಂತ್ರಿಯು ..

ಹಾಲನು ಮೆಚ್ಚಿದ ಮಾರ್ಜಾಲನಂದದಿ । ಮೇಲನರಿಯದೆ ಕೆಲಬರು ॥

ಲೋಲುಪರಹರರ್ಥ ಕಾಮಸುಖದೊಳು ಭೂ । ಪಾಲಕರ ವಿವೇಕದಿಂದ ॥ ೨-೫೯

ಕೆಲವರು ಧರ್ಮವನ್ನೇ ಮರೆತು ಕಾಮ , ಅರ್ಥಗಳಲ್ಲೇ ತಮ್ಮ ಜೀವನವನ್ನು ಸಾಗಿಸುತ್ತಾರೆ. ಆದರೆ ನಿಜವಾಗಿಯೂ ಧರ್ಮವೇ ಕಾಮ ಅರ್ಥಕ್ಕಿಂತ ಮೊದಲು ಮತ್ತು ಪ್ರಾಮುಖ್ಯತೆಯನ್ನು ಪಡೆದ ವಿಚಾರ ಎಂದು ಹೇಳುತ್ತಾನೆ. ಹಾಗಾಗಿ,

[illegible]

[illegible]

[illegible]

[illegible]

[illegible]

ಭರತೇಶ್ವರ ಮುಂತಾದ ಚಕ್ರಿಗಳೆಲ್ಲ । ವರಧರ್ಮವೇ ಮುಖ್ಯವೆಂದು ॥

ವಿರಚಿಸಿ ಮನ್ನಿಸಿ ಕೇವಲ ಪೂಜೆಯ । ಬಳಿಕರ್ಥ ಕಾಮಗಳನು ॥ ೨-೬೧

ಭರತ ಮುಂತಾದ ಸದ್ಧರ್ಮಿಗಳು ತಮ್ಮ ಧರ್ಮವೇ ಶ್ರೇಷ್ಠವೆಂದು ನಂಬಿ, ಮೊದಲು ಧರ್ಮ, ಧಾರ್ಮಿಕ, ವಿಧಿ – ವಿಧಾನಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಆ ಪ್ರಕಾರ ನಡೆದರು ಎನ್ನುತ್ತಾನೆ.

ಇವನ ಮಾತು ರಾಜನ ಮನ್ನಣೆ, ಪ್ರಶಂಸೆಗೆ ಒಳಗಾಗುತ್ತ ಮಂತ್ರಿಯ ಮಾತುಗಳಿಂದ ಮೊದಲೇ ಧರ್ಮಕ್ಕೆ ಪ್ರೇರಿತನಾದ ಪಾಂಡ್ಯರಸನು ಭಾವನೆ, ಆಲೋಚನೆಗಳು ಮತ್ತಷ್ಟು ಪಕ್ವಗೊಳ್ಳುತ್ತವೆ.

ಆದರೆ ಪಾಂಡ್ಯರಸ ಪುನಃ ಗೊಂದಲಕ್ಕೀಡಾಗುತ್ತಾನೆ. ಏಕೆಂದರೆ ಈ ಧಾರ್ಮಿಕ ವಿಧಿಗಳಲ್ಲಿ 'ದಾನ ಪೂಜೆ ಶೀಲೋಪವಾಸಗಳೆಂದು .... ಹಲವು ಬಗೆಗಳಿವೆ. ಅದರಲ್ಲಿ ನಾವು ಯಾವುದನ್ನು ಆರಿಸಲಿ ! ಉಪವಾಸ ತ್ಯಾಗ ತನ್ನ ಬದುಕಿಗೆ ಅನುಕೂಲವಾದುದಲ್ಲ. ಇನ್ನುಳಿದಂತೆ ರಾಜನು ಪರಿಪಾಲಿಸಬೇಕಾದ ಧರ್ಮ, ವಿಧಿಗಳಲ್ಲಿ ದಾನ ಪೂಜೆಗಳು ಮುಖ್ಯವಾದವುಗಳು. ಇದರಲ್ಲಿ ತಾನು ಏನನ್ನು ಮಾಡಲಿ ಎಂದು ಚಿಂತಿಸಿ ಕೊನೆಗೆ

ಜಿನ ಚೈತ್ಯಾಲಯ ಬಿಂಬಗಳನು ನಾನು । ಅನುಮಾಡಿಸಿ ಪ್ರತಿಷ್ಠೆಯನು ॥

ಜನರೆಲ್ಲ ಪೊಗಳ್ವಂತೆ ವಿರಚಿಸಬೇಕೆಂದು । ನೆನೆದು ತನ್ನಯ ಮನದೊಳಗೆ ॥ ೨-೬೬

ಎಂದು ಜಿನ ಚೈತ್ಯಾಲಯದಲ್ಲಿ ಜನ ಮೆಚ್ಚುವ ರೀತಿಯಲ್ಲಿ ಜಿನ ಬಿಂಬಗಳನ್ನು ಮಾಡಿಸುವುದು ಸರಿ. ಆದರೆ ಈಗಿನ ಕಾಲದಲ್ಲಿ ಚಿನ್ನ, ರತ್ನ, ಮುತ್ತು, ಹಿತ್ತಳೆ, ಕಂಚು ಮುಂತಾದ ಲೋಹಗಳಿಂದ ಪ್ರತಿಮೆಯನ್ನು ಮಾಡಿಸಿದರೆ, ಜನರ ಚಿತ್ತ ಚಂಚಲವಾಗಬಹುದು. ಆದರೂ ತಾನು ಈ ಕಲಿಯುಗದಲ್ಲಿ ತನ್ನ ಕೀರ್ತಿ ಶಾಶ್ವತವಾಗಿ ನಿಲ್ಲುವುದಾದರೆ, ತಾನು ಶಿಲೆಯಲ್ಲಿ ಒಂದು ಜಿನ ಪ್ರತಿಯನ್ನು ಕೆತ್ತಿಸಿ ಪ್ರತಿಷ್ಠಾಪಿಸುವುದೇ ಸರಿ! ಎಂದು ಭಾವಿಸುತ್ತಾನೆ. ಹಾಗಾಗಿ ತನ್ನ ಅರಮನೆಯ ಬಲಭಾಗದಲ್ಲಿರುವ ಎತ್ತರದ ಶಿಲಾಪರ್ವತದಲ್ಲಿ ಕೆತ್ತಿಸಿ ಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸುವುದೆಂದು ತೀರ್ಮಾನಿಸುತ್ತಾನೆ ಹಾಗೂ ಇದಕ್ಕೆ ಬೇಕಾಗುವ ಎಲ್ಲಾ ಸಿದ್ಧತೆಗಳನ್ನು ಒಂದೊಂದಾಗಿ ನಡೆಸುತ್ತಾನೆ.

೩.೧.೨ ಕೆತ್ತನೆಯ ಪೂರ್ವ ಸಿದ್ಧತೆ

ಅರಸನು ಆಯ್ದುಕೊಂಡ ಬೆಟ್ಟವು ಬಹಳ ಮಹಿಮೆವುಳ್ಳದ್ದು ಅದು ವಜ್ರ, ಸ್ಪರ್ಶಮಣಿ, ವೈಢೂರ್ಯಗಳಿಂದ ತುಂಬಿದ ಗಣಿಗಳನ್ನು ಒಳಗೊಂಡಿದೆ. ಅಲ್ಲಿ ಅಪೂರ್ವವಾದ, ಅಮೃತ ಸಮಾನವಾದ ಸಿದ್ಧರಸವನ್ನು ಹೊಂದಿದ ಬಾವಿಗಳು ಇದೆ ಎಂದು ಭಾವಿಸಿದ ರಾಜನು ಆ ಬೆಟ್ಟವನ್ನು ಭಯ ಭಕ್ತಿಯಿಂದ ಧೂಪ, ದೀಪ, ಪುಷ್ಪ ನೈವೇದ್ಯ, ಜಲ, ಗಂಧಾಕ್ಷತೆಯಿಂದ ಪೂಜಿಸುತ್ತಾನೆ. ಮತ್ತು ತಾನು ಮುಂದೆ ಮಾಡಲಿರುವ ಧಾರ್ಮಿಕ ಕಾರ್ಯಕ್ಕೆ ಗುರು ಶ್ರೀ ಲಲಿತಕೀರ್ತ್ಯಾಚಾರ್ಯರ ಆಶೀರ್ವಾದ, ಅನುಗ್ರಹವನ್ನು ಪಡೆದು ಮುಂದಿನ ಕೆಲಸಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಾನೆ.

[illegible]

[illegible]

[illegible]

[illegible]

[illegible]

ಪಾಂಡ್ಯನೃಪಾಲನು ಲೋಕಕಲ್ಯಾಣಕ್ಕಾಗಿ ತನ್ನ ಕೀರ್ತಿಗಾಗಿ ಪ್ರತಿಷ್ಠಾಪಿಸಲಿರುವ ಗೊಮ್ಮಟ ಮೂರ್ತಿಯನ್ನು ಶಿಲ್ಪಕಲೆಯಲ್ಲಿ ಪರಿಣಿತರಾದ ಶಿಲ್ಪಿಗಳಿಂದ ಕೆತ್ತಿಸಬೇಕೆಂದು ಆಶಿಸಿ ಶ್ರೇಷ್ಠ ಶಿಲ್ಪಿಗಳನ್ನು ಕರೆಸಿಕೊಳ್ಳುತ್ತಾನೆ. ಮತ್ತು ಅವರಿಗೆ ವಸ್ತ್ರ ಭೂಷಣಾದಿಗಳನ್ನು ನೀಡಿ ಸತ್ಕರಿಸುತ್ತಾನೆ.

ಜೋಯಿಸರನ್ನು ಕರೆಯಿಸಿ ಶಿಲಾಮೂರ್ತಿಯ ಕೆತ್ತನೆಗೆ ಒಂದು ಪ್ರಶಸ್ತವಾದ ದಿನವನ್ನು ತಿಳಿಸಬೇಕೆಂದೂ; ಇದರಿಂದ ತನಗೆ ಹಾಗೂ ಕಾರ್ಕಳಕ್ಕೂ ಕ್ಷೇಮವುಂಟಾಗುವಂತಿರಬೇಕೆಂದು ವಿನಂತಿಸಿಕೊಳ್ಳುತ್ತಾನೆ.

ಜ್ಯೋತಿಷ್ಯರು ನಾನಾ ಸಂಹಿತೆಗಳಲ್ಲಿನ ವಿಚಾರಗಳನ್ನು ಕೂಲಂಕುಷವಾಗಿ ಪರೀಕ್ಷಿಸಿ, ಶಿಲಾಮುಹೂರ್ತ (ಕೆತ್ತನೆ)ಕ್ಕೆ ಒಂದು ಶುಭ ಮುಹೂರ್ತವನ್ನು ಸೂಚಿಸುತ್ತಾರೆ. ಸಂತಸಗೊಂಡ ರಾಜ, ಶಿಲೆಯ ಕೆತ್ತನೆಯ ಕೆಲಸ ಪ್ರಾರಂಭವಾಗುವುದಕ್ಕೆ ಮೊದಲು ಜಿನ ಚೈತ್ಯಾಲಯಕ್ಕೆ ಬಂದು ಮಡಿಯಲ್ಲಿದ್ದುಕೊಂಡು ಜಿನನಿಗೆ ಅಭಿಷೇಕ, ಅಷ್ಟವಿಧಾರ್ಚನೆಯಿಂದ ಅರ್ಚಿಸಿ ತಾನು ಅಂದುಕೊಂಡ ಕೆಲಸ ಸುಸೂತ್ರವಾಗಿ ಸಾಂಗವಾಗಿ ನೆರವೇರಲು ತನಗೆ ಅನುಗ್ರಹ, ಆಶೀರ್ವಾದವನ್ನು ನೀಡುವಂತೆ ಪ್ರಾರ್ಥಿಸುತ್ತಾನೆ.

ಶುಭ ಮುಹೂರ್ತದೊಳು ಶಿಲೆಯೊಳು ಭಕ್ತಿಯಿಂ । ದ ಭಿಷೇಕ ಪೂಜೆಯ ಮಾಡಿ ॥
ಅಭಿನವ ಮದನ ಪಾಂಡ್ಯೇಂದ್ರನಿಂದೆನ್ನಯ । ವಿಭವ ಸಾಫಲ್ಯವಾಯ್ತೆಂದ ॥ ೩–೩೬

ಭಾವಿಸುತ್ತಾನೆ. ಹೀಗೆ ಅರಸ ಶಿಲ್ಪಿಗಳಿಗೆ ತನ್ನ ಸಂಪೂರ್ಣ ಸಹಕಾರವನ್ನಿತ್ತು, ಅವರನ್ನು ಆಗಾಗ್ಗೆ ವಿಚಾರಿಸುತ್ತ ಅವರಿಗೆ ಪ್ರೋತ್ಸಾಹವನ್ನು ನೀಡುತ್ತಾನೆ.

ಹೊಳಹನು ತಿದ್ದಿಸಿದನು ಮೊದಲೊಮ್ಮೆಯಾ । ಶಿಲೆಯೊಳಗಾ ಜಿನಪತಿಯ ।
ಬಳಿಕಾಲಿಂಗವ ಗಿರಿಯಗ್ರಕೈದಿಪ । ಬಲುದೊಡ್ಡ ಯತ್ನವ ನೆನೆದ ॥ ೩–೩೯

ಮೂರ್ತಿಯನ್ನು ಒಂದು ಹಂತದ ವರೆಗೆ ಕೆತ್ತಿಸಿ, ಆ ಮೂರ್ತಿಯನ್ನು ಬೆಟ್ಟಕ್ಕೆ ಕೊಂಡೊಯ್ದು ಅಲ್ಲಿ ೭೨ ಕಂಬಗಳಿಂದ ನಿರ್ಮಿಸಿದ ಚಪ್ಪರದೊಳಗಿರಿಸಿ ಶಿಲೆಯ ಕೆಲಸವನ್ನು ಸಂಪೂರ್ಣ ಮಾಡಿಸುವ ವ್ಯವಸ್ಥೆಯನ್ನು ಮಾಡಿಸುತ್ತಾನೆ.

ಲತೆಯ ಪತ್ರದೊಳು ವರ್ಪಸೆರೆ ಮುಂತಾ । ದತಿಶಯಗಳನು ತಿದ್ದಿಸಿದ ॥
ಪ್ರತಿಮೆಯಲ್ಲಿದು ಪ್ರತ್ಯಕ್ಷವಾ ಜಿನನೆಂದು । ಕ್ಷಿತಿಯೆಲ್ಲ ಪೊಗಳು ವಂದದೊಳು ॥ ೩–೬೧

ಶಿಲೆಯಿಂದ ರೂಪ ಪಡೆದ ಆ ಮೂರ್ತಿಯನ್ನು ಕಂಡಾಗ ಇದು ಪ್ರತಿಮೆಯಲ್ಲ ಪ್ರತ್ಯಕ್ಷ ಜಿನ ನೆಲೆ ನಿಂತಿದ್ದಾನೆ ಎನ್ನುವಂತೆ ಕಂಗೊಳಿಸುತ್ತಿತ್ತು.

ಸರ್ವವನ್ನೂ ತ್ಯಾಗ ಮಾಡಿ, ಇಂದ್ರಿಯಗಳನ್ನು ನಿಗ್ರಹಿಸಿ ಯಾವುದಕ್ಕೂ ಯಾರಿಗೂ ಅಂಜದೆ, ತಲೆಬಾಗದೆ.

ತಟಸ್ಥನಾಗಿ ನಿಂತ ವೈರಾಗ್ಯಮೂರ್ತಿಯ ಪಾದಗಳಿಂದ ಹತ್ತಿ ಆ ದೇವನ ಭುಜವನ್ನು ಮುಟ್ಟಿ ಬೆಳೆದ ಬಳ್ಳಿಗಳನ್ನು ಚಿತ್ರಿಸುತ್ತಾರೆ. ಅಲ್ಲದೆ ಆ ಬಳ್ಳಿಗಳ ಮೇಲಿನ ನರನಾಡಿಯನ್ನು ಸಹ ಶಿಲ್ಪಿಗಳು ಅತ್ಯಂತ ಸೂಕ್ಷ್ಮ ಹಾಗೂ ಕಲಾತ್ಮಕವಾಗಿ ಕೆತ್ತುತ್ತಾರೆ.

ಕೆಂಪಾದ ಎಳೆಯ ತಳಿರುಗಳನ್ನು ಹೋಲುವ ಬಾಹುಬಲಿಯ ಪಾದಗಳಲ್ಲಿನ ಉಗುರುಗಳನ್ನು ಸ್ವಲ್ಪವೂ ದೋಷವಿಲ್ಲದೆ ಬಿಡಿಸುತ್ತಾರೆ.

ನಾಸಾಗ್ರದೊಳಿಟ್ಟ ಸಮ್ಯಗ್ದೃಷ್ಟಿ ಧ್ಯಾನ ವಿ। ಲಾಸದಿಂ ಶಾಂತರಸವನು ॥

ಸೂಸುವ ನಗೆಮೊಗವಾಜಾನು ಬಾಹುಗ। ಳಾಸುರಾರ್ಜಿತಗೊಪ್ಪಿದುವು ॥ ೩– ೬೨

ಬಾಹುಬಲಿಯ ಮುಖದಲ್ಲಿನ ಧ್ಯಾನದ ಭಾವನೆಯನ್ನು ಸಹ ಶಿಲ್ಪಿಗಳು, ಸುಂದರವಾಗಿ ಅಭಿವ್ಯಕ್ತಿಸುತ್ತಾರೆ. ಮೂಗಿನ ನೇರಕ್ಕೆ ನೆಟ್ಟ ನೋಟವು, ಲೋಕದ ಒಳಿತಿಗಾಗಿ ಧ್ಯಾನಿಸುವಂತೆ, ಕಾಣುತ್ತಿತ್ತು. ಅಲ್ಲದೆ, ತುಸು ನಗುಮೊಗದಿಂದ ನಿಂತ ಶಾಂತ, ಗಂಭೀರವಾದ ಬಾಹುಬಲಿಯ ಮುಖವು ಶಾಂತರಸವನ್ನು ಹೊರಹೊಮ್ಮಿಸುತ್ತಿತ್ತು.

ಅಂಗಜ ರಾಜನ ಬಿರುದಿನ ಕಹಳೆಯ । ಭಂಗಿಪ ಜಾನು ಜಂಘೆಗಳ ॥

ಶೃಂಗಾರವನೆಂತು ಬಣ್ಣಿಪೆನೋಳ್ಪರ । ಕಂಗಳ ಸೆರೆಗೆಯ್ಯುತಿಹವು ॥ ೨ - ೬೩

ಪಂಚೇಂದ್ರಿಯಗಳನ್ನು ಗೆದ್ದ ರಾಜನಿಗೆ ಸಂದ ಗೌರವವನ್ನು ಕಹಳೆಯನ್ನೂದುವ ಮೂಲಕ ಭೂಮಿಯಲ್ಲಿ ಸಾರಿ ಹೇಳುತ್ತಿದ್ದಾನೋ ಎನ್ನುವಂತೆ ಕಂಗೊಳಿಸುವ ಘನವಾದ ಕೆಳತೊಡೆಯ ಶೃಂಗಾರವನ್ನು ಏನೆಂದು ಬಣ್ಣಿಸಲಿ ಎಂದು ಚಂದ್ರಮನು ಸ್ವತಃ ಪ್ರಶ್ನಿಸುತ್ತಾನೆ. ಶಿಲ್ಪದ ಈ ಸೊಬಗು, ಸೌಂದರ್ಯಗಳು ನೋಡುಗರ ಕಣ್ಣನ್ನೇ ಸೂರೆಗೊಳ್ಳುವಂತೆ ಮಾಡಿತ್ತು. ಅದನ್ನು ವರ್ಣಿಸುತ್ತ,

ತೊಡೆಯೆಂದು ಮನಸಿಜರಾಯನ ಬಿರುದನು । ತೊಡೆಯಿಸಿದುದರಿಂದ ಲವಕೆ ॥

ತೊಡೆಯೆಂಬ ಪೆಸರಾದುವವರ ಚೆಲ್ವಿಕೆಯನು । ನುಡಿಯಲಿನ್ನಳವೆಯಿಂತೆಂದು ॥ ೨ -೬೬

ಎಂದು ಅಭಿಮಾನದಿಂದ ನುಡಿಯುತ್ತಾನೆ.

ಆದುವರೆಗೆ ತನಗಿದ್ದ ಮನ್ಮಥ ಎಂಬ ಹೆಸರನ್ನು ತನ್ನ ತಪಶ್ಚರ್ಯದಿಂದ ಸಂಪೂರ್ಣವಾಗಿ ತೊಡೆದು ಹಾಕಿ, ಮೋಕ್ಷ ಪಡೆದು ತೀರ್ಥಂಕರನಾಗುವುದರ ಮೂಲಕ ತನಗಿದ್ದ ಹೆಸರು ಬಿರುದನ್ನು ತೊಡೆದು ಹಾಕಿದನೋ ಎನ್ನುವಂತೆ, ಮೂರ್ತಿಯ ಸುಂದರವಾದ ತೊಡೆಗಳು ಕಂಗೊಳಿಸುವಂತೆ ಮತ್ತು ಆ ತೊಡೆಯುವಿಕೆಯ ಕ್ರಿಯೆಯಿಂದಲೇ ಅದಕ್ಕೆ ತೊಡೆ ಎಂಬ ಹೆಸರು ಮೂಡಿ ಬಂದಿತು ಎಂದು ಚಮತ್ಕಾರಿಕವಾಗಿ ಕವಿ ಬಣ್ಣಿಸುತ್ತಾನೆ. ಮನ್ಮಥನ ಸೊಕ್ಕಿನ ಆನೆಗಿಂತಲೂ ತಾನು ಸೊಕ್ಕಿದ ಸಿಂಹ ಎನ್ನುವ ರೀತಿಯಲ್ಲಿ ಘನವಾದ, ಅಗಲ, ಎತ್ತರವಾದ ತೊಡೆಗಳನ್ನು ಏರಿಬಂದಂತೆ

ಗೊಮ್ಮಟಸ್ವಾಮಿಯ ನೀಳವಾದ ಸೊಂಟದ ಭಾಗ ಕಂಗೊಳಿಸಿದವು.

ಲಾವಣ್ಯರಸ ಸಮುದ್ರದ ತೆರೆಮಾಲೆಯ/ಭಾವದೊಳೊಪುತ್ತಲಿಹುದು ॥

ಭಾವಿಸಿ ನೋಡುವ ಜನರಿಗೆ ತ್ರಿವಳಿಗೆ । ಳೇವೇಳ್ವ ದೇವನ ಸೊಬಗ ॥ ೩-೬೮

ಗೊಮ್ಮಟ ಸ್ವಾಮಿಯ ಹೊಟ್ಟೆಯ ಮೇಲಿರುವ ತ್ರಿವಳಿ ಸಾಲುಗಳು ನೋಡುವ ಜನರಿಗೆ, ಜಿನನು ಲಾವಣ್ಯರಸದ ಸಮುದ್ರದ ತೆರೆಯ ಸಾಲುಗಳ ಮೇಲೆ ಭಾವರಹಿತವಾಗಿ ಓಲಾಡುವಂತೆ ಕಂಡು ಬರುತ್ತಿತ್ತು.

ಭಾವೆ ಸರಸ್ವತಿ ಕ್ರೀಡಿಪಗೊಳನಂತೆ । ಲಾವಣ್ಯ ರಸದಿಂದ ತುಂಬಿ ॥

ಆವಾಗ ಹೆಚ್ಚು ಕುಂದಿಲ್ಲದೆ ಸೊಬಗಿನಿಂ । ದೇವನ ನಾಭಿಯೊಪ್ಪಿಹುದು ॥ ೩-೬೯

ಗೊಮ್ಮಟ ಮೂರ್ತಿಯಲ್ಲಿ ಕೆತ್ತಲ್ಪಟ್ಟ ನಾಭಿಯನ್ನು ಕುರಿತು ಕವಿ, ಹೀಗೆಂದು ವರ್ಣಿಸುತ್ತಾನೆ. ಸರಸ್ವತಿಯು ಜಲಕ್ರೀಡೆಯಾಡುವ ಕೊಳದಂತೆ, ಲಾವಣ್ಯ ರಸದಿಂದ ಕೂಡಿದ ಶೃಂಗಾರಮಯವಾದ ನಾಭಿಯನ್ನು ಸ್ವಲ್ಪವೂ, ಲೋಪದೋಷವಿಲ್ಲದಂತೆ ಶಿಲ್ಪಿಗಳು ಸುಂದರವಾಗಿ ರಚಿಸಿದರು.

ಅಂತರಂಗದಲ್ಲಿರುವ ತ್ಯಾಗ, ತಾಳ್ಮೆ, ವೈರಾಗ್ಯ ಎಂಬ ಲಕ್ಷ್ಮಿಯ ಒಡ್ಡೋಲಗ ಶಾಲೆಯಂತಿರುವ, ವಿಶಾಲವಾದ ವಕ್ಷಸ್ಥಳದ ಸೊಬಗನ್ನು ತಾನು ಹೀಗೆಂದು ಬಣ್ಣಿಸಿ ಕವಿ, ಆ ಮೂರ್ತಿಯ ಸೊಬಗನ್ನು ವರ್ಣಿಸುತ್ತಾನೆ.

'ಜಿನ' ಎನ್ನುವ ಕಲ್ಪವೃಕ್ಷದ ಬೀಳುಗಳನ್ನು ಹೋಲುವ ರೀತಿಯಲ್ಲಿ ಗೊಮ್ಮಟ ಮೂರ್ತಿಯ ಅಜಾನುಬಾಹುಗಳಿಗೆ ಹೊಂದಿಕೆಯಾಗುವ ಕೈ ಬೆರಳುಗಳ ಉಗುರುಗಳನ್ನು ಸಹ, ಸೂಕ್ಷ್ಮವಾಗಿ ಅಚ್ಚುಕಟ್ಟಾಗಿ ರೂಪಿಸಲಾಗಿತ್ತು.

ಮೊಗವೆಂಬ ಮ ಣಿದರ್ಪಣದ ಪಿಡಿಯೆಂಬಂತೆ । ಸೊಗಸುವ ಕಂಠವೊಪ್ಪಿಹುದು॥

ಮೃಗಧರ ಪೂರ್ವಾದ್ರಿ ಶಿಖರದೊಳಿರ್ಪಂತೆ । ನಗೆಮೊಗವೊಪ್ಪಿತಾ ಜಿನನ॥ ೩-೭೨

ಎಂದು ಗೊಮ್ಮಟನ ಮುಖವೆಂಬ ಕನ್ನಡಿಗೆ ಸುಂದರವಾದ ಹಾಗೂ ತಕ್ಕುದಾದ ಕಂಠಭಾಗವು ಶೋಭಿಸುತ್ತಿತ್ತು. ಶಿವ ಪಾರ್ವತಿಯರಂತೆ, ಪೂರ್ವಾದ್ರಿ ಶಿಖರಗಳು ಇರುವಂತೆ, ಮುಖ ಹಾಗೂ ಕುತ್ತಿಗೆ ಎರಡೂ ಒಂದಕ್ಕೊಂದು ಒಪ್ಪುವ ರೀತಿ ಇದ್ದುವಂತೆ; ಆ ಮುಖದಲ್ಲಿ ಹರಡಿನಿಂತ ನಗುವಂತೂ, ಆ ಮುಖಕ್ಕೆ ಮತ್ತಷ್ಟು ಸೊಬಗನ್ನು ನೀಡುತ್ತಿತ್ತು ಎಂದು ಕವಿ ಮೆಚ್ಚುಗೆಯಿಂದ ನುಡಿಯುತ್ತಾನೆ.

ಕಂಪನುಶ್ವಾಸ ನಿರ್ವಾಸ ಕಾಶ್ರಯವಾಗಿ । ಸಂಪಗೆ ಮಿರುಮುಗುಳಂತೆ ॥

ಕಂಪಿಂದ ನಾಸಿಕ ವೊಪ್ಪಿತು ಸ್ಮರನೆಂಬ । ಕಂಪಣಿ ಪೊರ್ದದ ಜಿನನ ॥ ೩-೭೩

ಕಂಪನ್ನು ಬೀರುವ ಸಂಪಗೆಯಂತೆ, ಉಶ್ವಾಸ ಮತ್ತು ನಿಶ್ವಾಸಕ್ಕಾಗಿ ಆಶ್ರಯವಾಗಿದ್ದ ಬಾಹುಬಲಿಯ ಮೂಗು ಸುಂದರವಾಗಿ ಕಂಗೊಳಿಸುತ್ತಿತ್ತು. ಜಿನನ ತಲೆಯಲ್ಲಿದ್ದ ಸುರುಳಿ ಕೂದಲು ಆತನ ಚಿತ್ತವು ಚಂಚಲವಾಗದಂತೆ ತಡೆಯಲು

ಇತ್ತು ಎಂದು ಕವಿ ಜಿನನ ಸುರುಳಿಯಾದ ತಲೆಕೂದಲನ್ನು ಬಣ್ಣಿಸುತ್ತಾನೆ. ಮತ್ತು ಆತನ ನಗುಮುಖಕ್ಕೆ ಸುರುಳಿಯಾದ ತಲೆಕೂದಲು ಮತ್ತಷ್ಟು ಶೋಭೆಯನ್ನುಂಟು ಮಾಡಿತು.

ಎಡಬಲದೊಳಗೆ ಪುತ್ತಿಕ್ಕಿ ಕುಕ್ಕುಟ ಸರ್ಪ । ವೆಡೆಗೊಂಡು ನಿಂದುದಾ ಜಿನನ ॥

ಕಡು ಶಾಂತರಸದಿಂದಲತ್ತಿತ್ತ ಚಲಿಸದೆ । ಪೆಡೆಯೆತ್ತಿ ನೋಡುತಲಿಹವು ॥ ೩-೭೮

ಲೋಕಕ್ಕಾಗಿ ಧ್ಯಾನಿಸುತ್ತಾ ನಿಂತ ಗೊಮ್ಮಟ ಸ್ವಾಮಿಯು ಪಾದದಿಂದ ಮುಡಿಯವರೆಗೆ ಬೆಳೆದು ನಿಂತ ಬಳ್ಳಿ, ಆತನ ಕಾಲ ಬುಡದಲ್ಲೇ ಹುತ್ತ ಕಟ್ಟಿ ಅದನ್ನು ಏರಿನಿಂದ ಕುಕ್ಕುಟ ಸರ್ಪಗಳು ಆಕರ್ಷಕವಾಗಿದ್ದವು. ಇಷ್ಟಾದರೂ ಸಹ ಬಾಹುಬಲಿಯು ಸ್ವಲ್ಪವೂ ಭಯಬೀತನಾಗದೆ ಚಿತ್ತ ಚಂಚಲವಾಗದೆ, ನಿಂತಲ್ಲೇ ತಟಸ್ಥನಾಗಿ ನಿಂತಿದುದನ್ನು ಸಹ ಶಿಲ್ಪಿಗಳು ಸೂಕ್ಷ್ಮವಾಗಿ ಹಾಗೂ ಸುಂದರವಾಗಿ ಕೆತ್ತಿದ್ದರಂತೆ, ಜೊತೆಗೆ ವಿಗ್ರಹದ ಎಡಬಲಗಳಲ್ಲಿ ಹೆಮ್ಮರವಾಗಿ ನಿಂತ ಮಾವಿನ ಮರಗಳು, ಜೇನುಗೂಡು ಇವೆಲ್ಲದರ ನಡುವೆಯೂ ನಿಂತ ಜಿನನ ಮುಖವು ಸಂಪೂರ್ಣವಾಗಿ ಶಾಂತರಸದಲ್ಲಿ ಓಲಾಡುತ್ತಿತ್ತು. ಅಕ್ಕ ಪಕ್ಕದಲ್ಲಿದ್ದ ಕುಕ್ಕುಟ ಸರ್ಪಗಳು ಸಹಾ ಅತ್ತಿತ್ತ ಚಲಿಸದೆ, ಹೆಡೆಬಿಚ್ಚಿ ಜಿನನನ್ನೇ ನೋಡುತ್ತಾ ನಿಂತಿತ್ತು ಎಂದು ಕವಿ ಮಾರ್ಮಿಕವಾಗಿ ವರ್ಣಿಸಿದ್ದಾನೆ.

ಆಕಾಶವನು ಚುಂಬಿಸುವ ಬಿಂಬಕೆ ದಾಮ। ವೇಕೆಂದು ಮಾಡಿಸಿತಿಲ್ಲ ॥

[illegible] ॥ ೩-೯೬

ಯಾವುದೇ ಕಟ್ಟಡಗಳಿಲ್ಲದೆ ಬಟ್ಟ ಬಯಲಿನಲ್ಲಿ ನಿಂತ ಗೊಮ್ಮಟ ಮೂರ್ತಿಗೆ 'ಕಟ್ಟಡವು ಏಕಿಲ್ಲ' ಎಂದು ರಾಜನಿಗೆ ಕೇಳಿದಾಗ, 'ಆ ಜಿನ ಮೂರ್ತಿಗೆ, ಕಟ್ಟಡ ಕಟ್ಟುವುದು ಕಷ್ಟ ಸಾಧ್ಯ" ಎಂದು ಹೇಳದೆ, ಅದರ ಬದಲಿಗೆ "ಆಕಾಶದೆತ್ತರವಿರುವ ಈ ಭವ್ಯವಾದ ಮೂರ್ತಿಯನ್ನು ಲೋಕವೆಲ್ಲಾ ಕಂಡು ಆತನ ಸಮ್ಯಕ್ತ್ವ ಗುಣವನ್ನು ಹೊಗಳಿ, ಕೊಂಡಾಡಿ, ಜನರೂ ಸಹ ಆತನನ್ನು ತ್ಯಾಗ, ನೀತಿ, ಸತ್ಯ, ಧರ್ಮದ ಮಾರ್ಗವನ್ನು ಅನುಸರಿಸಲಿ ಎಂದು ಬಾಹುಬಲಿ ಮೂರ್ತಿಗೆ ಕಟ್ಟಡವನ್ನು ಕಟ್ಟದೆ ಹಾಗೆಯೇ ಬಿಟ್ಟು ಬಿಟ್ಟೆ" ಎಂದು ಹೇಳುತ್ತಾನೆ.

ಹೀಗೆ ಗೊಮ್ಮಟ ಮೂರ್ತಿಯ ಕೆತ್ತನೆಯ ವಿವಿಧ ನೆಲೆಗಳನ್ನು, ಸ್ವರೂಪವನ್ನು ಸ್ವಾರಸ್ಯವಾಗಿ ವಿವರಿಸುತ್ತಾನೆ.

ಈ ರೀತಿಯಲ್ಲಿ ಸುಮಾರು ಒಂದು ವರ್ಷಗಳ ಕಾಲ ನಿರಂತರವಾಗಿ ನಡೆದ ಕೆಲಸದಿಂದ ಸಂಪೂರ್ಣ ರೂಪ ಪಡೆದ ಮೂರ್ತಿಯನ್ನು ಕಂಡು ರಾಜ ಹರ್ಷಚಿತ್ತನಾದನು. ಮತ್ತು ಇಂತಹ ಅಪ್ರತಿಮ ಮೂರ್ತಿಯನ್ನು ಕೆತ್ತುವುದರ ಮೂಲಕ, ಒಂದು ಶಿಲೆಗೆ ಜೀವ ತುಂಬುವುದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಶ್ರಮ ವಹಿಸಿದ ಶಿಲ್ಪಿಗಳಿಗೆ ಪಾಂಡ್ಯರನು, 'ಇವರಿಗೆ ತಾನೇನು ಕೊಟ್ಟರೂ ಸಾಲದು'! ಎಂಬಂತೆ, ಬೆಲೆ ಬಾಳುವ ಉಡುಗೊರೆಗಳನ್ನು ನೀಡಿ ಸನ್ಮಾನಿಸಿದನು.

೩.೨ ಬಾಹುಬಲಿಯ ವಿಗ್ರಹದ ಸಾಕಾಣಿಕೆ :

ಬಾಹುಬಲಿಯ ವಿಗ್ರಹದ ಕೆತ್ತನೆಯ ಕಾರ್ಯ ಒಂದು ಹಂತಕ್ಕೆ ಬಂದ ನಂತರ ಅದರ ಸಾಗಾಣಿಕೆಯನ್ನು ಕುರಿತು ನೀಡುವ ವಿವರಗಳ ಮೂಲಕ ಒಂದು ಕಾಲಘಟ್ಟದ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ವಿವರಗಳ ಜೊತೆಗೆ, ತುಳುನಾಡಿನ ಸಂಸ್ಕೃತಿಯನ್ನು ಚಂದ್ರಮ ಕವಿ ತನ್ನ ಕಾವ್ಯದಲ್ಲಿ ದಾಖಲಿಸಿದ್ದಾನೆ ಎನ್ನಬಹುದು.

ಪಾಂಡ್ಯ ನೃಪಾಲನು ಮೂರ್ತಿಯ ಪ್ರಾರಂಭದ ಕೆಲಸವು ಒಂದು ಹಂತದವರೆಗೆ ಮುಗಿದ ಮೇಲೆ, ಅದನ್ನು ಶಿಲಾಘಟ್ಟಕ್ಕೆ ಕೊಂಡೊಯ್ದು ಉಳಿದ ಕೆಲಸವನ್ನು ಅಲ್ಲಿ ಮಾಡಿಸುವುದಾಗಿ ಯೋಚಿಸುತ್ತಾನೆ. ಮತ್ತು ಅದಕ್ಕೆ ಬೇಕಾಗುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಸುತ್ತಾನೆ.

ಇಪ್ಪತ್ತು ಗಾಲಿಗಳಿಂದ ಸೊಬಗನಾಂ । ತೊಪ್ಪುವ ಬಂಡಿಯನಾಗ ॥
ಉಪ್ಪರವಾಗಿ ಮಾಡಿಸಿದನು ಕರ್ಬೊನ್ನ । ದಪ್ಪದ ಕೀಲ್ಗಳಿಂ ಬಳಸಿ ॥ ೩–೪೦

ಮೂರ್ತಿಯನ್ನು ಬೆಟ್ಟಕ್ಕೆ ಕೊಂಡೊಯ್ಯಲು ಒಂದು ಬಂಡಿಯನ್ನು ತಯಾರಿಸಲಾಗಿತ್ತು. ಇಪ್ಪತ್ತು ಚಕ್ರಗಳನ್ನು ಒಳಗೊಂಡ ಬಂಡಿಗೆ ಕಪ್ಪು, ಹರವಾದ, ಮರದ ಕೀಲುಗಳನ್ನು ಬಳಸಿ ಉಪ್ಪರಿಗೆಯನ್ನು ನಿರ್ಮಿಸಲಾಯಿತು. ಮತ್ತು ಆ ಬಂಡಿಯನ್ನು ಎಳೆಯಲು ಸಹಾಯವಾಗುವಂತೆ ದಪ್ಪ ಹಗ್ಗವನ್ನು ಸಹ ಬಂಡಿಗೆ ಕಟ್ಟಲಾಗಿತ್ತು.

ಅರಸು ಪ್ರಧಾನರು ದಂಡ ನಾಯಕರು ಮಾತ್ತರಿಕೆಯ ರಾಜ ಮನ್ನೆಯರು ॥
ಕರಣಿಕ ಮುಂತಾದ ಪ್ರಜೆ ಪರಿವಾರಗಾಳ್ಪೆರಸಿಪಿಡಿದರಾಮಿಣಿಯ ॥ ೩–೪೨

ಎಂದು ಜನರು ತಮ್ಮಲ್ಲಿ ಜಾತಿ – ಧರ್ಮ, ಲಿಂಗ ವರ್ಗದ ಭೇದವಿಲ್ಲದೆ ಅರಸು, ಪ್ರಧಾನರು, ದಂಡನಾಯಕರು, ರಾಣಿಯರು, ರಾಜಪರಿವಾರದವರು, ಪ್ರಜೆಗಳು ಎಲ್ಲರೂ ಒಟ್ಟಾಗಿ ಸೇರಿ ಮೂರ್ತಿಯನ್ನು ಹೊತ್ತ ಬಂಡಿಯನ್ನು ಎಳೆದರೆಂದು ಈ ಘಟನೆಯನ್ನು ಸ್ವಾರಸ್ಯಕರವಾಗಿ ವಿವರಿಸುತ್ತಾನೆ.

ಈ ಉತ್ಸವದ ಸಂದರ್ಭದಲ್ಲಿ ಜನರು ಯಾವ ರೀತಿ ಆಚರಿಸಿದರೆಂದರೆ; ಎಲ್ಲರೂ ಸೇರಿ, ಹಗ್ಗವನ್ನು ಹಿಡಿದು ಬಂಡಿಯನ್ನು, ವಾದ್ಯಘೋಷಗಳ ಸದ್ದಿನೊಂದಿಗೆ,ಜಯಕಾರ ಹಾಕುತ್ತಾ, ಸಂಭ್ರಮದಿಂದ ಎಳೆಯುತ್ತಿದ್ದರು. ಆ ಎಳೆತದ ರಭಸಕ್ಕೆ ಕಲ್ಲಿಗೆ ಉಜ್ಜುವ ಗಾಲಿಗಳಿಂದ ಹೊರಬರುವ ಸದ್ದು ನಾಲ್ಕು ದಿಕ್ಕುಗಳಿಗೂ ವ್ಯಾಪಿಸುವಂತಿತ್ತು ಎಂದು ಆ ವೈಭವವನ್ನು ವರ್ಣಿಸುತ್ತಾನೆ. ಅಲ್ಲದೆ ಈ ಸಂಭ್ರಮದ ಉತ್ಸವಕ್ಕೆ ತುಳುನಾಡಿನ ಸಂಭ್ರಮದ ವಿಶೇಷತೆಗಳಲ್ಲಿ ಒಂದಾದ ಸುಡುಮದ್ದಿನ, ವಿಚಾರವನ್ನು ಕವಿ ಇಲ್ಲಿ ಪ್ರಸ್ತಾಪಿಸಿದ್ದಾನೆ.

ಕದನಿಗಳೆದ್ದವು ಸಾವಿರ ನೆಲನೆಲ್ಲ । ವದಿರುವಂದದಿ ನೃಪವರರು ॥
ಬೆದರುವಂದದಿ ತಾರೆಗಳೆಲ್ಲ ಭೂತಳ । ಕುದುರುವಂದದಿ ನಭದಿಂದ ॥ ೩–೪೪

ನೆಲದಿಂದ ಮೇಲೆದ್ದ ಕದನಿಗಳು ಹಾರಿ ಆಕಾಶವನ್ನು ಸೇರಿದಾಗ, ಅದರ ಸದ್ದಿಗೆ ತಾರಾ ಸಮೂಹವೆಲ್ಲ ಬೆದರಿ ನೆಲಕ್ಕೆ ಬಿದ್ದವೋ ! ಎನ್ನುವಂತೆ ಸುಡುಮದ್ದಿನಿಂದ ಹೊರಬಿದ್ದ ಕಿಡಿಗಳು ಗೋಚರಿಸಿದವು.

ಗಾಡಿಯನ್ನು ಎಳೆಯುವ ಮೊದಲು ರಾಜ, ಗಾಡಿಯ ಚಕ್ರಗಳಿಗೆ ಒಂದೊಂದು ಗಾಲಿಗೆ ಹತ್ತು ಸಾವಿರ ಕಾಯಿಗಳನ್ನು ಒಡಿಸುವುದರ ಮೂಲಕ ಗಾಡಿ ಹಾಗೂ ಮೂರ್ತಿಗೆ ದೃಷ್ಟಿಯನ್ನು ನಿವಾಳಿಸಿದನೆಂದು ತಿಳಿಸುತ್ತಾನೆ.

ಗಾಲಿಯ ಹಾರೆಗೆಣ್ಣೆಯ ಹೊಯ್ಸಿದನತಿ । ಲೀಲೆಯಿಂದವರ ಚೀತ್ಕಾರ॥

ಭೂಲೋಕವನು ವ್ಯಾಪಿಸುವಂತೆ ನಿಜಕೀರ್ತಿ । ಮೂಲೋಕದೊಳಗೆ ನಿಲ್ವಂತೆ ॥ ೩-೪೫

ಈ ರೀತಿಯಾಗಿ ಬಂಡಿಯ ಚಕ್ರಗಳು ಸದ್ದು ಮಾಡದಂತೆ ಎಣ್ಣೆಯನ್ನು ಹೊಯ್ಸಿದನು ಎಂದು ಕವಿ ಹೇಳುತ್ತಾನೆ.

ಬಂಡಿಯನ್ನು ಬೆಟ್ಟದ ಮೇಲೆ ಕೊಂಡೊಯ್ಯುವಾಗಿನ ವಿವರಣೆಯನ್ನು ಕವಿ ;

ಗಾಲಿಯ ಚೀತ್ಕಾರ ರಭಸಕ್ಕೆ ದಿಗ್ಗಜವಲಿ ಬೊಬ್ಬರಿದೋಡಿದವು ॥

ಮೇಲೆ ಪರ್ವಿತು ಕೆಂಧೂಳು ಸೂರ್ಯನರಶ್ಮಿ [ಜಾಲ] ಮರೆಸಿತು ಆಕಾಶದಲ್ಲಿ ॥ ೩ -೪೭

ಎಂದು ಬೆಟ್ಟದ ಕಲ್ಲಿಗೆ ಬಂಡಿಯ ಗಾಲಿಗಳು ಉಜ್ಜುವಾಗ ಆ ಘರ್ಷಣೆಗೆ ಉಂಟಾದ ಸದ್ದು ಅಷ್ಟದಿಕ್ಕಿನ ಆನೆಗಳು ಬೊಬ್ಬಿರಿದಂತೆ ಕೇಳಿ ಬಂತು ಹಾಗೂ ಅದರಿಂದ ಎದ್ದ ಕೆಂಧೂಳಿಗೆ ಸೂರ್ಯನ ಕಿರಣಗಳೇ ಮುಚ್ಚಿ ಹೋದವಂತೆ !

ಬಂಡಿಯು ಸುಮಾರು ದೂರ ಸಾಗಿದ ನಂತರ, ಜನರ ಆಯಾಸ, ಬಾಯಾರಿಕೆ, ಹಸಿವನ್ನು ನಿವಾರಿಸಲು ಅವರಿಗೆ ಆಹಾರ, ಪಾನೀಯದ ಸರಬರಾಜಿನ ವ್ಯವಸ್ಥೆಯನ್ನು ರಾಜ ಮಾಡಿಸುತ್ತಾನೆ. ಅಲ್ಲದೆ ಕೆಲಸದಲ್ಲಿ ತೊಡಗಿದ ಜನರನ್ನು ತಾನೇ ಖುದ್ದಾಗಿ ಹೋಗಿ ಮಾತನಾಡಿಸುತ್ತಾನೆ. ಇದು ರಾಜನ ಔದಾರ್ಯತೆಗೆ ಸಾಕ್ಷಿಯಾಗಿದೆ ಎನ್ನಬಹುದು.

ಕುಡಿಮಜ್ಜಿಗೆ ಸಕ್ಕರೆಯ ಪಾನಕವನು। ಕೊಡಕೊಡದೊಳು ತುಂಬಿ ತರಿಸಿ॥

ಮೊಡವಿ ಪಾಲಕ ಗಿಂಡಿಗಳ ತುಂಬಿಯವರಿಗ । ತರಿಸಿಕೊಡಿಸಿದನಾಕ್ಷಣದಿ ॥ ೩-೫೦

ಜನರಿಗೆ ಕುಡಿ ಮಜ್ಜಿಗೆ, ಸಕ್ಕರೆಯ ಪಾನಕ ಮುಂತಾದ ಪಾನೀಯಗಳನ್ನು ದೊಡ್ಡ ದೊಡ್ಡ ಕೊಡಗಳಲ್ಲಿ ತರಿಸಿ ಪ್ರತಿಯೊಬ್ಬರಿಗೂ ಸಣ್ಣ ಸಣ್ಣ ತಂಬಿಗೆಯಲ್ಲಿ ನೀಡಿದನು. ಅಲ್ಲದೆ ಕಡುಬು, ಹೂರಿಗೆ, ತುಪ್ಪದಲ್ಲೇ ಹುರಿದ ಗಾರಿಗೆ, ವಡೆ, ಕಜ್ಜಾಯ ಮುಂತಾದ ಭಕ್ಷ್ಯಗಳನ್ನು ತರಿಸಿ ಕೊಡುತ್ತಾನೆ.

ಜನರು ತಮ್ಮ ಆಯಾಸ, ಬೇಸರಗಳನ್ನು ಕಳೆದುಕೊಳ್ಳಬೇಕೆಂದು ಬಯಸಿ ಶ್ರೀಗಂಧ, ಕರ್ಪೂರ ಮಿಶ್ರಿತ ವೀಳ್ಯವನ್ನು ಉದಾರವಾಗಿ ನೀಡಿ, ಜನರ ಮೆಚ್ಚುಗೆಗೆ ಪಾತ್ರನಾಗುತ್ತಾನೆ.

ಅಂತೂ ವಿಗ್ರಹವನ್ನು ಹೊತ್ತ ಬಂಡಿ ಒಂದು ದಿನದಲ್ಲಿ ಒಂದು ಮಾರು ದೂರ ಎಳೆಯಿಸಿ, ಪುನಃ ಮಾರನೆಯ

[illegible]

ದಿನ ಎಳೆಯುವಂತೆ ಜನರಿಗೆ ಆದೇಶ ನೀಡಲಾಗುತ್ತಿತ್ತು. ಜನರಿಂದ ಗಾಡಿಯನ್ನು ಎಳೆಯಲು ಸಾಧ್ಯವಾಗದಾಗ ಮದ್ದಾನೆಗಳಿಂದಲೂ ಸಹ ಆ ಬಂಡಿಯನ್ನು ಮುಂದಕ್ಕೆ ನೂಕಿಸಲಾಗುತ್ತಿತ್ತು.

ಈ ರೀತಿಯಾಗಿ ಒಂದು ತಿಂಗಳುಗಳ ಕಾಲ ಆ ಮೂರ್ತಿಯನ್ನು ಹೊತ್ತ ಬಂಡಿಯನ್ನು ಬೆಟ್ಟದ ಮೇಲಕ್ಕೆ ಎಳೆದೊಯ್ದು, ಬೆಟ್ಟದ ತುದಿಯನ್ನು ತಲುಪಿದ ಬಳಿಕ ಆ ಮೂರ್ತಿಯನ್ನು ಇಡಲು ೭೨ ಕಂಬಗಳಿಂದ ನಿರ್ಮಿಸಲ್ಪಟ್ಟ ವಿಸ್ತಾರವಾದ ಚಪ್ಪರದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಹೀಗೆ ಗೊಮ್ಮಟ ಮೂರ್ತಿಯನ್ನು ಬೆಟ್ಟದ ಮೇಲೆ ಕೊಂಡೊಯ್ಯಲಾದ ಚಾರಿತ್ರಿಕ ಘಟನೆಯನ್ನು ಸ್ವಾರಸ್ಯವಾಗಿ ಕವಿಯು ಚಿತ್ರಿಸಿದ್ದಾನೆ.

೩.೩ ಬಾಹುಬಲಿ ವಿಗ್ರಹ ಪ್ರತಿಷ್ಠಾಪನೆ, ಮಹಾಮಸ್ತಕಾಭಿಷೇಕ ಮತ್ತು ಪುನರ್‌ಪ್ರತಿಷ್ಠೆ

೩.೩.೧ ಪ್ರತಿಷ್ಠಾಪನೆ

ಜೈನ ಸಂಪ್ರದಾಯದಲ್ಲಿ ವಿಗ್ರಹಗಳ ಪ್ರತಿಷ್ಠಾಪನೆಗೆ ಅದರದೇ ಆದ ಮಹತ್ವವಿದೆ. ಅಂತೆಯೇ ಸಂಹಿತಾ ಶಾಸ್ತ್ರಗಳಲ್ಲಿ ಬೆಳೆದು ಬಂದಿರುವ ಪದ್ಧತಿಯಂತೆ ಇದನ್ನು ನೆರವೇರಿಸಲಾಗುತ್ತದೆ. ಇದೊಂದು ವೈಶಿಷ್ಟ್ಯಪೂರ್ಣವಾದ ಕಲಾಪವಾಗಿದ್ದು, ಇದನ್ನು ಮಾಡುವುದರಿಂದ ಹಾಗೂ ವೀಕ್ಷಿಸುವುದರಿಂದ ತಮಗೆ ಪುಣ್ಯ ಲಾಭವಾಗಿ ಆತ್ಮನ ಕರ್ಮ ಕ್ಷಯಿಸುತ್ತದೆಂದು ಜೈನರು ಭಾವಿಸುತ್ತಾರೆ.

"ಪ್ರತಿಷ್ಠಾ ವಿಧಿಗಳಲ್ಲಿ ಮುರು ವಿಧಗಳು: ವ್ಯಾಸ ಪ್ರತಿಷ್ಠೆ, ಮಧ್ಯಮ ಪ್ರತಿಷ್ಠೆ, ಲಘು ಪ್ರತಿಷ್ಠೆ. ಪ್ರತಿಷ್ಠಾಪಕನು ಇವುಗಳಲ್ಲಿ ಯಾವುದೇ ವಿಧಿಯನ್ನು ಆರಿಸಿಕೊಂಡರೂ,ಅದನ್ನು ಕ್ರಮಬದ್ಧವಾಗಿ ಆಚರಿಸಬೇಕಾಗುತ್ತದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[1]"

ಈ ವಿಧಿಗಳಲ್ಲಿ ಅಂಕುರಾರ್ಪಣೆ, ವೇದಿ ನಿರ್ಮಾಣ, ವಾಸ್ತುಬಲಿ, ಧ್ವಜಾರೋಹಣ, ಭೇರಿತಾಡನ, ಗರ್ಭಾವತರಣ ಕಲ್ಯಾಣ, ಪರಿನಿಷ್ಕ್ರಮಣ ಕಲ್ಯಾಣ, ಕೇವಲ ಜ್ಞಾನ ಕಲ್ಯಾಣ, ನಿರ್ವಾಣ ಕಲ್ಯಾಣ ಮುಂತಾದ ವಿಧಿಗಳು ಜರುಗುತ್ತವೆ. ಮತ್ತು ಆಯಾ ತೀರ್ಥಂಕರನ ಪ್ರತಿಷ್ಠಾ ಕಾರ್ಯವು ಆ ತೀರ್ಥಂಕರನ ಜನ್ಮ ನಕ್ಷತ್ರಕ್ಕೆ ಅನುಗುಣವಾಗಿ ನಡೆಯುತ್ತದೆ ಎನ್ನಬಹುದು.

ಬಾಹುಬಲಿ ತೀರ್ಥಂಕರನಲ್ಲದಿದ್ದರೂ ಆತನ ಪ್ರತಿಷ್ಠಾ ವಿಧಿಯ ಸಂದರ್ಭದಲ್ಲಿ ೨೪ ತೀರ್ಥಂಕರರಲ್ಲಿ ಯಾರಾದರೂ ಒಬ್ಬ ತೀರ್ಥಂಕರನ 'ಪಂಚಕಲ್ಯಾಣ' ವಿಧಿಯನ್ನು ನೆರವೇರಿಸಿ, ಜೊತೆಗೆ ಬಾಹುಬಲಿಗೆ ಜನ್ಮಾಭಿಷೇಕ, ಪಟ್ಟಾಭಿಷೇಕ ಹಾಗೂ ಪರಿನಿಷ್ಕ್ರಮಣ ಎಂಬ ಮೂರು ಕಲ್ಯಾಣಗಳನ್ನು ಮಾತ್ರ ನಡೆಸಲಾಗುತ್ತದೆ. ಇದು ಪೂರ್ವದಿಂದಲೂ

---

೧. ತುಳುನಾಡಿನ ಜೈನಧರ್ಮ, ಡಾ. ಎಸ್.ಡಿ.ಶೆಟ್ಟಿ ಪು.ಸಂ.೧೭೬

[illegible]

[illegible]

[illegible]

[illegible]

[illegible]

[illegible]

[illegible]

ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ.

ಶಿಲಾಬೆಟ್ಟದ ಮೇಲೆ ಪಾಂಡ್ಯರಾಜನು ಬಾಹುಬಲಿಯ ವಿಗ್ರಹವನ್ನು ಸಾಗಿಸಿದ ಬಳಿಕ ನಡೆಸಿದ ಕಲಾಪಗಳನ್ನು ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಬಾಹುಬಲಿಯ ಒಂದು ಹಂತದ ಕೆತ್ತನೆಯೇನೋ ಮುಗಿದಿದೆ. ಉಳಿದ ಸೂಕ್ಷ್ಮ ಅಂಗಗಳ ಕೆತ್ತನೆಯನ್ನು ಮಾಡುವುದಕ್ಕೆ ಸಿದ್ಧತೆ ಮಾಡಲಾಗುತ್ತದೆ. ಶಿಲ್ಪಿಗಳ ಮತ್ತು ಪಂಡಿತರ ಸಲಹೆಯಂತೆ ವಿಗ್ರಹವನ್ನು ಸಮಾನಾಂತರವಾಗಿ ನಿಲ್ಲಿಸಿದ ಬಳಿಕ, ಆ ಕೆಲಸವನ್ನು ಮಾಡುವುದು ಸೂಕ್ತವೆಂಬ ನಿರ್ಧಾರವನ್ನು ತೆಗೆದುಕೊಂಡು, ವಿಗ್ರಹವನ್ನು ಕೂಲದಲ್ಲಿ ನಿಲ್ಲಿಸುವ ಕೆಲಸವನ್ನು ಆರಂಭಿಸುತ್ತಾರೆ. ಕವಿಯೇ ವಿವರಿಸುವಂತೆ,

ಭೂಮಿ ಶೋಧನೆಗವಕಾಶವಿಲ್ಲದೆ ಶಿಲಾಮಯ ಗಿರಿಯಾದುದರಿಂ ॥

ಆ ಮಧ್ಯದೊಳು ಪಂಚಾಂಗವ ನಿರ್ಮಿಸಿ । ಸ್ವಾಮಿಯ 'ಕೂಲ' ನಿಲ್ವಂತೆ ॥ ೩–೮೦

ಶಿಲಾಮಯವಾದ ಆ ಗಿರಿಯಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲು ಅಸಾಧ್ಯವಾದುದರಿಂದ ಆ ಗಿರಿಯ ಮಧ್ಯದಲ್ಲೇ ಒಂದು ಪಂಚಾಂಗವನ್ನು ನಿರ್ಮಿಸಿ ಸ್ವಾಮಿಯ ಕೂಲು ನಿಲ್ಲುವಂತೆ ವ್ಯವಸ್ಥೆ ಮಾಡುತ್ತಾರೆ. ಅನಂತರ ಒಂದು ಶುಭಮುಹೂರ್ತವನ್ನು ನೋಡಿ ಸ್ವಾಮಿಯ ಬಿಂಬವನ್ನು ಎತ್ತಿ ನಿಲ್ಲಿಸುವ ಯೋಜನೆಯನ್ನು ಕೈಗೊಳ್ಳುತ್ತಾರೆ.

ಮಂಗಲಾಷ್ಟಕವನು ವಿಪ್ರರು ಪೇಳಲು । ಮುಂಗಡೆಯೊಳು ಜೋಯಿಸರು ॥

ಹಿಂಗದಾಯತವೆ ಆಯತವೆಂದು ಪೇಳಲು । ತ್ತುಂಗ ಭೂಭುಜ ಭವ್ಯಸಂಘ ॥ ೩–೮೩

ಎಂದು ವಿಪ್ರರೆಲ್ಲರೂ ಒಟ್ಟಾಗಿ ಸ್ತೋತ್ರ ಪಠಿಸುತ್ತಿರಲು ಭಕ್ತ ಸಮೂಹವೂ ಸಹ ಜಯ ಜಯವೆಂದು ಘೋಷಿಸುತ್ತಿರಲು, ಮುನಿಗಳು ತಮ್ಮ ಪೂಜಾ ವಿಧಿಗಳನ್ನು ಮುಂದುವರಿಸುತ್ತಿರಲು, ಜೋಯಿಸರು ಮೂರ್ತಿಯನ್ನೆತ್ತಲು ಸರಿಯಾದ ಲಗ್ನ ಕೂಡಿ ಬರುತ್ತದೆ ಎಂದು ಸೂಚಿಸುತ್ತಾರೆ. ಹಾಗೂ ಘಂಟೆಯನ್ನು ಬಾರಿಸುತ್ತಾರೆ. ರಾಜನು ಬಿಂಬವನ್ನೆತ್ತಲು ಸಿದ್ಧರಾಗಿ ನಿಂತ ಭಕ್ತ ಸಮುದಾಯಕ್ಕೆ ಅದನ್ನು 'ಎತ್ತಿ' ಎಂದು ಅಪ್ಪಣೆ ನೀಡುವ ಸಲುವಾಗಿ ಕೈಯಲ್ಲಿದ್ದ ಹೂವಿನ ಹಾರವನ್ನು ಮೇಲಕ್ಕೆತ್ತುತ್ತಾನೆ.

ಒಂದೇ ಸಮಯದೊಳೆಪ್ಪತ್ತೈದು ಸಾವಿರ। ಮಂದಿ ಯಾ ಬಿಂಬವನೆತ್ತಿ ॥

ತಂದು ಸ್ಥಾಪಿಸಿದರು ಕೂಲದ ಮಧ್ಯದೊಳಂದು ಭವ್ಯ ಜಯವೆನಲು ॥ ೩–೮೬

ಈ ಧಾರ್ಮಿಕ ಕಾರ್ಯದಲ್ಲಿ ತುಳುನಾಡಿನ ಹಲರು ಹತ್ತು ಸಾವಿರ ಮಂದಿ, ತುಳುವರು ಬಿಟ್ಟು ಸುಮಾರು ಎಪ್ಪತ್ತೈದು ಸಾವಿರ ಮಂದಿ ಒಂದೇ ಸಮನೆ ಆ ಮೂರ್ತಿಯನ್ನು ಎತ್ತಿತಂದು, ಮೊದಲೇ ನಿರ್ಮಿಸಿದ ಕೂಲದ ಮಧ್ಯದಲ್ಲಿ ನಿಲ್ಲಿಸಿದರು. ಈ ಕಾರ್ಯಕ್ರಮವು

ಶಕಕಾಲವರ್ಷೊಂದು ಸಂಖ್ಯೆಗೆ ಸಂದ। ಪ್ರಕಟ ವಿರೋಧಿಕೃತಿ ೦ಬ ॥

ಸುಕರ ವತ್ಸರದ ಫಾಲ್ಗುಣ ಶುದ್ಧ ದ್ವಾದಶಿ । ಯ ಕಲಂಕ ಸೌಮ್ಯವಾರದೊಳು ॥ ೩–೮೮

[illegible]

ನಡೆಯಿತೆಂದು ಸ್ಪಷ್ಟಪಡಿಸುತ್ತಾನೆ.

ಈ ಉತ್ಸವ ಭಾಗವಾಗಿ ಕೆಲವು ಧಾರ್ಮಿಕ ಕಾರ್ಯಕ್ರಮಗಳು ನೆರವೇರುತ್ತವೆ. ಕವಿಗಳು, ಗಾಯಕರು, ಗೊಮ್ಮಟನ ಸ್ತುತಿಯನ್ನು ಮಾಡುತ್ತ ರಾಜನನ್ನು ಕೊಂಡಾಡುತ್ತಿರಲು ವಿವಿಧ ಬಗೆಯ ವಾದ್ಯಗಳು ಮೊಳಗುತ್ತಿತ್ತು.

ಅಲ್ಲಲ್ಲಿ ಪಾತ್ರವನಾಡೆ ಗಣಿಕೆಯರು । ಸಲ್ಲಲಿತಾಂಗಿಯರೊಲಿದು ॥

ಉಲ್ಲಾಸದಿಂದ ಧವಲಶೋಭನಗಳ । ಸೊಲ್ಲಿಸಿ ಪಾಡತಲಿಹರು ॥ ೩-೮೨

ಎಂದು ಆ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾನೆ.

ಈ ಉತ್ಸವದ ಪ್ರಯುಕ್ತ ನೃತ್ಯಗೈಯುವ ಗಣಿಕೆಯರು, ಉಲ್ಲಾಸ ಸಂಭ್ರಮದಿಂದ ಧವಲ ಶೋಭಾನಗಳನ್ನು ಹಾಡುತ್ತ ನರ್ತಿಸುತ್ತಿದ್ದರು.

ನಾನಾದೇಶದ ಭವ್ಯ ಸಂಘವ ಬರಿಸಿ ಮತ್ತಾನಂದಿಂದ ಭವ್ಯರನು ॥

ತಾನು ಮಾಡಿಸಿದನು ಬಿಂಬ ಪ್ರತಿಷ್ಠೆಯ । ನಾನಾದ ಮುಂದೆ ಪೇಳುವೆನು ॥ ೩-೯೩

ನಾನಾ ದೇಶದ ಜೈನಧರ್ಮೀಯರ ಸಂಘವನ್ನು ಬರಮಾಡಿಕೊಂಡು ಬಿಂಬ ಪ್ರತಿಷ್ಠೆಯ ಉತ್ಸವಕ್ಕೆ ಕರೆಯಿಸಿಕೊಂಡು ಪಾಂಡ್ಯರಾಜ ಆ ಉತ್ಸವವನ್ನು ಅತೀ ಸಂಭ್ರಮದಿಂದ ನಡೆಸಿದನೆಂದು ಕವಿ ತಿಳಿಸುತ್ತಾನೆ.

ಧ್ವಜದ ಪ್ರತಿಷ್ಠೆಯ ಸ್ತಂಭವನೆತ್ತಿಸಿ। ತ್ರಿಜಗದೊಡೆಯನುತ್ಸವಕೆ ॥

ಸುಜನ ಶಿರೋಮಣಿ ಮಾಡಿಸಿದನು ಭವ್ಯ । ವೃಜನವ ಲೋಪಿಸುವಂತೆ ॥ ೩-೯೯

ಧ್ವಜಾರೋಹಣ ಸ್ತಂಭವನ್ನು ಪ್ರತಿಷ್ಠಾಪಿಸಿದ ಘಟನೆಯನ್ನು ಉಲ್ಲೇಖಿಸುತ್ತಾನೆ. ಭವಹರನಾದ ಜಿನನಿಗೆ ನಡೆಸುವ ಅಂಕುರಾರ್ಪಣೆಯನ್ನು ಕುರಿತಂತೆ ಕವಿ ಹೀಗೆ ಹೇಳುತ್ತಾನೆ.

ಭವಹರ ಜಿನನುತ್ಸವಕೆ ಪದಿನೆಂಟು ಭೇದವನುಳ್ಳ ಧಾನ್ಯವತರಿಸಿ॥

ಯುವತಿಯರಿಂದ ಬಿತ್ತಿಸಿಯಂಕುರವ ಮತ್ತವರ್ಗಿತ್ತ ಬಾಗಿನಗಳನು ॥ ೩-೧೦೧

ಯುವತಿಯರು ೧೮ ವಿಧದ ಮೊಳಕೆ ಬರಿಸಿದ ಧಾನ್ಯಗಳನ್ನು ಸಂಪ್ರದಾಯಬದ್ಧವಾಗಿ ಬಿತ್ತಿದಾಗ, ರಾಜನು ಅವರಿಗೆ ಬಾಗಿನಗಳನ್ನು ನೀಡಿ ಗೌರವಿಸುತ್ತಾನೆ. ಆ ಬಳಿಕ,

ಧಾಮ ಶುದ್ಧಿಗೆ ಧಮವಿಲ್ಲದಿದ್ದುದರಿಂದ । ಸ್ವಾಮಿಯ ಬಿಂಬ ಶುದ್ಧಿಯನು ॥

ತಾ ಮಾಡಿಸಿದನು ಸರ್ವೌಷಧಿಯಿಂದ । ಲಾ ಮಹಾರಾಜಾಧಿ ರಾಜ ॥ ೩-೧೦೨

ಬಾಹುಬಲಿಗೆ ಧಾಮಶುದ್ಧಿ ಮಾಡಿಸುವುದು ಅಸಾಧ್ಯವಾದುದರಿಂದ ಪುರೋಹಿತರ ಸೂಚನೆಯಂತೆ ಕನ್ನಡಿಯನ್ನಿಟ್ಟು ಅದರಲ್ಲಿ ಬಾಹುಬಲಿಯ ಪ್ರತಿಬಿಂಬ ಮೂಡುವಂತೆ ಮಾಡಿ ಧಾಮ ಶುದ್ಧಿಯನ್ನು ನೆರವೇರಿಸುತ್ತಾನೆ.

ಆ ಬಳಿಕ ಕ್ರಮವಾಗಿ ಗರ್ಭಾವತರಣ, ಜನ್ಮಾಭಿಷೇಕ, ಗರ್ಭಶಯನ, ಆಕಾರಶುದ್ಧಿ ಮುಂತಾದ ವಿಧಿಗಳು ನಡೆದವೆಂದು ಕವಿ ಉಲ್ಲೇಖಿಸುತ್ತಾನೆ.

ಗರ್ಭಾವತರಣ ಜನ್ಮಾಭಿಷೇಕಗಳೆಂಬ । ನಿರ್ಭರ ಕಲ್ಯಾಣವೆಲ್ಲ ॥

ಗರ್ಭಶಯನ ವಾಕಾರಶುದ್ಧಿಗಳೊಳಂ । ತರ್ಭಾವವೆಂದು ಮಾಡಿಸಿದ॥ ೩-೧೦೩

ಅನಂತರ ಕ್ರಮಬದ್ಧವಾಗಿ ಬಾಹುಬಲಿಗೆ ನಯನೋನ್ಮಿಲನಕ್ರಿಯೆ ಹಾಗೂ ಪರಿನಿಷ್ಕ್ರಮಣದ ಕ್ರಿಯೆಗಳು ಸಂಭ್ರಮದಿಂದ ನೆರವೇರಿದುದಾಗಿ ಕವಿ ತಿಳಿಸುತ್ತಾನೆ.

ಕೊನೆಯದಾಗಿ ಪ್ರತಿಷ್ಠಾ ವಿಧಿಗಳೆಲ್ಲವೂ ಮುಗಿದ ನಂತರ ಮಹಾಭಿಷೇಕಗಳನ್ನು ಸಹ ರಾಜನು ನೆರವೇರಿಸಿದನೆಂದು ಕವಿ ವಿವರಿಸುತ್ತಾನೆ.

ಸಾವಿರದೆಂಟು ಕುಂಭದೊಳಭಿಷೇಕವ । ನಾ ವಿಧಿಯಿಂದ ಮಾಡಿಸಿದ॥

ಭೂವಳಯದೊಳಿನ್ನಿಲ್ಲವೆಂದೆಂಬಂತೆ ಮಹಾ ವಿಭವದಿ ಮಾಡಿಸಿದ ॥ ೩-೧೦೭

ಎಂದು ಪಾಂಡ್ಯರಸ ಸಾವಿರದೆಂಟು ಕುಂಭಗಳಲ್ಲಿ ಬಾಹುಬಲಿಗೆ ಪರಿಪರಿಯಾಗಿ ಧಾರ್ಮಿಕ ವಿಧಿಗಳನ್ನನುಸಾರವಾಗಿ ನಡೆಸಿದ ಅಭಿಷೇಕದ ಕುರಿತಾಗಿ ವಿವರಿಸುತ್ತಾನೆ.

ಹೀಗೆ ಲೋಕಕ್ಕೆ ಶಾಂತಿ, ಸಮೃದ್ಧಿಯಾಗಲಿ ಎಂಬ ಉದ್ದೇಶದಿಂದ ನಾಲ್ಕು ದಿನಗಳ ಕಾಲ ನಡೆದ ಪ್ರತಿಷ್ಠೆ ಅಭಿಷೇಕಗಳೆಲ್ಲ ಮುಗಿದ ನಂತರ ರಾಜ, ಪುನಃ ದೇವತೆಗಳನ್ನು ಆಮಂತ್ರಿಸಿ ಸಂತೃಪ್ತ ಪಡಿಸಲು, ನವಗ್ರಹ ಶಾಂತಿ ಹೋಮವನ್ನು ನೆರವೇರಿಸುತ್ತಾನೆ. ಹಾಗೂ ಆ ದೇವತೆಗಳಲ್ಲಿ ಲೋಕಶಾಂತಿಗಾಗಿ ಪ್ರಾರ್ಥಿಸುತ್ತಾನೆ.

ಪಾಂಡ್ಯರಸನು, ನಡೆಸಿದ ಈ ಧಾರ್ಮಿಕ ಕಾರ್ಯಕ್ಕೆ ಬಂದು ಅದರಲ್ಲಿ ಪಾಲ್ಗೊಂಡ ಪರವೂರಿನ, ... ಊರಿನ ಭಕ್ತ ಜನ ಸಮುದಾಯಕ್ಕೆ,ಶ್ರಾವಕರಿಗೆ, ಹೀಗೆ ಯಾರನ್ನೂ ಬಿಡದೆ ಎಲ್ಲರಿಗೂ ದಾನವನ್ನು ನೀಡುತ್ತಾನೆ. ಮತ್ತು ಆ ಮೂಲಕ ಜನರ ಪ್ರೀತ್ಯಾಧಾರಗಳಿಗೆ ಪಾತ್ರನಾಗುತ್ತಾನೆ.

ಕೊನೆಗೆ ಈ ಧಾರ್ಮಿಕ ಕಾರ್ಯದ ಅಂಗವಾಗಿ ರಾಜನು ಸಂಪ್ರದಾಯದಂತೆ ಓಕುಳಿಯಾಟವನ್ನು ಏರ್ಪಡಿಸುತ್ತಾನೆ. ಬಂದಂತಹ ನಾನಾದೇಶ, ಭಾಷೆ, ವರ್ಗದ ಜನರು ತಾವೆಲ್ಲ ಒಂದೇ ಎಂಬಂತೆ ಓಕುಳಿಯಾಟವಾಡಿ ಸಂಭ್ರಮಿಸುತ್ತಾರೆ.

ಈ ರೀತಿಯಲ್ಲಿ ಪಾಂಡ್ಯರಸನು ಭವ್ಯ ಜನಸಂಘ, ಶ್ರಾವಕರೆಲ್ಲರ ಸಹಕಾರದಿಂದ ಗೊಮ್ಮಟ ಸ್ವಾಮಿಯ ಮೂರ್ತಿ ಪ್ರತಿಷ್ಠೆ ಹಾಗೂ ಅಭಿಷೇಕಗಳನ್ನು ವೈಭವಪೂರಿತವಾಗಿ ಅದ್ದೂರಿಯಿಂದ ಆಚರಿಸಿದನು ಎಂದು ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ವಿವರಿಸಿದ್ದಾನೆ.

೩.೩.೨ ಬಾಹುಬಲಿಯ ಪುನರ್ ಪ್ರತಿಷ್ಠೆ :

ಪಾಂಡ್ಯನೃಪನು ಕಾರ್ಕಳದಲ್ಲಿ ಗೊಮ್ಮಟ ಮೂರ್ತಿಯನ್ನು ಕೆತ್ತಿಸಿ,ಪ್ರತಿಷ್ಠಾಪಿಸಿ, ಜೈನಧರ್ಮದ ಆರಾಧನೆ,ತತ್ವಗಳಿಗೆ ಮತ್ತಷ್ಟು ಮೆರುಗನ್ನು ನೀಡುತ್ತಾನೆ. ಆದರೆ ಪಾಂಡ್ಯ ನೃಪಾಲನ ಕಾಲಾನಂತರ ಕಾರಣಾಂತರಗಳಿಂದ ಕಾರ್ಕಳದಲ್ಲಿ ಗೊಮ್ಮಟ ಸ್ವಾಮಿಯ ಆರಾಧನೆಯೂ ನಿಂತು ಬಿಡುತ್ತದೆ. ಅನಂತರ,

ಕೊಟ್ಟ ಭಾಷೆಗೆ ತಪ್ಪುವರ ಗಂಡ ರಣಕೆ ಹಿಮ್ಮೆಟ್ಟುವ ದೊರೆಗಳ ಗಂಡ॥

ಪಟ್ಟಿ ಪೊಂಬುಚಪುರವಾರಾಧೀಶ್ವರ । ಪಟ್ಟದ ದೊರೆ ಭೈರವೇಂದ್ರ॥ ೧೬-೧೯

ಇಮ್ಮಡಿ ಭೈರವೇಂದ್ರನು ಅಧಿಕಾರಕ್ಕೆ ಬಂದನು. ಭೈರವೇಂದ್ರನು ತನ್ನ ಅಧಿಕಾರದ ಅವಧಿಯಲ್ಲಿ ನಿಂತು ಹೋಗಿದ್ದ ಗೊಮ್ಮಟ ಮೂರ್ತಿಯ ಪುನರ್ ಪ್ರತಿಷ್ಠೆಯನ್ನು ಮಾಡಿ ಮಹಾಮಸ್ತಕಾಭಿಷೇಕವನ್ನು ಮಾಡಿಸಬೇಕೆಂದು ಯೋಚಿಸುತ್ತಾನೆ. ಮತ್ತು ತನ್ನ ಮನದ ಅಭಿಲಾಷೆಯನ್ನು ತನ್ನ ಪಟ್ಟದ ಗುರುಗಳಾದ ಲಲಿತಕೀರ್ತಿ ಭಟ್ಟಾರಕರಲ್ಲಿ ತಿಳಿಸಿ, ಅವರ ಸಲಹೆಗಳನ್ನು ಕೇಳುತ್ತಾನೆ.

ಅರಸನ ಮನಸ್ಸಿನಲ್ಲಿರುವ ವಿಚಾರವನ್ನು ಗ್ರಹಿಸಿದ ಭಟ್ಟಾರಕರು, ಈ ಕಾರ್ಯಕ್ರಮಕ್ಕೆ ಸಲಹೆ, ಒಪ್ಪಿಗೆಯನ್ನು ನೀಡುತ್ತಾರೆ. ಆಗ ಸಂತೋಷದಿಂದ ರಾಜ, ಈ ಧಾರ್ಮಿಕ ಕಾರ್ಯ ಭಟ್ಟಾರಕರ ನೇತೃತ್ವದಲ್ಲಿಯೇ ನಡೆಯಬೇಕೆಂದು ಅಪೇಕ್ಷಿಸಿ, ಭಟ್ಟಾರಕರಿಗೆ ೫೦೦ ಹೊನ್ನನ್ನು ದಾನ ನೀಡಿ,ಅವರಿಂದ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾನೆ. ಅಲ್ಲದೆ, ಆ ಸಂದರ್ಭದಲ್ಲಿ ಕಾರ್ಕಳಕ್ಕೆ ಆಗಮಿಸಿದ್ದ ಮುನಿಕುಲತಿಲಕರು, ಕಲಿಯುಗ ಗಣಧರರು ಆದ ಮಹೇಂದ್ರಕೀರ್ತಿ ಯವರನ್ನು ಭೇಟಿ ಮಾಡಿ,ಅವರಿಂದಲೂ ಮುಂದಿನ ಕೆಲಸಕ್ಕಾಗಿ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾರೆ.

ಯಾವುದೇ ಧರ್ಮಕಾರ್ಯಗಳಿಗೆ ಶ್ರಾವಕರು ಮೂಲ ಕಾರಣ. ಅದಕ್ಕಾಗಿ ಚತುಸಂಘವನ್ನು ಮುಂದಿಟ್ಟುಕೊಂಡು, ಈ ಧಾರ್ಮಿಕ ಕಾರ್ಯವನ್ನು ನಡೆಸಬೇಕೆಂದು ಲಲಿತಕೀರ್ತಿ ಭಟ್ಟಾರಕರ ಮಾರ್ಗದರ್ಶನದಂತೆ ಕಾರ್ಯತತ್ಪರನಾಗುತ್ತಾನೆ.

ಹಿಡಿಹೊನ್ನು ಪಟ್ಟಿಯ ಹಚ್ಚಡ ಗಂಡಿಗೆ ಸಮರ್ಪಣೆಯನು ಮಾಡಿ ಬಳಿಕ ॥

ಪೊಡಮಟ್ಟನುಗುರು ಜನಕೆಲ್ಲ ಮೂಲೋಕ । ದೊಡೆಯನ ಜನ್ಮೋತ್ಸವದೊಳು ॥ ೧೬-೨೩

'ರಾಜನು ಕಾರ್ಕಳದಲ್ಲಿ ಒಂದು ವಿಶೇಷವಾದ ಧಾರ್ಮಿಕ ಕಾರ್ಯವನ್ನು ನಡೆಸುತ್ತಾನೆ' ಎನ್ನುವ ವಿಚಾರವನ್ನು ಅರಿತ ಶ್ರಾವಕ ವರ್ಗದವರು, ಭೈರವರಾಯನನ್ನು ಭೇಟಿ ಮಾಡಿ ತಮ್ಮ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಭರವಸೆ ನೀಡುತ್ತಾರೆ. ಹಾಗೂ ಮುಂದೆ,

ಹಲರೈದು ಸಾವಿರ ಮಂದಿ ಬಂದಾಯತ । ಕುಲತಿಲಕನ ನೋಡಿದಿರ್ಗೊಂಡು ॥

ಬಲುದೊಡ್ಡ ಕಾರ್ಯವನೆಸಗಿದರೆಂದು ತಾವೊಲಿದೆರಗಿದರ ಡಿದಳಕೆ ॥ ೧೬-೩೯

ದೇವರದಯೆಯಿಂ ನಾಲ್ಕು ಸಂಘವನೆಲ್ಲ । ನಾವು ತಡೆದು ದಾನದಿಂದ॥

ಪಾವನದಪ್ಪೆವೆಂದರು ಮೂಲ ಕಾರಣ । ಶ್ರಾವಕರ್ತ ಧರ್ಮಕ್ಕೆ ॥ ೧೬-೪೦

ಕೋಲಬಳಿಯ ಭವ್ಯ ಜನರೈದು ಸಾವಿರ । ಲೀಲೆಯೊಳೈತಂದರಾಗ ॥

ಓಲಗ ವನು ಮೊಳ್ಪೆವು ಸ್ವಾಮಿ ನೀವೇ । ಓಲ್ಡೂಳಿಗದವರಂತೆ ನಾವು ॥ ೧೬-೪೧

ಎಂದು ಅತ್ಯಂತ ಭಕ್ತಿ ಭಾವದಿಂದ ಭಿನ್ನವಿಸಿದರು. ಅಲ್ಲದೆ ತಾವು ಊಳಿಗದವರಂತೆ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಕೈಸಹಾಯವ ಮಾಳ್ಪೆವು ನಾವೆಲ್ಲರು । ಮೈಸಹಾಯವನು ಮಾಡುವೆವು ॥

ಕೈಮೈ ಸಹಾಯವ ಧರ್ಮದೊಳಗೆ ಮಾಡಿಂ । ಮೈಸಿರಿವಂತರಹೆವು ॥ ೧೬-೪೨

ಎಂದು ಪರಿಪರಿಯಾಗಿ ಅರಸರನ್ನು, ಭಟ್ಟಾರಕರನ್ನು ವಂದಿಸಿ ಓಲೈಸಿದರು. ಹೀಗೆ ಸ್ಥಗಿತಗೊಂಡಿದ್ದ ಬಾಹುಬಲಿಯ ಪುನರ್ ಪ್ರತಿಷ್ಠೆ ಹಾಗೂ ಮಸ್ತಕಾಭಿಷೇಕ ಕಾರ್ಯಕ್ರಮಗಳಿಗೆ ಒಂದು ಚಾಲನೆ ದೊರೆಯಿತು.

ಪೂರ್ವಭಾವಿಯಾಗಿ ಭಟ್ಟಾರಕರು ಎಲ್ಲ ರೀತಿಯ ವ್ಯವಸ್ಥೆಗಳನ್ನು ನಡೆಸುವುದಕ್ಕೆ, ಅರಸನಿಗೆ ಮಾರ್ಗದರ್ಶನ ನೀಡಿದರು. ಅರಸನು ಅತ್ಯಂತ ಉತ್ಸಾಹದಿಂದ,

048528

ಅರವತ್ತು ದಾನಸಾಲೆಯ ಕಟ್ಟಿಸಿದ ಪಾಂಡ್ಯ । ಪುರದೊಳೊಕ್ಕಲ ನಿಟ್ಟನಾಗ ॥

ನೆರೆದ ಜನರ ಪುಡಿಪಾನಕೆಂದೆನುತ ಪನ್ನೆರಡು ಗ್ರಾಣವ ಮಾಡಿಸಿದ॥ ೧೬-೪೩

ಅನಂತರ ಕಾರ್ಕಳದಲ್ಲಿ ನೇಮಿ ಜಿನೇಶನ ಜಿನಗ್ರಹಕ್ಕೆ ಪೂಜೆ ಸಲ್ಲಿಸಿದನು.

ಲೋಕಕೆಲ್ಲಕೆ ಶಾಂತಿಯಾಗಲೆಂದೆನುತ ನಿರಾಕುಲ ಭಾನುತೊಡಗಿದ ॥

ಕಾರ್ಯಕೆ ನಿರ್ವಿಘ್ನವ ಮಾಡು ಕೃಪಾಕರ ಜಗದೇಕ ಬಂಧು ॥ ೧೬-೪೭

ಎಂದು ಸಮಸ್ತ ಶ್ರಾವಕರ ಜೊತೆಗೆ ದೇವರಲ್ಲಿ ಪ್ರಾರ್ಥಿಸಿಕೊಂಡನು. ಅಷ್ಟೇ ಏಕೆ, ಗೊಮ್ಮಟ ಸ್ವಾಮಿಯ ಪೂಜೆಯಾಗುವ ತನಕ ತಾನು

ಚಾಮರ ಸತ್ತಿಗೆ ಪಲ್ಲಕ್ಕಿ ಮುಂತಾದ । ರಾಮಣೀಯಕ ಚಿಹ್ನೆಗಳ ॥

ನೇಮಿಸಿ ಬಿಟ್ಟನು ಯತಿರಾಯ ಗುಮ್ಮಟ। ಸ್ವಾಮಿಯ ಪೂಜೆಯಪ್ಪ ತನಕ ॥ ೧೬-೫೨

ಭಕ್ಷ ಪಾಯಸದೊಳಗಿನಿ ತಿನಿತೆಂದು ವಿ। ಚಕ್ಷಣ ನಿಯಮಿಸಿ ಬಿಟ್ಟ ॥

ಆ ಕ್ಷಣದೊಳೆ ದೇವರ ದೇವ ನೀನೇ । ಸಾಕ್ಷಿಯೆಂದಾ ಮುನಿರಾಯ ॥ ೧೬-೫೩

ಎಂದು ಪ್ರತಿಜ್ಞೆಯನ್ನು ಮಾಡಿದನು. ಅದೇ ರೀತಿ ಕೆಲವು ವ್ರತಗಳನ್ನು ಕೈಗೊಂಡು. ತಿನ್ನುವ ಆಹಾರದಲ್ಲಿ ಮಿತ ಸೇವನೆ ಮಾಡುವುದಾಗಿ ಸಂಕಲ್ಪ ಮಾಡಿದನು. ಬೆಟ್ಟದ ಬ್ರಹ್ಮರಾಯನಿಗೂ ಪ್ರಾರ್ಥನೆಯನ್ನು ಸಲ್ಲಿಸಿ ‘ಈ ಕಾರ್ಯಕ್ಕೆ ನೀನು ಸಹಾಯಕನಾಗು’ ಎಂದು ಬೇಡಿದನು. ಹೊಂಬುಜದ ಪದ್ಮಾಂಬಿಕೆಗೆ ಪ್ರಾರ್ಥನೆಯನ್ನು ಮಾಡಿಕೊಂಡು ನಿರ್ವಿಘ್ನವಾಗಿ ಈ ಕಾರ್ಯ ನಡೆಯುವಂತೆ ಪ್ರಾರ್ಥಿಸಿಕೊಂಡನು. ಅನಂತರ ಮುಂದಿನ ಕಾರ್ಯಗಳ ಬಗ್ಗೆ ಅರಸ ಮತ್ತು ಭಟ್ಟಾರಕರು ಸಿದ್ಧತೆಯನ್ನು ಮಾಡತೊಡಗಿದರು. ಅಲ್ಲದೆ ಈ ಕಾರ್ಯಕ್ಕೆ ನೆರೆಯ ರಾಜರುಗಳು, ತಮ್ಮಿಂದಾದ ಕೆಲವು ಸಹಾಯವನ್ನು ಮಾಡಲು ಸಹ ಮುಂದಾದರು.

ಇದನ್ನು ಉಲ್ಲೇಖಿಸುತ್ತ

ಅಜಿಲಭೂಪಾಲ ಕೊಟ್ಟನು ತನ್ನಯ । ವೃಜಿನವೆಲ್ಲವು ಪೋಗಲೆಂದು ॥
ನಿಜವಾದ ಗುಳವನ್ನೈನೂರು ಹಾಡವನಾ । ತ್ರಿಜಗದೊಡೆಯನುತ್ಸವಕೆ ॥ ೧೬-೨೬

ಬಂಗರು ಕೊಟ್ಟರು ನೂರು ಗದ್ಯಾಣವ । ಮಂಗಲೋತ್ಸವ ಕಾಜಿನನ ॥
ಹಿಂಗಲಿ ತಮ್ಮ ವಿಘ್ನಗಳೆಂದಾ ಮುನಿ । ಪುಂಗವಾಚಾರ್ಯನ ಕೈಯ್ಯ ॥ ೧೬-೨೨

ಕೊಟ್ಟರು ಚೌಟರು ನಿತ್ಯಪೂಜೆಗೆ ಮನ । ಮುಟ್ಟಿ ಭೂಮಿಯನು ವಿಂಗಡಿಸಿ ॥
ಪಟ್ಟಿಯ ಬರಸಿ ಗುಮ್ಮಟ ಜಿನನಿಗೆ । ಪಟ್ಟದ ಗುರುವಿನ ಕೈಯ್ಯ ॥ ೧೬-೨೮

ಉಳಿದ ಸಹಾಯವನೆಲ್ಲವ ಕೆಳದಿಯ । ದೊರೆಯು ಬೇಗದಿ ಮಾಡಿಸಿದ॥
ಇಳೆಯೊಳಾ ಮುನಿ ಪುಣ್ಯೋದಯ ದೊಂದ । ಗ್ಗಳಿಕೆಯನೇನೆಂದು ಪೇಳ್ವೆ ॥ ೧೬-೮೦

ಹೀಗೆ ಬಾಹುಬಲಿಯ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಭರದಿಂದ ಸಿದ್ಧತೆ ನಡೆಯುತ್ತಿದೆ. ಈ ಎಲ್ಲಾ ಧಾರ್ಮಿಕ ಕಾರ್ಯ ನೆರವೇರುವುದಕ್ಕೆ ‘ನಾಗಚಂದ್ರ’ನೆಂಬ ಪುರೋಹಿತ (ಇಂದ್ರ) ನನ್ನು ನಿಯೋಜಿಸುತ್ತಾರೆ. ನಾಗಚಂದ್ರನನ್ನು ಪ್ರತಿಷ್ಠಾ ಕಾರ್ಯಕ್ಕೆ ಆಮಂತ್ರಿಸುವಾಗ, ರಾಜ ಅವನನ್ನು ಸಂಪ್ರದಾಯದಂತೆ ಗೌರವಯುವಾಗಿ ಬರಮಾಡಿಕೊಂಡ ಪರಿಯನ್ನು ಕವಿ ಸ್ವಾರಸ್ಯಕರವಾಗಿ ತಿಳಿಸುತ್ತಾನೆ.

ಪಲ್ಲಕ್ಕಿಯೊಳಗಿಂದ್ರ ಕುಳಿತು ಬಂದನು ನೋಳ್ಪ ಜನ । ರೆಲ್ಲಚ್ಚರಿವಡುವಂತೆ ॥
ಸಲ್ಲೀಲೆಯಿಂದಾಗಲಾ ಮುನಿಪತಿಯೀ। ರ್ದಲ್ಲಿಯ ದಾನ ಸದನಕೆ ॥ ೧೭-೧೫

[illegible]

ಎಂದು ಧವಳ ಶೋಭಾನಗಳನ್ನು ಹಾಡುತ್ತಾ ಕಳಸ ಕನ್ನಡಿಯೊಂದಿಗೆ ಪಲ್ಲಕ್ಕಿಯನ್ನೇರಿ ವಾದ್ಯ ಘೋಷಗಳೊಂದಿಗೆ ಇಂದ್ರನನ್ನು ರಾಜ ಗೌರವಯುತವಾಗಿ ಬರಮಾಡಿಕೊಂಡು ಸತ್ಕರಿಸುತ್ತಾನೆ. ಮತ್ತು ಅವನಿಗೆ ಮುತ್ತೈದೆಯರಿಂದ ಸೇಸೆ, ಆರತಿಗಳನ್ನು ಎತ್ತಿಸಿ ಎಣ್ಣೆ ಸ್ನಾನ ಮಾಡಿಸುತ್ತಾನೆ. ಅನಂತರ ಅವನಿಗೆ ಆಭರಣ, ರೇಷ್ಮೆಯ ವಸ್ತ್ರಗಳನ್ನು ನೀಡಿ ಗೌರವಿಸುತ್ತಾನೆ.

ಕವಿ ಅಂದಿನ ದಿನದಿಂದ ಮುದುವರಿದು ಸುಮಾರು ದಿನಗಳವರೆಗೆ ನಡೆದ ಪುನರ್ ಪ್ರತಿಷ್ಠಾ ವಿಧಿಗಳನ್ನು ಕುರಿತು ಹೀಗೆ ವಿವರಿಸುತ್ತಾನೆ.

ವಿಸ್ತಾರ ಸಂಕ್ಷೇಪವೆಂದಿತ್ತೆರನುಂಟು । ವಾಸ್ತು ಪೂಜೆಗೆ ಬಲಿಯಲ್ಲಿ॥
ವಸ್ತು ಸಾಮಾಗ್ರಿಯ ತರಿಸಿ ತಿ ಮಾಡಿಸಿದನು। ವಿಸ್ತಾರ ವಾಸ್ತು ಪೂಜೆಯನು ॥ ೧೭-೨೩

ರಾಜನು ಜಿನಸಂಹಿತೆಯಲ್ಲಿ ಹೇಳಲ್ಪಟ್ಟಂತೆ, ನಾಂದಿಮಂಗಲ, ವಾಸ್ತು ಪೂಜೆ, ವಿಸ್ತಾರವಾಸ್ತುಪೂಜೆಯಂತಹ ಧಾರ್ಮಿಕ ವಿಧಿಗಳನ್ನು ಕ್ರಮ ಪ್ರಕಾರವಾಗಿ ನಡೆಸುತ್ತಾನೆ. ಮೂರು ಲೋಕಕ್ಕೆ ಜಿನನ ಉತ್ಸವದ ಸುದ್ದಿಯು ಎಲ್ಲರಿಗೂ ತಿಳಿಯಲಿ ಎಂಬಂತೆ: 'ಧ್ವಜಾರೋಹಣ' ಕ್ರಿಯೆಯನ್ನು ಸಹ ನಡೆಸುತ್ತಾನೆ. ಮತ್ತು ಧ್ವಜಸ್ತಂಭಕ್ಕೆ ದರ್ಬೆ, ಬಾಳೆಗಿಡ, ತೋರಣ, ಫಲಪುಷ್ಪ ಹೀಗೆ ಮಂಗಲಕರ ವಸ್ತುಗಳನ್ನು ಸಹ ಕಟ್ಟಿಸುತ್ತಾನೆ.

ಮುಂದೆ ಕವಿ ಸರ್ವಾಹ್ಣಯಕ್ಷನ ಮೆರವಣಿಗೆಯ ವೈಭವವನ್ನು ಕುರಿತು ತಿಳಿಸುತ್ತಾನೆ.

ಪಲ್ಲಕ್ಕಿಯೊಳು ಸರ್ವಾಣ್ಯಕ್ಷನ ನಿಟ್ಟು । ಸಲ್ಲೀಲೆಯಿಂ ಪುರದೊಳಗೆ ॥
ಪಲ್ಲವ ಸತ್ತಿಗೆ ಧರ್ಮ ಚಕ್ರಧ್ವಜ । ಯಲಲ್ಲಿಯಾಡುವ ಪಾತ್ರ ॥ ೧೭-೨೮

ಸುಂದರವಾಗಿ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಸರ್ವಾಹ್ಣಯಕ್ಷನ ಪ್ರತಿಮೆಯನ್ನಿಟ್ಟು ಅದನ್ನು ಛತ್ರಿ, ಛಾಮರ, ಚಿಗುರೆಲೆ, ಹೂವು, ಧರ್ಮಚಕ್ರ, ಧ್ವಜಗಳ ಸಹಿತ ಸಂಭ್ರಮದಿಂದ ಮೆರವಣಿಗೆಯನ್ನು ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಒಂದು ಗುಂಪಿನ ಜನರು ಹಲವು ಬಗೆಯ ವೇಷಗಳನ್ನು ಧರಿಸಿ, ಜನರ ಗುಂಪಿನೊಂದಿಗೆ ನರ್ತಿಸುತ್ತ ಸಾಗುತ್ತಿದ್ದರು. ಅಲ್ಲದೆ ಇನ್ನು ಕೆಲವರು ಪಂಜು, ಹಿಲಾಲು ದೀವಟಿ ಹಿಡಿದು ಸಾಗುತ್ತಿದ್ದರು. ವಾದ್ಯದವರು ವಾದ್ಯ ಘೋಷಗಳನ್ನು ಭಾರಿಸುತ್ತ ಈ ಉತ್ಸವಕ್ಕೆ ಮತ್ತಷ್ಟು ಮೆರುಗನ್ನು ನೀಡುತ್ತಿದ್ದರು. ಇದಕ್ಕೆ ಹಿನ್ನೆಲೆ ಎಂಬಂತೆ ನಾಲ್ಕು ದಿಕ್ಕುಗಳಿಗೂ ವ್ಯಾಪಿಸುವಂತೆ ಸುಡುಮದ್ದಿನ, ಬಿರುಸು ಬಾಣಗಳ ಆರ್ಭಟವೂ ನಡೆಯುತ್ತಿತ್ತು. ಇದು 'ಕಾರ್ಕಳದಲ್ಲಿ ಜಿನನ ಉತ್ಸವ ಪ್ರಾರಂಭವಾಗಿದೆ, ತಡ ಮಾಡದೆ ಎಲ್ಲರೂ ಬನ್ನಿ' ಎಂದು ಸಾರಿ ಹೇಳಿದಂತೆ ಕೇಳಿಸುತ್ತಿತ್ತು.

ಈ ರೀತಿಯಾಗಿ ಭೈರರಸನು ವಾಸ್ತುಪೂಜೆ, ನಾಂದಿಮಂಗಲ, ಧ್ವಜಾರೋಹಣ, ಬಲಿ ಸೇವೆ ಮುಂತಾದ ಹಲವಾರು ಧಾರ್ಮಿಕ ಕಾರ್ಯಕಲಾಪಗಳನ್ನು ಎರಡು ದಿನಗಳ ಕಾಲ ವಿಜೃಂಭಣೆಯಿಂದ ನೆರವೇರಿಸಿದನು ಎಂದು

ಕವಿ ರಾಜನ ಧಾರ್ಮಿಕ ಶ್ರದ್ಧೆ ಹಾಗು ಆತನು ನಡೆಸಿದ ವಿವಿಧ ಕಲಾಪಗಳನ್ನು ಕೊಂಡಾಡುತ್ತಾನೆ.

ಮಾರನೆಯ ದಿನ ರಾಜನು ಮುತ್ತೈದೆಯರಿಂದ ಅಂಕುರಾರ್ಪಣೆ ವಿಧಿಯನ್ನು ನಡೆಸಿದನು. ಮತ್ತು ಸಂಪ್ರದಾಯದಂತೆ ಅವರಿಗೆ ಬಾಗಿನಗಳನ್ನು ಕೊಟ್ಟು ಗೌರವಿಸಿದನು.

ಸಾವಿರ ಮುತ್ತೈದೆ ವೆಣ್ಗಳಿಗಾಗ । ಭಾವಜ ವಿಜಯ ಮುನೀಂದ್ರ।
ದೇವಾಂಗ ವಸ್ತ್ರವಕೆಗಳ ಕೊಟ್ಟು ಸಂಭಾವಿಸಿ ದಕ್ಷಿಣೆ ಸಹಿತ॥ ೧೭-೪೬

ಅನಂತರ ರಾಜನು ಬಾಹುಬಲಿಗೆ ಬಿಂಬಶುದ್ಧಿ, ಧಾಮಶುದ್ಧಿ, ಗರ್ಭಾವತರಣ, ಜನ್ಮಾಭಿಷೇಕ, ಯುವರಾಜ ಪಟ್ಟಾಭಿಷೇಕ, ಪರನಿಷ್ಕ್ರಮಣ ಕಲ್ಯಾಣಗಳನ್ನು ವೈಭವೋಪೇತವಾಗಿ ನಡೆಸುತ್ತಾನೆ.

ಸರ್ವೌಷದ ಜಲದಿಂದ ಬಾಹುಬಲಿಗೆ ಬಿಂಬಶುದ್ಧಿ ಹಾಗೂ ಧಾಮಶುದ್ಧಿಯನ್ನು ಸಹಾ ಭಕ್ತಿಯಿಂದ ನೆರವೇರಿಸುತ್ತಾನೆ.

ಈ ರೀತಿಯಾಗಿ ಪ್ರತಿಷ್ಠೆಯ ಸಂದರ್ಭದಲ್ಲಿ ನಡೆಸುವ ಎಲ್ಲಾ ವಿಧಿಗಳನ್ನು ರಾಜ ಶಾಸ್ತ್ರೋಕ್ತವಾಗಿ ನಡೆಸುತ್ತಾನೆ. ಅನಂತರ

ಕನಕ ಭಾಜನದೊಳು ಹಿಮದುಗ್ಧ ಸಕ್ಕದೆ। ಯನುಮಿಶ್ರವನು ಮಾಡಿ ಬಳಿಕ॥
ಕನಕ ಶಾಲಾಕೆಗಳಿಂದ ನೇತ್ರೋನ್ಮಿಲನ ವಿಧಿಗಳ ಮಾಡಲಾಗ ॥ ೧೭-೫೮

ನೇತ್ರೋನ್ಮಿಲನ ವಿಧಿಯೂ ಸಹ ನಡೆಯುತ್ತದೆ. ಅಂತೂ ಜನರ ಸಂಭ್ರಮದ ನಡುವಲ್ಲಿ ಜಿನನ ಪ್ರತಿಷ್ಠಾ ಮಹೋತ್ಸವವು,

ವಸು ಋತು ಶರಶಶಿ ಸಂಖ್ಯೆಯೊಳಗೆ ವ। ರ್ತಿಸುವ ಶಕಾಬ್ದದೊಳಂದು ॥
ಎಸೆವ ಪಾರ್ಥಿವದ ಫಾಲ್ಗುಣದ ಶುದ್ಧದ್ವಾದಶಿಯೊಳಾ ಜಿನಗೆ ಪ್ರತಿಷ್ಠೆ ॥ ೧೭-೬೧

ಫಾಲ್ಗುಣ ಶುದ್ಧ ದ್ವಾದಶಿಯಂದು ನಡೆಯಿತು ಎಂದು ತಿಳಿಸುತ್ತಾನೆ.

ಹೀಗೆ ಮೂರು ದಿನಗಳ ಕಾಲ ನಡೆದ ಪ್ರತಿಷ್ಠಾ ಮಹೋತ್ಸವದ ನಂತರ ಲೋಕಶಾಂತಿಯ ಪ್ರಯುಕ್ತ ಶಾಂತಿಕ ವಿಧಿಗಳನ್ನು ಭೈರರಸನು ಮಾಡಿಸುತ್ತಾನೆ.

ಈ ರೀತಿಯ ಪೂಜಾವಿಧಿಯನ್ನು ನಡೆಸಿದ ನಂತರ ರಾಜನು ರಥೋತ್ಸವವನ್ನು ಕ್ರಮಬದ್ಧವಾಗಿ ನಡೆಸಿದನು.

ಆ ರಥವೇರಿಸಿ ಧರ್ಮದೊಳ್ತನ್ನಮ। ನೋರಥವೆಯ್ದಿಸುವಂತೆ॥
ಭೂರಿ ವೈಭವದೊಡಗೂಡಿ ಪುರದೊಳಾ। ತೇರನೆಳೆಸಿದನು ಮುನಿಪಾ ॥ ೧೭-೭೪

ಎಂದು ಸುಂದರವಾಗಿ ಅಲಂಕರಿಸಿದ ರಥದಲ್ಲಿ ಜಿನನ ಉತ್ಸವ ಮೂರ್ತಿಯನ್ನಿರಿಸಿ ವಾದ್ಯ ಘೋಷಗಳ

ನಾದದೊಂದಿಗೆ, ಪಂಜು ಹಿಲಾಲು, ಜೀಟಿಕೆ, ಬೆಳ್ಗೊಡೆ, ಧರ್ಮಚಕ್ರಗಳ ಸಂಭ್ರಮದ ಮೆರವಣಿಗೆಯೊಂದಿಗೆ ರಾಜನು ತೇರನ್ನು ಬೆಟ್ಟದಂಗಡಿಯಿಂದ ನೇಮಿಜಿನೇಶನ ಬಸದಿಯವರೆಗೆ ಎಳೆಯಿಸಿದ ಎಂದು ಕವಿ ರಥೋತ್ಸವದ ಕುರಿತು ವರ್ಣಿಸುತ್ತಾನೆ.

ಅಂತು ಭೈರರಸನು ಕಾರ್ಕಳದಲ್ಲಿ ನಿಂತು ಹೋಗಿದ್ದ ಬಾಹುಬಲಿಯ ಮೂರ್ತಿಗೆ ಪುನಃ ಪ್ರತಿಷ್ಠೆಯನ್ನು ಬಹಳ ವಿಜೃಂಭಣೆಯಿಂದ ನಡೆಸುತ್ತಾನೆ. ಮಾತ್ರವಲ್ಲದೆ ದೊಡ್ಡ ಪ್ರಮಾಣದ ಮಹಾಮಸ್ತಕಾಭಿಷೇಕಗಳನ್ನು ಸಹ ಅತೀ ಸಂಭ್ರಮದಿಂದ ನೆರವೇರಿಸುತ್ತಾನೆ.

೩.೩.೩ ಮಹಾಮಸ್ತಕಾಭಿಷೇಕ :

ಮಹಾಮಸ್ತಕಾಭಿಷೇಕವೆಂದರೆ, ಬೃಹತ್ ಬಾಹುಬಲಿ ವಿಗ್ರಹಕ್ಕೆ ಪೂರ್ಣ ಪ್ರಮಾಣದಲ್ಲಿ ನಡೆಸುವ ಅಭಿಷೇಕವಾಗಿದೆ. ಇದರಲ್ಲಿ ಜಲ, ಎಳನೀರು, ಕಬ್ಬಿನ ಹಾಲು, ಕ್ಷೀರ, ಅರಸಿನ, ಶ್ರೀಗಂಧ, ಚಂದನ, ಅಷ್ಟಗಂಧ, ಕಲ್ಕಚೂರ್ಣ, ಪುಷ್ಪ ಮುಂತಾದ ಮಂಗಳ ದ್ರವ್ಯಗಳನ್ನು ಬಳಸಲಾಗುತ್ತದೆ. ಈ ಅಭಿಷೇಕವನ್ನು ಬಾಹುಬಲಿಯ ಶಿಲಾ ಮೂರ್ತಿಗೆ ಸಂರಕ್ಷಣೆ ನೀಡುವ ಉದ್ದೇಶದಿಂದ ೧೨ ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ವೇಣೂರು, ಕಾರ್ಕಳ, ಧರ್ಮಸ್ಥಳಗಳಲ್ಲಿ ಇರುವ ಬಾಹುಬಲಿ ವಿಗ್ರಹಗಳಿಗೆ ೧೨ ವರ್ಷಗಳಿಗೊಮ್ಮೆ ಅಭಿಷೇಕ ನಡೆಯುವುದನ್ನು ಇಲ್ಲಿ ನೆನೆಯಬಹುದು. ಇದನ್ನು 'ಮಹಾಮಜ್ಜನ' ಎಂದು ಕರೆಯುವುದು ರೂಢಿಯಲ್ಲಿದೆ.

ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ಭೈರರಸನು ನಡೆಸಿದ ಬಾಹುಬಲಿಯ ಮಹಾಮಸ್ತಕಾಭಿಷೇಕವನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ತನ್ನ ಕುಲಗುರುಗಳಾದ ಲಲಿತಕೀರ್ತಿಭಟ್ಟಾರಕರನ್ನು ಮುಂದಿಟ್ಟುಕೊಂಡು ನೆರೆಯ ರಾಜರುಗಳು, ಪ್ರಜೆಗಳು, ಶ್ರಾವಕರು, ಮುನಿಗಳನ್ನು ಈ ಧಾರ್ಮಿಕ ಕಾರ್ಯಕ್ಕೆ ಆಹ್ವಾನಿಸುತ್ತಾನೆ. ಮತ್ತು ಸಮಸ್ತ ಜನರಿಂದ ಸಹಾಯ ಸಹಕಾರವನ್ನು ಪಡೆದುಕೊಳ್ಳುತ್ತಾನೆ. ಇದನ್ನು ಕವಿ ದಾಖಲಿಸಿದ್ದಾನೆ. ಒಂದು ಧಾರ್ಮಿಕ ಕಾರ್ಯಕ್ರಮವು ನಡೆಯುವ ಸಂದರ್ಭದಲ್ಲಿ ಆ ಕಾಲದ ಜನರು ಮುಕ್ತವಾಗಿ ನಡೆದುಕೊಂಡು ಅದರಲ್ಲಿ ಪಾಲ್ಗೊಳ್ಳುವುದನ್ನು ನಾವು ನೋಡಬಹುದು.

ಗೊಮ್ಮಟ ಸ್ವಾಮಿಯ ಆ ಭವ್ಯ ಮೂರ್ತಿಯನ್ನು ಕ್ಷೀರ ಸಾಗರದಂತಿರುವ ರಾಮ ಸಮುದ್ರದ ಪವಿತ್ರ ಜಲದಿಂದ ಅಭಿಷೇಕಗೈಯಬೇಕೆಂದು ಭೈರರಸನು ಆಶಿಸುತ್ತಾನೆ.

ಭವ್ಯ ಜನರ ಕೈಯ ಬೇರೆ ಬೇರೊಂದ್ಯೊಗ್ಗ ನವ್ಯ ಕುಂಭಗಳನು ಕೊಟ್ಟು॥
ಸೇವ್ಯವೆನಿಪ ಜಲದೇವತೆಗಳನಲ್ಲಿ । ದಿವ್ಯ ಜಲಾದಿಗಳಿಂದ ॥ ೧೭-೮೭

ರಾಮಸಮುದ್ರದ ಪವಿತ್ರ ಜಲವನ್ನು ಭಕ್ತಾದಿಗಳಿಂದ ತರಿಸುತ್ತಾನೆ. ಜಲದಿಂದ ತುಂಬಿದ ಚಿನ್ನ, ಬೆಳ್ಳಿಯ ಕಳಸಗಳನ್ನು ಚಿತ್ರಿಸಿದ ಮಂಡಲದ ಮಧ್ಯೆ ಇರಿಸುತ್ತಾನೆ. ಮತ್ತು ಆ ಮಂಡಲದ ಮಧ್ಯೆ ದೊಡ್ಡ ಚಿನ್ನದ ಕಳಸವನ್ನಿರಿಸುತ್ತಾನೆ. ಅದನ್ನು ವಿಶೇಷವಾಗಿ ಅಲಂಕರಿಸಿ ಅದರಲ್ಲಿ ಮಂಗಳದ್ರವ್ಯ, ಗಂಧೋದಕವನ್ನು ತುಂಬಿಸುತ್ತಾನೆ. ಹೀಗೆ, ಒಂದೊಂದಾಗಿ ಕಲಾಪಗಳು ಆರಂಭಗೊಳ್ಳುತ್ತವೆ. ವಿಧಿ ಪೂರ್ವಕವಾಗಿ ಅಲ್ಲಿದ್ದ ಕಳಸಗಳನ್ನು ಪೂಜಿಸಿ, ಮೊದಲನೆಯ ಕಳಸಾಭಿಷೇಕವನ್ನು 'ನಾಗಚಂದ್ರ' ಹೆಸರಿನ ಪುರೋಹಿತರ ಕೈಯಿಂದಲೇ ಮಾಡಿಸಿದನು. ಅನಂತರ ಉಳಿದ ಇಂದ್ರರು, ಯತಿಗಳು, ಕಳಸಾಭಿಷೇಕ ಮಾಡಲು ಉದ್ಯುಕ್ತರಾದರು. ಆಗ ಜನರು ಕೂಡಾ ಒಂದೊಂದೇ ಕಳಸವನ್ನು ಇಂದ್ರರಿಗೆ ತಂದೊಪ್ಪಿಸುವ ಸೇವೆಯನ್ನು ಮಾಡುವುದರ ಮೂಲಕ ತಾವು ಜಿನನ ಸೇವೆಯನ್ನು ಮಾಡುವುದರ ಬಗ್ಗೆ ತೃಪ್ತಿಕೊಂಡರು.

ಇಂದ್ರನ ಕೈಯೊಳು ತಂದುಕೊಟ್ಟರು ಜಿನ।ಚಂದ್ರನ ಮಜ್ಜನಕಾಗ।

ರುಂದ್ರವಾದ್ಯಗಳು ಮೊಳಗುತಿರಲಾ ಮು।ನೀಂದ್ರನ ಮುದವನೇನೆಂಬೆ ॥ ೧೭-೯೯

ಎಂದು ಇಂದ್ರರೆಲ್ಲಾ ಒಟ್ಟಾಗಿ ಬಾಹುಬಲಿ ಮೂರ್ತಿಯ ಬದಿಯಲ್ಲಿ ನಿಂತು ಅಭಿಷೇಕ ಮಾಡುತ್ತಿದ್ದುದನ್ನು ಕವಿ ಹೀಗೆ ವರ್ಣಿಸುತ್ತಾನೆ.

ಹಿಮಗಿರಿಯಿಂದ ಗಂಗಾಸಿಂಧು ನದಿಗಳು। ಕ್ರಮದಿಂದೆಯ್ತರುವಂತೆ ॥

ಕಮಲ ಸರೋವರದಂತಿರ್ದ ಕುರುಳ್ಗಳಿಂ। ಕ್ರಮ ಪರಿಯಂತವಾ ಜಲವು ॥ ೧೭-೧೦೧

ಮೂರ್ತಿಯ ಎಡ-ಬಲ ಭುಜಗಳಿಂದ ಪಾದದವರೆಗೆ ಧಾರೆಯಾಗಿ ಹರಿದು ಬರುವ ಜಲವು, ಹಿಮಗಿರಿಯಿಂದ ಧಾರಾಕಾರವಾಗಿ ಹರಿಯುವ ಗಂಗಾ, ಸಿಂಧು ನದಿಗಳಂತೆ ಶೋಭಿಸಿದುವಂತೆ. ಆ ನಯನ ಮನೋಹರ ದೃಶ್ಯವನ್ನು ಕವಿ ಪ್ರತ್ಯಕ್ಷದರ್ಶಿಯಾಗಿ ಚಿತ್ರಿಸಿದ್ದಾನೆ.

ಈ ರೀತಿಯಾಗಿ ರಾಜನು ಶಾಸ್ತ್ರೋಕ್ತವಾಗಿ ೧೦೦೮ ಕುಂಭಗಳಿಂದ ಜಲಾಭಿಷೇಕವನ್ನು ಮಾಡಿಸಿದ ನಂತರ: ಕ್ರಮವಾಗಿ ಕೆಂದಾಳೆಯ ಸಿಯಾಳಾಭಿಷೇಕ, ಪುಷ್ಪಾಭಿಷೇಕ, ಕದಳಿ ಬಾಳೆ ಹಣ್ಣಿನಭಿಷೇಕ, ಬೆಲ್ಲ ಸಕ್ಕರೆಯ ಅಭಿಷೇಕವನ್ನು ಮಾಡಿಸುತ್ತಾನೆ. ಪುನಃ ಹಾಲು, ತುಪ್ಪದ ಅಭಿಷೇಕ, ಮೊಸರಿನ ಭಿಷೇಕಗಳೆಂದು ಬೇರೆ ಬೇರೆ ದ್ರವ್ಯಗಳಿಂದ ಅಭಿಷೇಕವನ್ನು ಮಾಡಿಸುವುದರ ಜೊತೆಗೆ ಪಿಷ್ಟ, ಕಲ್ಕಚೂರ್ಣ, ಕುಂಕುಮ, ಸಿಂಧೂರ, ಕರ್ಪೂರ ಮಿಶ್ರಿತ ಗಂಧದ ಅಭಿಷೇಕ ಮಾಡಿಸಿ ಕೊನೆಯಲ್ಲಿ ಪುಷ್ಪಾಭಿಷೇಕವನ್ನು ಅತೀ ಭಕ್ತಿ ಸಂಭ್ರಮದಿಂದ ನೆರವೇರಿಸುತ್ತಾನೆ.

ಈ ರೀತಿಯಾಗಿ ಅತೀ ವಿಜೃಂಭಣೆಯಿಂದ ಭಕ್ತರು, ಶ್ರಾವಕರು, ಮುನಿವೃಂದದವರ ಸಹಾಯ ಸಹಕಾರದಿಂದ ಬಾಹುಬಲಿಗೆ ಮಸ್ತಕಾಭಿಷೇಕ ನಡೆಯುತ್ತದೆ. ಜನರೆಲ್ಲರೂ ಮಸ್ತಕಾಭಿಷೇಕದಲ್ಲಿ ಭಾಗವಹಿಸಿ, ವೀಕ್ಷಿಸಿ ಜಿನನ ಕೃಪಾಕಟಾಕ್ಷಗಳಿಗೆ ಪಾತ್ರರಾದೆವೆಂಬ ಸಂತೃಪ್ತಿಯಿಂದ ಭಾವುಕರಾಗಿ ಭಕ್ತಿಪೂರ್ವಕವಾಗಿ ಅಶ್ರುತರ್ಪಣಗೈಯುತ್ತಾರೆ.

ಆನಂದಾಶ್ರು ಜಲಗಳಿಂದ ಮುನಿಪತಿ।ಸ್ನಾನವ ಮಾಡಿದನಾಗ।

ಏನೆಂಬೆ ಜಿನಚಂದ್ರ ದರ್ಶನದಿಂ ಪರ।ಮಾನಂದ [ಗ]ಡಲೊಳುಬ್ಬಿದನು ॥ ೧೭-೧೩೬

ಮಸ್ತಕಾಭಿಷೇಕ ಕಾರ್ಯಗಳು ಮುಗಿದ ನಂತರ ರಾಜನು ಪುನಃ ಹತ್ತು ಹೋಮಕುಂಡಗಳನ್ನು ನಿರ್ಮಿಸಿ, ಹತ್ತು ಮಂದಿ ಇಂದ್ರರಿಂದ 'ಬೃಹಶಾಂತಿ ಹೋಮ' ಹಾಗೂ ಒಂಭತ್ತು ಕುಂಡಗಳಲ್ಲಿ 'ನವಗ್ರಹ ಶಾಂತಿ ಹೋಮ'ಗಳನ್ನು ಮಾಡಿಸುತ್ತಾನೆ.

ಈ ಎಲ್ಲಾ ಧಾರ್ಮಿಕ ವಿಧಿಗಳು ನಡೆದ ನಂತರ ಲಲಿತಕೀರ್ತ್ಯಾಚಾರ್ಯರು ಇಂದ್ರರಿಗೆ, ಯತಿಗಳಿಗೆ ರೇಷ್ಮೆಯ ವಸ್ತ್ರಗಳನ್ನು,ಬಿಳಿಯ ಧೋತ್ರಗಳನ್ನು ದಾನ ಮಾಡುತ್ತಾನೆ. ಇದನ್ನು ಉಲ್ಲೇಖಿಸುತ್ತ

ವರಬುಧರಿಗೆ ಕೊಟ್ಟನವರ ಮನೋರಥ । ಪರಿಪೂರ್ಣ ವಪ್ಪಂದದೊಳು ॥

ಗುರುರಾಯ ಲಲಿತಕೀರ್ತ್ಯಾಚಾರ್ಯನ ತ್ಯಾಗ। ದಿರವನಾನೆಂದು ಬಣ್ಣಿಪೆನು॥ ೧೭-೧೪೨

ಎನ್ನುತ್ತಾನೆ ಕವಿ. ಹೀಗೆ ಧಾರ್ಮಿಕ ಕಾರ್ಯಕ್ರಮಗಳೆಲ್ಲ ಮುಗಿದ ಬಳಿಕ ಬೆಟ್ಟದಲ್ಲಿ ನಡೆದ ಓಕುಳಿಯಾಟದ ಸಂಭ್ರಮವನ್ನು ಕವಿ

ಮಿಸುನಿಯ ಬೆಳ್ಳಿಯಂಡೆಗಳೊಳು ಕುಂಕುಮ । ರಸವನು ತುಂಬಿಯೋಕುಳಿಯ॥

ಹೊಸಪರೆಯದ ಹೊಂತಕಾರಿಗಳಾಡಿದ । ರೆಸೆದೆಸೆದೋರೋರ್ವರಾಗ॥ ೧೭-೧೪೮

ಎಂದು ಚಿತ್ರಿಸಿದ್ದಾನೆ. ಭಕ್ತ॥ತಮ್ಮ ಜಾತಿ, ಧರ್ಮ, ಲಿಂಗ, ವಯಸ್ಸಿನ ಭೇಧವನ್ನು ಸಹ ಮರೆತು ಎಲ್ಲರೂ ಮುಕ್ತವಾಗಿ ಒಬ್ಬರಿಗೊಬ್ಬರು ಕುಂಕುಮ, ಪನ್ನೀರಿನ ಜಲವನ್ನು ಎರಚುತ್ತಾ ಸಂಭ್ರಮಿಸಿದರು. ಸಂತೋಷದಿಂದ ಓಕುಳಿಯಾಟವನ್ನಾಡಿ ಆನಂದಿಸಿದರು.

ಹೀಗೆ ಬಾಹುಬಲಿಯ ಪುನರ್ ಪ್ರತಿಷ್ಠೆ, ಮಸ್ತಕಾಭಿಷೇಕಗಳು ಸಾಂಗವಾಗಿ ನೆರವೇರಲು ಲಲಿತಕೀರ್ತಿಗಳು ಸಂತೃಪ್ತಿಪಟ್ಟುಕೊಂಡರು. ರಾಜನು ತನ್ನ ಇಷ್ಟಾರ್ಥ ನೆರವೇರಿದ್ದಕ್ಕೆ ಆನಂದ ತುಂದಿಲನಾದನು. ಪ್ರಜಾ ಸಮೂಹವು ಧನ್ಯತೆಯನ್ನು ಪಡೆಯಿತು.

ತನ್ನ ಇಷ್ಟಾರ್ಥವು ನೆರವೇರಿದ ಸಂಭ್ರಮದಲ್ಲಿ ಭೈರರಸನು ಜಿನ ಬಸದಿಗೆ ತೆರಳಿ ಶ್ರೀ ನೇಮಿನಾಥನಿಗೆ ಅಭಿಷೇಕ, ಪೂಜೆ, ನೈವೇದ್ಯ ಮುಂತಾದ ಸೇವೆಗಳನ್ನು ನಡೆಸಿದನು. ತನ್ನ ಹರಕೆಯನ್ನು ಪೂರೈಸಲು ಬೆಟ್ಟದ ಬ್ರಹ್ಮರಾಯನಿಗೆ ತೈಲ ಮಜ್ಜನವನ್ನು ಮಾಡಿಸಿ ಚರು, ಪಾಯಸ, ಬಾಳೆಹಣ್ಣುಗಳ ನೈವೇದ್ಯವನ್ನು ನೀಡಿ ಪೂಜಿಸುತ್ತಾನೆ. ಅನಂತರ ಹೊಂಬುಜದ ಬಸದಿಗೆ ತೆರಳಿ ಅಲ್ಲಿ ಪದ್ಮಾಂಬಿಕೆಗೆ ಅಭಿಷೇಕ, ಪೂಜೆಯನ್ನು ಮಾಡಿ, ಚರುತುಪ್ಪದ ಧಾರೆ ಎರೆದು

ಭಕ್ತಿಯಿಂದ ಹರಕೆಯನ್ನು ಪೂರೈಸುತ್ತಾನೆ. ಚಿನ್ನದ ಆಭರಣಗಳನ್ನು ಕಾಣಿಕೆಯ ರೂಪದಲ್ಲಿ ಅರ್ಪಿಸುತ್ತಾನೆ.

ಹೀಗೆ ಕವಿಯು ಕಾರ್ಕಳದ ಪಾಂಡ್ಯರಾಜ, ಇಮ್ಮಡಿ ಭೈರರಸರ ಕಾಲದಲ್ಲಿ ನಡೆದ ಘಟನೆಯನ್ನು ಕಾವ್ಯದಲ್ಲಿ ದಾಖಲಿಸಿ ಇತಿಹಾಸಕ್ಕೆ ಮೂರ್ತರೂಪ ನೀಡಿದ್ದಾನೆ. ತುಳುನಾಡಿನ ಚರಿತ್ರೆಗಾರರಿಗೆ ಇದು ಅಪೂರ್ವ ಆಕರವಾಗಿಯೂ ನಿಂತಿದೆ. ಕಾವ್ಯದೊಳಗಡೆ ಅಂದಿನ ಜನರ ಬದುಕಿನ ವಿವಿಧ ನೆಲೆಗಳನ್ನು ಅನಾವರಣಗೊಳಿಸಿ, ತನ್ನ ಕಾವ್ಯವು ಕೇವಲ 'ಪುರಾಣ ತದ್ರೂಪ'ವಾಗದಂತೆ ಎಚ್ಚರಿಕೆ ವಹಿಸಿ, ಅದನ್ನು ಸ್ವಾರಸ್ಯಕರವಾಗಿ ತೆರೆದಿಟ್ಟಿರುವುದು. ಈ ಕೃತಿಯ ಮಹತ್ವವನ್ನು ಇನ್ನಷ್ಟು ಹೆಚ್ಚುವಂತೆ ಮಾಡಿದೆ.

****

ಅಧ್ಯಾಯ – ೪

ಸಾಮಾಜಿಕ ವಿಶ್ಲೇಷಣೆ

ಒಂದು ಸಮಾಜದ ಜನರು ಬದುಕಿನ ವ್ಯವಸ್ಥೆಯನ್ನು ರೂಪಿಸುವಲ್ಲಿ ಧರ್ಮವು ಪ್ರಧಾನ ಪಾತ್ರ ವಹಿಸುತ್ತದೆ. ಸಮಾನ್ಯವಾಗಿ ಪ್ರತಿಯೊಂದು ಪ್ರದೇಶದಲ್ಲೂ ವಾಸಿಸುವ ಜನರು ತಮ್ಮ ತಮ್ಮ ಧರ್ಮಗಳ ಪಾಲನೆಯ ಜೊತೆಗೆ ಒಟ್ಟು ಸಮಾಜದ ಆಶಯಗಳಿಗೂ ಹೊಂದಿಕೊಂಡು ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಪ್ರತಿಯೊಂದು ಧರ್ಮ, ಜಾತಿ, ಉಪಜಾತಿಗಳಲ್ಲಿ ಒಂದು ರೀತಿಯ 'ಸಂಸ್ಕೃತೀಕರಣ'ವು ನಡೆಯುತ್ತಿರುತ್ತದೆ. ಹೀಗಾಗಿ ಒಂದು ಸಮಾಜದ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಧರ್ಮವು ತನ್ನಷ್ಟಕ್ಕೆ ತಾನು ತಟಸ್ಥವಾಗಿ ಮತ್ತು ಪರಿಶುದ್ಧವಾಗಿರಲು ಸಾಧ್ಯವಾಗುವುದಿಲ್ಲ.

ಈಗಾಗಲೇ ನಾವು ಪ್ರಸ್ತಾಪಿಸಿರುವಂತೆ, ಜೈನ ಧರ್ಮವು ಉತ್ತರಭಾರತದಿಂದ ಬಂದು ಇಲ್ಲಿ ನೆಲೆ ನಿಂತು, ತುಳುನಾಡಿನ ಇತರ ಧರ್ಮ ಜಾತಿ, ಉಪಜಾತಿಗಳ ಜೊತೆಗೆ ಅನ್ಯೋನ್ಯತೆಯನ್ನು ಸಾಧಿಸಿತು. ಜೊತೆಗೆ ಇಲ್ಲಿ ರಾಜಾಶ್ರಯ ದೊರೆತಿದ್ದರಿಂದ ಸಮಾಜದಲ್ಲಿ ವರ್ಚಸ್ವೀ ಧರ್ಮವಾಗಿ ವಿಶೇಷ ಪ್ರೋತ್ಸಾಹಕ್ಕೆ ಒಳಗಾಯಿತು. ಚರಿತ್ರೆಯ ಹಿನ್ನೆಲೆಯಲ್ಲಿ ಗುರುತಿಸುವುದಾದರೆ, ಪ್ರಾಚೀನ ಆಳುಪರ ಕಾಲದಲ್ಲಿ ಪ್ರವೃದ್ಧಮಾನಕ್ಕೆ ಬಂದು ಅನಂತರ ಕೆಳದಿ ಅರಸರು, ಮೈಸೂರು ಅರಸರು ಅದರಲ್ಲೂ ವಿಶೇಷವಾಗಿ ಹೈದರಾಲಿ ಮತ್ತು ಟಿಪ್ಪುಸುಲ್ತಾನ್‌ರ ಆಡಳಿತ ಕಾಲದಲ್ಲಿ ತನ್ನ ವರ್ಚಸ್ಸನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಿತ್ತಾದರೂ ತುಳುನಾಡಿನ ಮೇಲೆ ಅದು ಬೀರಿದ ಪ್ರಭಾವ ಮಾತ್ರ ನಶಿಸಿಹೋಗಲಿಲ್ಲ. ಬದಲಿಗೆ ಇಲ್ಲಿನ ಸಂಪ್ರದಾಯ, ಆಚಾರ, ವಿಚಾರ, ಭಾಷೆಗಳೊಂದಿಗೆ ವಿಶೇಷ ಮೈತ್ರಿಯನ್ನು ಸಾಧಿಸಿತು. ಈ ಹಿನ್ನೆಲೆಯಲ್ಲಿ ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ನೀಡಿರುವ ಅಂದಿನ ಸಾಮಾಜಿಕ ಜೀವನದ ವಿವಿಧ ನೆಲೆಗಳು ನಮ್ಮ ಕುತೂಹಲಕ್ಕೆ ಹಾಗೂ ಅಧ್ಯಯನಕ್ಕೆ ಕಾರಣವಾಗುತ್ತಿದೆ.

ಕಾವ್ಯದ ಅರಂಭದಿಂದ ಕೊನೆಯವರೆಗೆ ಜೈನ ಧರ್ಮದ ಸಾಂಪ್ರದಾಯಿಕ ವಿವರಗಳ ಜೊತೆಗೆ ಅಂದಿನ ಕಾಲಘಟ್ಟದಲ್ಲಿ ಉಂಟಾಗಿರುವ ಕೆಲವು ಸೂಕ್ಷ್ಮ ಸಾಮಾಜಿಕ ಪಲ್ಲಟಗಳನ್ನು ದಾಖಲಿಸಿದ್ದಾನೆ. ಇದು ನಮ್ಮ ಅಧ್ಯಯನಕ್ಕೆ ಬಹು ಮುಖ್ಯ ಸಂಗತಿಯಾಗಿದೆ.

೪.೧ ಕಾರ್ಕಳದ ಜನರು :

ಕಾವ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾದರೆ, ವಿಜಯನಗರ ಆಡಳಿತದ ಸಂದರ್ಭದಲ್ಲಿ ಕಾರ್ಕಳವು ಜೈನ ಧರ್ಮಕ್ಕೆ ಆಶ್ರಯತಾಣವಾಗಿತ್ತೆಂದು ಹೇಳಬಹುದು. ಇಲ್ಲಿನ ಪರಿಸರ ಜನರು ಜೈನಧರ್ಮಕ್ಕೆ ನಿಷ್ಠರಾಗಿದ್ದರು. ಅದರ ಬೆಳವಣಿಗೆಗೆ ಪ್ರೋತ್ಸಾಹಗಳನ್ನು ನೀಡುತ್ತಿದ್ದರು. ಕವಿಯು ನೀಡುವ ಅನೇಕ ಮಾಹಿತಿಗಳು, ಇದನ್ನು ಸ್ಪಷ್ಟಪಡಿಸುತ್ತದೆ.

ಎಲ್ಲಿ ನೋಡಿದರಲ್ಲಿ ಬಸದಿಗಳು, ಮಾನಸ್ತಂಭಗಳು ಇದ್ದುವಂತೆ. ಅಲ್ಲಿ ಅಪಾರ ಸಂಖ್ಯೆಯಲ್ಲಿ ಶ್ರಾವಕರು ವಾಸವಾಗಿದ್ದರು. ಶಾಸ್ತ್ರೋಕ್ತವಾಗಿ "ಅಣುವ್ರತ"ಗಳನ್ನು ಪಾಲಿಸುತ್ತಾ ಚತುರ್ವಿಧ ದಾನಗಳಲ್ಲಿ ನಿರತರಾಗಿದ್ದರು. ಇದನ್ನು ವಿವರಿಸುತ್ತ

"ಆಹಾರ ದಾನ ವಭಯ ದಾನ ಭೈಷಜ್ಯ ।ದಾನ ಶಾಸ್ತ್ರ ದಾನಗಳ ॥
ಆಹ್ಲಾದದೊಳು ಮಾಳ್ಪ ಭವ್ಯ ಜನಂಗಳ । ಮೋಹರ ವಿಹುದೇನನೆಂವೆ ॥ ೧-೧೨೩
"ದಾನಿಗಳಾಗಿಯಾ ಮೋದವಿಲ್ಲದ ಧರ್ಮಸಂ । ದಾನಿಗಳಾಗಿಯು ಕೊಲೆಯು ॥
ಏನೆಂದು ನೆನೆಯದವರ ಗುಣಂಗಳ ನಿ। ನ್ನೇನೆಂದು ಬಣ್ಣಿಪೆ ನಾನು ॥ ೧-೧೨೪

ಎಂದು ನುಡಿಯುತ್ತಾನೆ.

ಜೈನರ ಜೊತೆಗೆ ಕಾರ್ಕಳದಲ್ಲಿ ಬೇರೆ ಬೇರೆ ಧರ್ಮ, ಜಾತಿ, ವೃತ್ತಿಗಳಿಗೆ ಸಂಬಂಧಿಸಿದ ಜನರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಅಜೈನರು ಜೈನ ಧರ್ಮೀಯರ ಜೊತೆಗೆ ಅನ್ಯೋನ್ಯತೆಯಿಂದ ಜೀವಿಸುತ್ತಿದ್ದರು. ಪರಸ್ಪರ ದ್ವೇಷ, ಅಸೂಯೆ, ಅಸಮಾಧಾನಗಳು ಇರಲಿಲ್ಲ. ನಯ ವಿನಯಗಳಿಂದ ನೀತಿವಂತರಾಗಿ ಬದುಕುತ್ತಿದ್ದರೆಂದು ಕವಿ ನುಡಿಯುತ್ತಾನೆ. ಇದರಿಂದ ಅಲ್ಲಿಯ ಪರಿಸರದ ಜನರು ಸಂತೃಪ್ತಿಯಿಂದ ಬದುಕನ್ನು ನಡೆಸುತ್ತಿದ್ದರೆಂದು ಭಾವಿಸಬಹುದು ಕವಿಯ ಮಾತುಗಳಲ್ಲೇ ಹೇಳುವುದಾದರೆ;

ಈತಿ ಬಾಧೆಗಳಿಲ್ಲ ದುರ್ಭಿಕ್ಷಗಳಿಲ್ಲ । ಜಾತಿ ಸಂಕರವೆಂಬುದಿಲ್ಲ ।
ನೀತಿಯ ಮೀರಿ ನಡೆವರಿಲ್ಲ ಶ್ರೀ । ವೀತರಾಗನ ಸದ್ಭಕ್ತಿಯುತರು ॥ ೧-೬೫
ಕರದಂಡವೆಂಬುದು ತಾವರೆಯೊಳಗಲ್ಲ । ದರಸು ಪ್ರಜೆಗಳೊಳಗಿಲ್ಲ ॥
ಉರ(ಗ)ದೊಳಲ್ಲದೆ ಆಗಮ ವಕ್ರತೆ । ವರಭವ್ಯ ಜನರೊಳಗಿಲ್ಲ ॥ ೧-೬೬

ಎಂದು ಪ್ರಶಂಸಿಸುತ್ತಾನೆ. ಬಿಟ್ಟು ಕವಿಯ ಅಭಿಪ್ರಾಯದಲ್ಲಿ ಹೇಳುವುದುದಾರೆ ಅಲ್ಲಿಯ ಜನರೆಲ್ಲರೂ

ವಿನಯ ವಿತರಣ ವಿವೇಕ ಸಂಪನ್ನರು । ಜಿನಪೂಜೆಯೊಳಗರ್ತಿಯುತರು ॥
ಅನುದಿನ ವ್ರತಶೀಲ ಚಾರಿತ್ರರತ್ನ ಭೂ। ಷಣರನುಪಮಭವ್ಯರಲ್ಲಿಹರು ॥ ೧-೧೨೫

ಎಂದು ಹೇಳಬಹುದು.

೪.೨ ಕಾರ್ಕಳದ ವೈಶಿಷ್ಟ್ಯ :

ಕಾರ್ಕಳದಲ್ಲಿರುವ ಜನರ ವಾಸದ ಮನೆಗಳು, ಕೇರಿಗಳು, ಪಟ್ಟಣಗಳು, ಅರಮನೆಗಳು ಮುಂತಾದವುಗಳ ಬಗ್ಗೆ ಸಾಕಷ್ಟು ವಿವರಗಳು ಬಂದಿದೆ. ಅಂದಿನ ಕಾರ್ಕಳವು ಹಿರಿಯಂಗಡಿ, ಬೆಟ್ಟದಂಗಡಿ, ಕೆರೆಯಕೋಡಿ, ಮುಂಡರೀಕರ

---

೧. ಅಣುವ್ರತ – ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ

ಕೇರಿಗಳಿಂದ ಆವೃತ್ತವಾಗಿತ್ತು. ಪ್ರತಿಯೊಂದು ಪರಿಸರವೂ ಸಂಪದ್ಭರಿತವೂ, ಸುಂದರವೂ ಆಗಿದ್ದವು. ಇವುಗಳಲ್ಲಿ ಬೆಟ್ಟದಂಗಡಿಯಂತೂ "ಶ್ರೀಪಾಂಡ್ಯನಗರಿ' ಎಂಬ ಹೆಸರನ್ನು ಪಡೆದು ಶೋಭಿಸುತ್ತಿತ್ತು. ಅದರ ವೈಭವವನ್ನು ಪರಿಚಯಿಸುತ್ತ

ಮಣಿಗಾರರ ಕೇರಿ ಕಂಚುಗಾರ ಕೇರಿ । ಗಣಿಕೆಯರ ಕೇರಿ ಕೇರಿಗಳು ॥
ಗಣಕರ ದಂಡನಾಯಕ ಸಾಮಂತರ । ಗಣನೆಯಿಲ್ಲದ ಕೇರಿಗಳು ॥ ೧-೮೮

ಇದ್ದವೆಂದು ತಿಳಿಸುತ್ತಾನೆ.

ಸಾಮಾನ್ಯವಾಗಿ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ವೃತ್ತಿಯನ್ನು ಕೈಗೊಂಡ ಜನರು ಪ್ರತ್ಯೇಕವಾಗಿ ಒಂದೆಡೆ ವಾಸಿಸುತ್ತಿದ್ದರೆಂದು ಇದರಿಂದ ಸ್ಪಷ್ಟವಾಗುತ್ತದೆ.

ರತ್ನದ ವ್ಯಾಪಾರಿಗಳು ವಾಸಿಸುವ ಕೇರಿಯನ್ನು 'ಮಣಿಗಾರರ ಕೇರಿ' ಎಂದು, ಲೋಹದ ಕೆಲಸವನ್ನು ಮಾಡುವವರು ವಾಸಿಸುವ ಕೇರಿಯನ್ನು 'ಕಂಚುಗಾರರ ಕೇರಿ' ಎಂದು ಹೆಸರಿಸಲಾಗುತ್ತಿತ್ತು.

ಅಂದಿನ ಸಮಾಜದಲ್ಲಿ ನರ್ತಕಿಯರಿಗೆ, ವೇಶ್ಯೆಯರಿಗೆ ವಿಶೇಷ ಸ್ಥಾನಮಾನ ಗೌರಗಳಿದ್ದವು. ಸಮಾಜವು ಅವರನ್ನು ಎಂದಿಗೂ ಕೀಳಾಗಿ ಕಾಣುತ್ತಿರಲಿಲ್ಲ. ಇಂತವರು ವಾಸಿಸುವ ಕೇರಿಯನ್ನು 'ಗಣಿಕೆಯರ ಕೇರಿ' ಎಂದು ಕರೆಯುತ್ತಿದ್ದರು. ಅಂದಿನ ಜನರು ವಿಲಾಸಿ ಜೀವನವನ್ನು ನಡೆಸುತ್ತಿದ್ದರೆಂದು ಹೇಳಬಹುದು. ಜನಸಾಮಾನ್ಯರು ಈ ಪ್ರವೃತ್ತಿಯನ್ನು ವಿವರಿಸುತ್ತಾ ಅವರು ಹೇಗೆ ಸಾಮಾಜಿಕ ಜೀವನದಲ್ಲಿ ತೊಡಗಿದ್ದರೆಂಬುದನ್ನು ಒಂದೆಡೆ:

ಬೇಳುವೆಯನು ಮಾಡಿ ಕುಂಟಣಿಯರ ಕೈಯ । ಬಾಳುವ ವಿಟರರ್ಥವನು ॥
ಗೋಳುಗೊಳಿಪ ಸೂಳೆಯರಿಂದ ಸೊಬಗಾದ । ಸೂಳಗೇರಿಗಳೊಪ್ಪುತಿಹವು ॥ ೧-೯೩
ಬೆಲೆವೆಣ್ಣುಗಳ ಸಂಗವಿಲ್ಲದ ನರರಿಗೆ । ಕಲೆಯ ಜಾಣ್ಮೆಗಳಿಲ್ಲವೆಂದು ॥
ಛಲವ ಪುಟ್ಟಿಸಿ ರಾಜವಿಟರನು ಸೆರೆಗೆಯ್ವ । ಬೆಲೆವೆಣ್ಣುಗಳ ತಂಡವಿಹವು ॥ ೧-೯೬

ಎಂದು ಈ ಮಾತುಗಳಲ್ಲಿ ತಿಳಿಸುತ್ತಾನೆ.

ರಾಜರುಗಳ ಪ್ರತಿಷ್ಠೆಯ ಬದುಕಿನ ಜೊತೆಗೆ, ಶ್ರೀಮಂತ ವ್ಯಕ್ತಿಗಳು ತಮ್ಮ ವಿಲಾಸೀ ಜೀವನವನ್ನು ಮುಕ್ತವಾಗಿ ನಡೆಸುತ್ತಿದ್ದರು. ಪಟ್ಟಣದ ಒಳಗಡೆ ಅನೇಕ ವ್ಯಾಪಾರಸ್ಥರನ್ನು ಕಾಣಬಹುದಾಗಿತ್ತು.

ಪಟ್ಟೆಪಟ್ಟಾವಳಿ ಚೀನಿ ಚೀನಾಂಬರ । ಕಟ್ಟಿದ ಝಲ್ಲಿ ಪತಾಕೆ ॥
ಕಟ್ಟಾಣಿ ಮುತ್ತು ರತ್ನದ ಕುಚ್ಚುಮಣಿಮಯ । ಕುಟ್ಟೆ ಮದಿಂದೊಪ್ಪುತಿಹುದು ॥ ೧-೮೪

ಎಂದು ಆ ಪಟ್ಟಣದ ಒಟ್ಟು ಚಿತ್ರಣವನ್ನು ಕವಿ ನೀಡುತ್ತಾನೆ.

ರಾಜ್ಯದ ಅಧಿಕಾರಿಗಳು, ಶ್ರೀಮಂತರು, ತಮ್ಮ ಮನೆಗಳಲ್ಲಿ ಲೆತ್ತ, ಪಗಡೆ, ಚದುರಂಗದಾಟಗಳನ್ನಾಡುವ

ಹವ್ಯಾಸವನ್ನು ಬೆಳೆಸಿಕೊಂಡಿದ್ದರು.

ಲೆತ್ತವಗಡೆ ಚತುರಂಗವನಾಡುತ । ಪೊತ್ತುಗಳೆದು ರಾಜಪಿಟರು ॥

ಮೊತ್ತವ ಸೊಬನಿಂದ ಸೋಲಿಸಿ ವಶಮಾಳ್ಪ । ಮೊತ್ತವೆಂಗಳ ತಂಡಪಿಹವು ॥ ೧-೯೫

ಸಾಮಾಜಿಕವಾಗಿ ಇತರ ಕೆಲಸ ಕಾರ್ಯಗಳಲ್ಲಿ ವೃತ್ತಿಗಳಲ್ಲಿ, ನಿರತರಾಗಿರುವ ಜನರ ಪರಿಚಯವನ್ನು ಕವಿ ನೀಡಿದ್ದಾನೆ. ಮರದ ಕೆಲಸ ಮಾಡುವವರನ್ನು 'ಬಡಗಿ' ಎಂದು ಕಬ್ಬಿಣದ ಕೆಲಸ ಮಾಡುವವರನ್ನು 'ಕಮ್ಮಾರ'ರೆಂದು ಕರೆಯುತ್ತಿದ್ದರು. ರಾಜನ ಉಗ್ರಾಣಗಳನ್ನುನೋಡಿಕೊಳ್ಳುವವರನ್ನು 'ಉಗ್ರಾಣ' ದವರೆಂದು, ರಾಜಸೇವಾ ಕಾರ್ಯಗಳಲ್ಲಿ ನಿರತರಾದವರನ್ನು 'ಊಳಗದವರೆಂದು' ರಾಜನ ಸಭೆಯ ಶಿಸ್ತನ್ನು ನೋಡಿಕೊಳ್ಳುವವರನ್ನು 'ಕಟ್ಟಿಗೆ'ಯಾಳುಗಳೆಂದು ರಾಜನ ಅಂಗರಕ್ಷಣೆಯನ್ನು ನೋಡಿಕೊಳ್ಳುವವರನ್ನು'ಕಟ್ಟಾಳುಗಳೆಂದು ಮತ್ತು 'ಕಾಲಾಳುಗಳೆಂದು ಕರೆಯಲಾಗುತ್ತಿತ್ತು. ಅದೇ ರೀತಿ ಪರಿಕಾರರು, ಓಲೆಕಾರರು, ವಾದ್ಯದವರು, ಮೇಳದವರು, ಸೇನ ಭೋವರು, ಲೆಕ್ಕಿಗರು ಹೀಗೆ ಹತ್ತು ಹಲವು ವೃತ್ತಿಗಳಲ್ಲಿ ಮತ್ತು ಸೇವೆಗಳಲ್ಲಿ ನಿರತರಾದವರನ್ನು ಕವಿಯು ಪರಿಚಯಿಸಿದ್ದಾನೆ. ಇದರಿಂದ ಅಂದಿನ ಸಾಮಾಜಿಕ ಸ್ಥಿತಿ-ಗತಿಗಳು ಹೇಗಿದ್ದವೆಂದು ತಿಳಿದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ.

೪.೩ ರಾಜನ ಅರಮನೆ :

ಕಾರ್ಕಳದಲ್ಲಿ ಭೈರರಸರು, ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಆಡಳಿತ ನಡೆಸುತ್ತಿದ್ದರು. ಭೈರರಸರ ಪರಂಪರೆಯಲ್ಲಿ ಇಮ್ಮಡಿ ಭೈರವರಾಯನ ಆಸ್ಥಾನಕವಿಯಾಗಿ ಚದುರಚಂದ್ರಮನು ನಿಯುಕ್ತಗೊಂಡಿದ್ದಾನೆ. ಹೀಗಾಗಿ ರಾಜಭವನ, ರಾಜನ ಆಡಳಿತ, ಅಲಿಯ ವ್ಯವಸ್ಥೆಗಳನ್ನು ಕವಿಯು ಚೆನ್ನಾಗಿ ಅರಿತಿದ್ದಾನೆ. ತನ್ನ ಕಾವ್ಯದ ಆರಂಬದ ಎರಡು ಸಂಧಿಗಳಲ್ಲಿ ಮತ್ತು ಕೊನೆಯ ಎರಡು ಸಂಧಿಗಳಲ್ಲಿ ಭೈರವ ಅರಸರ ವಿವರಗಳನ್ನು ಕೊಡುವಾಗ ಪ್ರತ್ಯಕ್ಷದರ್ಶಿಯಾಗಿಯೇ ಅವುಗಳನ್ನು ನೀಡುತ್ತಿದ್ದಾನೆಂದು ನಮಗೆ ಭಾಸವಾಗುತ್ತದೆ. ಕಾರ್ಕಳದಲ್ಲಿರುವ ಭೈರರಸರ ಅರಮನೆಯ ಚಿತ್ರಣವನ್ನು ತುಂಬ ಸ್ವಾರಸ್ಯವಾಗಿ ಹೀಗೆ ನೀಡುತ್ತಾನೆ.

ಇಂತೊಪ್ಪುವಾನಗರದ ಮಧ್ಯದೊಳಗೆ ಭೂ। ಕಾಂತನ ರಾಜ ಮಂದಿರವು॥

ಕಂತು ವಿವರ ಮನೆಯಂತೊಪ್ಪುತಿಹುದ ನಾ । ವೆಂತು ಬಣ್ಣಿಪೆನದನು ॥ ೧-೧೩೪

ಎಂದು ಶ್ರೀಪಾಂಡ್ಯನಗರದ ಮಧ್ಯದಲ್ಲಿ ರಾಜನ ಅರಮನೆ ಇದ್ದು ಅದು ಅಮೂಲ್ಯ ಮುತ್ತು ರತ್ನಗಳಿಂದ ಸುಂದರವಾಗಿ ವೈಭವದಿಂದ ಅಲಂಕಾರಗೊಂಡಿತ್ತು. ಆ ಅರಮನೆಯು ಮನ್ಮಥನ ಅರಮನೆಯಂತಿದ್ದಿತು ಎಂದು ಹೇಳುತ್ತಾನೆ.

ಇದರಿಂದ ಭೈರವರಾಯನ ಅರಮನೆಯು ಅತ್ಯಂತ ವೈಭವದಿಂದ ಮೆರೆಯುತ್ತಿತ್ತೆಂದು ಹೇಳಬಹುದು.

[illegible]

[illegible]

[illegible]

[illegible]

[illegible]

ಈ ವೈಭವದ ಚಿತ್ರಣವನ್ನು ಮುಂದುವರಿಸುತ್ತ :

> ಪಳಿಕಿನ ಭಿತ್ತಿಮೊಳೆದ ಪದ್ಮರಾಗದ । ತೊಲೆ ಮರಕತ ಮಣಿಗಂಬ ॥
> ಕುಲಿಶನ ಭೋದಿಗೆ ಹರಿನೀಲ ಮಣಿಮಯ । ನೆಲೆಗಟ್ಟನಿಂದೊಪ್ಪುತಿಹುದು ॥ ೧-೧೩೫
> ಭೋಜನ ಶಾಲೆ ಆಯುಧ ಶಾಲೆ ಸೊಬಗಿಂದ । ರಾಜಿಪ ನಾಟಕ ಶಾಲೆ ॥
> ಶ್ರೀಜೇನಗೇಹ ಮಜ್ಜನ ಶಾಲೆಯಿಂದ । ರಾಜ ಮಂದಿರ ವೊಪ್ಪುತಿಹುದು ॥ ೧-೧೩೬
> ಸಣ್ಣಚಿರಣಿ ಗೆಲಸುಗಳಿಂದ ಸೊಬಗಾಂತ । ಬಣ್ಣದ ಚಾವಡಿಯಿಹುದು ॥
> ಕಣ್ಣೆತ್ತಿ ನೋಡುವ ಜನರ ಕಣ್ಮನವನು । ತಣ್ಣನೆ ತಣಿಪುವಂತಿಹುದು ॥ ೧-೧೩೮

ಹೀಗೆ ಕವಿ ಭೈರರಸನ ಅರಮನೆಯ ರಾಜಾಂಗಣದೊಳಗೆ.   ನಾಟಕಶಾಲೆ, ಆಯುಧ ಶಾಲೆ, ಜಿನಗೇಹ, ಮಜ್ಜನಶಾಲೆ, ರಾಜಮಂದಿರ ಎಂದು ಪ್ರತ್ಯೇಕವಾದ ಭವನಗಳಿದ್ದವೆಂದು ವಿವರಿಸುತ್ತಾನೆ.

ಅಲ್ಲದೆ ರಾಣಿಯರ ಹಾಗೂ ರಾಜಕುಮಾರರ ವಾಸಕ್ಕಾಗಿಯೂ ಪ್ರತ್ಯೇಕ ಅರಮನೆಗಳಿದ್ದವೆಂದು ತಿಳಿಸುತ್ತಾನೆ.

ಅರಮನೆಯ ಚಾವಡಿಯ ನಂತರ ನಾಟಕ ಶಾಲೆ ಇದ್ದು ಅಲ್ಲಿ ನರ್ತಕಿಯರು ನರ್ತಿಸುತ್ತಿದ್ದರು. ಅರಮನೆಯ ಸುತ್ತಲೂ ರಾಣಿಯರ ಅರಮನೆ ಹಾಗೂ ರಾಜಕುಮಾರರ ಅರಮನೆಗಳು ಸಹ ಇದ್ದವು.

ರಾಜನ ಅರಮನೆಯಲ್ಲಿ ರತ್ನ ಖಚಿತವಾದ ಸಿಂಹಾಸನವಿದ್ದು ಅದನ್ನು 'ಪಟ್ಟೆಯ ಮೇಲ್ಗಟ್ಟು, ಮುತ್ತು ರತ್ನದ ಕುಚ್ಚು, ಗಟ್ಟಿ ಚಿನ್ನದ ಪುತ್ತಳಿಗಳಿಂದ' ಜಗದಾಶ್ಚರ್ಯವೆಂಬಂತೆ ಶೃಂಗರಿಸಲಾಗಿತ್ತು.

೪.೪ ರಾಜನ ಒಡ್ಡೋಲಗ :

'ಅರಿರಾಯರ ಗಂಡರ ದಾವಣಿ' ಎಂಬ ಬಿರುದಿನ ಪಾಂಡ್ಯರಾಜೇಂದ್ರನು ಅಧಿಕಾರ ನಡೆಸುತ್ತಿದ್ದ ಚಿತ್ರಣವನ್ನು ಸ್ವಾರಸ್ಯಕರವಾಗಿ ನಮಗೆ ನೀಡಿದ್ದಾನೆ. ಆತನ ಒಡ್ಡೋಲಗವು ಕ್ಷೀರಸಮುದ್ರದ ಮಧ್ಯದ ವಿಷ್ಣುವಿನ ಒಡ್ಡೋಲಗದಂತೆ ಕಂಗೊಳಿಸುತ್ತಿತ್ತಂತೆ. ಸುತ್ತಲೂ ಮಾಂಡಲಿಕರು, ಮಂತ್ರಿಗಳು, ಸಾಮಂತರು, ದಂಡನಾಯಕರು ಸುತ್ತುವರಿದಿದ್ದು ಮಧ್ಯದಲ್ಲಿ ರಾಜನು ವಿಷ್ಣುವಿನಂತೆ ಶೋಭಿಸುತ್ತಿದ್ದನು. ರಾಜನು ಸಂಪ್ರದಾಯದಂತೆ ಜಟ್ಟಿಗಾಳಗ, ನಾಟ್ಯ, ಸಂಗೀತಗೋಷ್ಠಿ, ಕಾವ್ಯ ಗೋಷ್ಠಿ, ಮುಂತಾದವುಗಳನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದನೆಂದು ಕವಿಯು ತಾನು ಕಂಡ ಒಡ್ಡೋಲಗದ ಸಂದರ್ಭವೊಂದನ್ನು ನೀಡಿದ್ದಾನೆ.

> ಕೈಯೆತ್ತಿ ಪಾಠಕ ನಿಕರ ಕೊಂಡಾಡಲು । ಮೈಯುಬ್ಬುವಂತೆ ಬಿರುದನು ॥
> ಅಯ್ಯ ಜೀಯೆಂದು ಮಂತ್ರಿಗಳು ಭಿನ್ನವಿಸಲು । ವೊಯ್ಯನೆ ಕಿವಿಗೊಡುತಿಹನು ॥ ೨-೪೩

ಪಾಠಕರು ರಾಜನನ್ನು ಕೊಂಡಾಡುವಾಗ ರಾಜನು ಅದಕ್ಕೆ ಸಂತೋಷ ಪಡುತ್ತಿದ್ದನು. ಅಲ್ಲದೆ ಮಂತ್ರಿಗಳು

'ಅಯ್ಯ, ಜೀಯಾ' ಎಂದು ಭಿನ್ನವಿಸಲು ಅವರ ಮಾತುಗಳನ್ನು ಮನಸಾರೆ ಆಲಿಸುತ್ತಿದ್ದನು. ಹೀಗೆ ರಾಜನ ಒಡ್ಡೋಲಗವು ಕ್ರಮ ಬದ್ಧವಾಗಿದ್ದು, ರಾಜ ಸಿಂಹಾಸನದಲ್ಲಿ ಕುಳಿತ ತಕ್ಷಣ ಪ್ರಜೆಗಳೆಲ್ಲರೂ ಆತನಿಗೆ ಕೈಮುಗಿದು ಗೌರವಿಸುತ್ತಿದ್ದರು. [~~ಕುಳಿತ ತಕ್ಷಣ ಪ್ರಜೆಗಳೆಲ್ಲರೂ ಆತನಿಗೆ ಕೈಮುಗಿದು ಗೌರವಿಸುತ್ತಿದ್ದರು~~] ಪ್ರಜೆಗಳಿಗೆ, ಮಂತ್ರಿಮಂಡಲದವರಿಗೂ, ಇತರರಿಗೂ ಆಸನವನ್ನು ಸ್ವೀಕರಿಸುತಂತೆ ಆಜ್ಞಾಪಿಸುತ್ತಾ, ಸಭೆಯಲ್ಲಿ ಹೇಳಬೇಕಿದ್ದ ವಿಚಾರಗಳನ್ನು ತನ್ನ ಸಚಿವರೊಡನೆ ಚರ್ಚಿಸುತ್ತಿದ್ದನು ಎಂದು ವಿವರಿಸುತ್ತಾನೆ.

ರಾಜನ ಸಿಂಹಾಸನದ ಎಡಭಾಗದಲ್ಲಿ ನಿಂತ ಸೇವಕಿಯರು ಕನಕದಂಡ, ಚಾಮರಗಳನ್ನು ಹಿಡಿದು ಸೇವೆಯಲ್ಲಿ ನಿರತರಾಗಿದ್ದರು.

ಪರಿಷತ್ ತ್ರಯದಂತೆ ಮಾಂಡಲಿಕರು ಮಂತ್ರಿ । ಸಾಮಂತರೆಲ್ಲರ ಕೂಡಿ ॥
ಸುರಪತಿ ದೇವ ಸಭೆಯೊಳೊಪ್ಪುವಂತಾ । ನರಪತಿ ಸಭೆಯೊಳೊಪ್ಪಿದನು ॥ ೨-೪೧
ಪಡಪ ಹಾವುಗೆ ಕುಂಚ ಕಾಳಂಜಿ ಮುಂತಾದ । ಮೊಡವಿ ಪಾಲಕರ ಚಿಹ್ನೆಗಳ ॥
ಪಡೆದೆಡಬಲದ ಊಳಿಗದ ಪೆಣ್ಗಳು ನಿಲೆ । ಕಡುಸೊಬಗಿನಿಂದ ಲೊಪ್ಪಿದನು ॥ ೨-೪೨

ಈ ರೀತಿಯಾಗಿ ಕವಿಯು ರಾಜನ ಒಡ್ಡೋಲಗದಲ್ಲಿದ್ದ ಮಂತ್ರಿ, ಮಾಂಡಲಿಕರು, ತಾಂಬೂಲ ಪೆಟ್ಟಿಗೆ, ಪೀಕದಾನಿ, ಪಾದುಕೆ, ಕುಂಚವನ್ನು ಹಿಡಿದು,ಎಡಬಲಗಳಲ್ಲಿ ನಿಂತ ಊಳಿಗದ ಹೆಣ್ಣುಗಳ ಒಟ್ಟು ಸೇವಕ ಸೇವಕಿಯರನ್ನು ಒಳಗೊಂಡ ರಾಜನ ಒಡ್ಡೋಲಗವನ್ನು ವರ್ಣಿಸುತ್ತಾನೆ.

ಈ ಮೂಲಕ ಕಾರ್ಕಳದಲ್ಲಿನ ಅರಸುಗಳ ರಾಜಕೀಯ ವಿಚಾರಗಳು ಹಾಗೂ ಅರಮನೆಯ ಚಿತ್ರಣವನ್ನು ಗಮನಿಸಬಹುದು.

೪.೫ ವರ್ಣ ವ್ಯವಸ್ಥೆ :

ಪುರಾಣ ಕಾಲದಿಂದ ಮೊದಲ್ಗೊಂಡು ಚಾರಿತ್ರಿಕ ಕಾಲದವರೆಗೂ ಸಮಾಜದಲ್ಲಿ ವರ್ಣ ವ್ಯವಸ್ಥೆಗಳು ರೂಢಿಯಲ್ಲಿದ್ದುದನ್ನು ಅನೇಕ ದಾಖಲೆಗಳು ನಮಗೆ ಸ್ಪಷ್ಟಪಡಿಸುತ್ತದೆ. ವೈದಿಕ ಪರಂಪರೆಯಿಂದ ಬೆಳೆದುಬಂದ ಚಾತುರ್ವರ್ಣ ವ್ಯವಸ್ಥೆ ಒಂದೆಡೆಯಾದರೆ, ಜೈನ ಪರಂಪರೆಯಲ್ಲಿ ಬೆಳೆದು ಬಂದ ತ್ರೈವರ್ಣ ವ್ಯವಸ್ಥೆ ಮತ್ತೊಂದು ವಿಧವಾಗಿದೆ. ಜೈನ ಪುರಾಣಿಕ ಹಿನ್ನೆಲೆಯಲ್ಲಿ ಕವಿಯು ಆದಿದೇವನ ಚರಿತ್ರೆಯನ್ನು ನಿರೂಪಿಸುವಾಗ ಆ ಕಾಲದ ಸಾಮಾಜಿಕ ಪದ್ಧತಿಗಳನ್ನು ಚಿತ್ರಿಸುತ್ತಾನೆ.

ಮೊದಲನೆಯ ಕಾಲಘಟ್ಟದಲ್ಲಿ ಆದಿದೇವನಿಗಿಂತ ಹಿಂದೆ ಆಗಿಹೋದ ೧೪ ಜನ ಮನುಗಳು. ಸಾಮಾಜಿಕ ಪದ್ಧತಿಯಲ್ಲಿ ಯಾವ ರೀತಿಯ ಬದಲಾವಣೆಗಳನ್ನು ತಂದರೆಂಬುದು ಸ್ಪಷ್ಟವಾಗುತ್ತದೆ. ಮನುಗಳಿಂದ ಮಾನವ ಸಮಾಜದ

ಸೃಷ್ಟಿ ಎಂಬ ಪರಿಕಲ್ಪನೆ. ವೈದಿಕ ಪರಂಪರೆಯಲ್ಲಿ ಒಂದು ರೀತಿಯಲ್ಲಿ ಚಿತ್ರಿತವಾಗಿದ್ದರೆ, ಜೈನ ಪರಂಪರೆಯಲ್ಲಿ ಮತ್ತೊಂದು ರೀತಿಯಾಗಿ ಚಿತ್ರಿತವಾಗಿದೆ. ಮುಂದೆ ಕವಿಯು ಆದಿದೇವನ ಬದುಕಿನ ವಿವಿಧ ಘಟ್ಟಗಳನ್ನು ನಿರೂಪಿಸುತ್ತ ಆತನು ಜನರಿಗೆ 'ಷಟ್ಕರ್ಮ' ಬೋಧನೆಯನ್ನು ಮಾಡಿದ ವಿವರಗಳನ್ನು ನೀಡುತ್ತಾನೆ.

ಕ್ಷತ್ರಿಯರಿಗೆ ಕ್ಷತ್ರಕರ್ಮವ ವೈಶ್ಯರ । ಗೋತ್ರಕ್ಕೆ ಕೃಷಿ ಪಶುಪಾಲ್ಯ ॥

ಸೂತ್ರಧಾರಕನು ಶೂದ್ರರಿಗೆ ಪೇಳಿದನು ವಿ । ಚಿತ್ರ ಸೇವಾಕರ್ಮಗಳನು ॥ ೬-೧೧೧

ಎಂದು ವರ್ಣಾಶ್ರಮ ವಿಧಾನಗಳನ್ನು ಕಲ್ಪಿಸಿದಂತೆಯೂ ಸೂಚಿಸಲಾಗಿದೆ. ಜೊತೆಗೆ ನಾನಾ ದೇಶಗಳನ್ನು ವಿಭಾಗಿಸಿ, ಸಮಾಜದಲ್ಲಿ 'ರಾಜ್ಯ'ದ ಪರಿಕಲ್ಪನೆಯನ್ನು ರೂಢಿಗೆ ತರಲಾಯಿತು. ಹಾಗೂ ಗ್ರಾಮ, ನಗರ, ಖೇಡ, ಖರ್ವಡ ಪತ್ತನೆಗಳೆಂಬ ವಿಭಾಗಗಳನ್ನು ಆ ದೇಶಗಳಲ್ಲಿ ವ್ಯವಸ್ಥೆಗೊಳಿಸಲಾಯಿತೆಂದು ಕವಿ ಜೈನ ಪುರಾಣೋಕ್ತ ವಿವರಗಳನ್ನು ನೀಡಿದ್ದಾನೆ.

ಆದರೆ ಚರಿತ್ರೆಯ ಯುಗಕ್ಕೆ ಬಂದಾಗ ಈ ವ್ಯವಸ್ಥೆ ಬದಲಾವಣೆಯನ್ನು ಪಡೆದುಕೊಂಡಿತು. ಕವಿಯ ಕಾಲಕ್ಕೆ ಜನಸಾಮಾನ್ಯರಲ್ಲಿ ಬೇರುಬಿಟ್ಟಿದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣವು ವರ್ಣಾಶ್ರಮ ಧರ್ಮವೆಂಬ ವ್ಯವಸ್ಥೆಯನ್ನು ಪಡೆದುಕೊಂಡಿತೆಂದು ನಾವು ಭಾವಿಸಬಹುದಾದರೂ, ಜೈನ ಧರ್ಮದಲ್ಲಿ ಮಾತ್ರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬ ತ್ರೈವರ್ಣ ವ್ಯವಸ್ಥೆಯು ರೂಢಿಯಲ್ಲಿದ್ದುದನ್ನು ಕವಿ ಸ್ಪಷ್ಟವಾಗಿ ತಿಳಿಸುತ್ತಾನೆ.

ಹೀಗಾಗಿ ಜೈನರಲ್ಲಿ ಶೂದ್ರ ವ್ಯವಸ್ಥೆ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಜೈನರ ಕೊನೆಯ ತೀರ್ಥಂಕರ ವರ್ಧಮಾನ ಮಹಾವೀರನ ಕಾಲದಲ್ಲಿ ಚಾತುರ್ವರ್ಣ ವ್ಯವಸ್ಥೆಯು ಹೊರಹೋಗಿ 'ಚತುಸಂಘ' ವ್ಯವಸ್ಥೆಯು ರೂಢಿಗೆ ಬಂದಿತು. ಅದು ಕರ್ನಾಟಕದ ಎಲ್ಲೆಡೆಯಲ್ಲಿ ಇದ್ದಂತೆ ತುಳುನಾಡಿನಲ್ಲಿಯೂ ರೂಢಿಗೆ ಬಂದುದನ್ನು ನಾವು ಕಾಣುತ್ತೇವೆ. ಈ 'ಚತುಸಂಘ' ವ್ಯವಸ್ಥೆಯಲ್ಲಿ ಮುನಿ, ಆರ್ಯಿಕ, ಶ್ರಾವಕ, ಶ್ರಾವಿಕಾ ಎಂಬ ನಾಲ್ಕು ವಿಭಾಗಗಳಿವೆ. ಇವುಗಳಲ್ಲಿ ಆರಂಭದ ಮುನಿ ಮತ್ತು ಆರ್ಯಿಕ ಇವು ಸನ್ಯಾಸಿಗಳ (ವಿರಾಗಿಗಳ) ಸಂಘವಾದರೆ, ಉಳಿದೆರಡು ಗ್ರಹಸ್ಥ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಗ್ರಹಸ್ಥರು ಮುನಿಗಳಿಗೆ ಆಹಾರ ದಾನ ನೀಡಿ, ಅವರನ್ನು ಧ್ಯಾನ ನಿರತರಾಗುವಂತೆ ಮಾಡಿದರೆ ಮುನಿಗಳು ಗ್ರಹಸ್ಥರನ್ನು ಧರ್ಮಕ್ಕೆ ಬದ್ಧರಾಗಿ ನಡೆಯುವಂತೆ ತಮ್ಮ ಉಪದೇಶಗಳ ಮೂಲಕ ಪ್ರೇರಣೆ ನೀಡುತ್ತಾರೆ. ಇವರಲ್ಲಿ ಯಾರಾದರೊಬ್ಬರು ಧರ್ಮಕ್ಕೆ ವಿರೋಧವಾಗಿ ನಡೆದರೂ ಅವರಿಗೆ ಸಮಾಜದಲ್ಲಿ ಮನ್ನಣೆ ದೊರಕದೆ, ತಿರಸ್ಕರಿಸುತ್ತಾರೆ; ಎನ್ನುವುದನ್ನು ಗಮನಿಸಬಹುದು.

ತುಳುನಾಡಿನ ಜೈನ ಸಮಾಜದಲ್ಲಿ ಜಾತಿ ವ್ಯವಸ್ಥೆಯು ಸ್ವಲ್ಪ ಬದಲಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅವರ ಅಭಿಪ್ರಾಯದಂತೆ, ಇಂದ್ರ (ಜೈನ ಬ್ರಾಹ್ಮಣ), ಶೆಟ್ಟಿ, ಜೈನರು ಎಂಬ ಮೂರು ವರ್ಗಗಳು ಸಮಾಜದಲ್ಲಿ

ಕಾರ್ಯನಿರ್ವಹಿಸುತ್ತಿದ್ದವೆಂದು ಹೇಳಬಹುದಾಗಿದೆ.

ವೃತ್ತಿಯ ಹಿನ್ನೆಲೆಯಲ್ಲಿ ಹೇಳುವುದಾದರೆ, ಬಸದಿಯಲ್ಲಿ ಪೂಜೆ ಮಾಡುವ ಇಂದ್ರು, ಪುರೋಹಿತ ವರ್ಗದವರೆಂದೂ, ವ್ಯಾಪಾರೋದ್ಯಮವನ್ನು ನಡೆಸುತ್ತಿದ್ದ ಶೆಟ್ಟರು – ಕ್ಷತ್ರಿಯರೆಂದು, ಕೃಷಿ ಮೊದಲಾದ ಕೆಲಸವನ್ನು ನಿರ್ವಹಿಸುವವರು ಜೈನರು ಎಂದು ಹೇಳಬಹುದಾಗಿದೆ.

ಇವೆಲ್ಲವು ಸಾಮಾಜಿಕವಾಗಿ ಹೊರನೋಟಕ್ಕೆ ಪ್ರತ್ಯೇಕ ವರ್ಗವೆಂದು ಗೋಚರಿಸಿದರೂ, ಆಚರಣೆಯ ಸಂದರ್ಭದಲ್ಲಿ ಎಲ್ಲರೂ ಮುಕ್ತವಾಗಿ ವ್ಯವಹರಿಸುತ್ತಾರೆ. ಬಸದಿಯ ಪೂಜೆ, ಪ್ರತಿಷ್ಠೆ, ಆರಾಧನೆ ಹಾಗೆಯೇ ಮದುವೆ, ಉತ್ಸವ ಮುಂತಾದ ಆಚರಣೆಗಳ ಸಂದರ್ಭದಲ್ಲಿ ಈ ಮೂರು ವರ್ಗದವರು ಬೇಧಭಾವವಿಲ್ಲದೆ ಬೆರೆಯುತ್ತಾರೆ ಎಂಬ ಅಂಶವನ್ನು ನಾವು ಗಮನಿಸಬಹುದು.

೪.೬ ಷೋಡಷ ಕ್ರಿಯೆಗಳು :

ಜೈನ ಧರ್ಮದಲ್ಲಿ ಶ್ರಾವಕ ವರ್ಗದವರು ಆಚರಿಸುವ ಇತರ ಧಾರ್ಮಿಕ ಕ್ರಿಯೆಗಳಲ್ಲಿ ಷೋಡಷ ಕ್ರಿಯೆಯು ಬಹು ಮುಖ್ಯವಾದುದಾಗಿದೆ. ಇದನ್ನು 'ಷೋಡಷ ಸಂಸ್ಕಾರ' ಗಳೆಂದು ಕರೆಯುತ್ತಾರೆ. ಅಂದರೆ ಜೈನ ಧರ್ಮದಲ್ಲಿ ಜನಿಸಿದ ಪ್ರತಿಯೊಂದು ಮಗುವು ಹುಟ್ಟಿನಿಂದ ಮೊದಲ್ಗೊಂಡು ಮರಣದವರೆಗೆ ಆಚರಿಸುವ ಕ್ರಿಯಾವಿಧಿಗಳಿವು. ಡಾ. ಎಸ್.ಡಿ.ಶೆಟ್ಟಿಯವರು ತಮ್ಮ ಸಂಶೋಧನಾ ಗ್ರಂಥದಲ್ಲಿ ರೂಢಿಯಲ್ಲಿದ್ದ ಸು.೧೬ ಕ್ರಿಯೆಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಅವುಗಳೆಂದರೆ :

೧. ಗರ್ಭದಾನ ೨. ಪ್ರಮೋದ ೩. ಪುಂಸವನ ೪. ಸೀಮಂತ ೫. ಜಾತಕರ್ಮ ೬. ನಾಮಕರ್ಮ
೭. ಉಪವೇಶನ ೮. ಅನಪ್ರಾಶನ ೯. ಗಮನ ೧೦. ಚೌಲ ೧೧. ಅಕ್ಷರಾಭ್ಯಾಸ
೧೨. ಪುಸ್ತಕಗ್ರಹಣ ೧೩. ಉಪನಯನ ೧೪. ಸಮಾವರ್ತನ ೧೫. ವಿವಾಹ ೧೬. ಸಮಾಧಿಮರಣ

ಈ ೧೬ ಕ್ರಿಯೆಗಳಲ್ಲಿ ಕೆಲವು ಕ್ರಿಯೆಗಳನ್ನು ಚದುರ ಚಂದ್ರಮ ಕವಿಯು ತನ್ನ ಕೃತಿ ನಿರೂಪಣೆಯ ವಿವಿಧ ಹಂತಗಳನ್ನು ಉಲ್ಲೇಖಿಸಿದ್ದಾನೆ. ಆದಿದೇವನ ಸಮಗ್ರ ಬದುಕಿನ ಚಿತ್ರಣವನ್ನು ನೀಡುವಾಗ ಗರ್ಭದಾನ, ಸೀಮಂತ, ಜಾತಕಕರ್ಮ, ಉಪನಯನ, ಅಕ್ಷರಾಭ್ಯಾಸ, ವಿವಾಹ ಇತ್ಯಾದಿಗಳನ್ನು ಕುರಿತು ತಿಳಿಸುತ್ತಾನೆ.

೪.೬.೧ ಜಾತಕರ್ಮ :

ಇದು ಮಗು ಹುಟ್ಟಿದಾಗ ನಡೆಸುವ ಕ್ರಿಯೆಯಾಗಿದೆ. ಆದಿದೇವನ ಕತೆಯಲ್ಲಿ 'ಜಾತಕರ್ಮ'ದ ವಿವರಣೆಗಳನ್ನು ನೀಡಿದ್ದಾನೆ. ಆದಿದೇವನ ತಂದೆಯಾದ ನಾಭಿರಾಜ ಹಾಗೂ ಮರುದೇವಿಯರು ವೃಷಭದೇವನು ಜನಿಸಿದಾಗ ಹೇಗೆ ಆತನ ಜಾತಕರ್ಮ ವಿಧಿಯನ್ನು ಸಂಭ್ರಮದಿಂದ ನೆರವೇರಿಸಿದರೆಂದು ಕವಿ ಉಲ್ಲೇಖಿಸಿದುದನ್ನು ಗಮನಿಸುವುದು.

ಆ ನಾಭಿರಾಜೇಶ ಕಚ್ಛ ಮಹಾ ಕಚ್ಛ । ರಾನಂದದಿಂದೈ ತಂದು ॥

ಏನೆಂಬ ಜಾತಕರ್ಮವನು ಸಂಭ್ರಮದಿಂ । ದಾನಿಧಿ ಪತಿಗೆ ಮಾಡಿದರು ॥ ೬/೫೩

ಸಾಮಾನ್ಯವಾಗಿ ಜೈನ ಧರ್ಮೀಯರಲ್ಲಿ ಈಗಲೂ ಈ ಪದ್ಧತಿ ರೂಢಿಯಲ್ಲಿದೆ. ಮಗುವಿನ ಜನನದ ನಂತರ ಆ ಮನೆಯ 'ಜನನಸೂತಕ' ವನ್ನು ಕೆಲವು ಹೋಮಾದಿ ಕ್ರಿಯೆಗಳನ್ನು ನಡೆಸುವುದರ ಮೂಲಕ ಕಳಚಿ ಮನೆ ಹಾಗೂ ಮನೆ ಮಂದಿಯನ್ನು ತೀರ್ಥ ಪ್ರೋಕ್ಷಣೆಯನ್ನು ಮಾಡುವುದರ ಮೂಲಕ ಶುದ್ಧೀಕರಿಸುತ್ತಾನೆ. ಅನಂತರ ಮಗುವಿನ ತಂದೆಯು ಮಗುವಿನ ಮುಖವನ್ನು ವಿಧಿಪೂರ್ವಕವಾಗಿ ನೋಡುತ್ತಾನೆ. ಮತ್ತು ಪುರೋಹಿತನು ಮಗುವನ್ನು ಆಶೀರ್ವದಿಸುವ ಕ್ರಿಯೆಗಳು ನಡೆಯುತ್ತವೆ. ಈ ಕ್ರಮವನ್ನು 'ಜಾತಕರ್ಮ' ಎಂದು ಹೇಳಲಾಗುತ್ತದೆ.

ಮುಂದೆ ಜಾತಕರ್ಮದ ಬಳಿಕ ನಡೆಸುವ ಕ್ರಿಯೆಗಳನ್ನು ಕವಿ ಉಲ್ಲೇಖಿಸುತ್ತಾನೆ.

೪.೬.೨ ಅನ್ನಪ್ರಾಶನ, ಚೌಲಕ್ರಿಯೆ; ಉಪನಯನ ಕ್ರಿಯೆ :

ಚದುರಚಂದ್ರಮನು ಜಾತಕರ್ಮದ ನಂತರ ನಡೆಯುವ ಅನ್ನಪ್ರಾಶನ, ಚೌಲ, ಉಪನಯನಕ್ರಿಯೆಗಳನ್ನು ಕುರಿತು, ಆದಿದೇವನ ಕತೆಯಲ್ಲಿ ನಿರೂಪಿಸಿದ್ದಾನೆ. ಆದಿದೇವನು ಮಗುವಾಗಿ ಬಾಲಲೀಲೆಗಳಲ್ಲಿ ತಲ್ಲೀನನಾದಾಗ ಅಂತಃಪುರದಲ್ಲಿರುವ ಸ್ತ್ರೀಯರೆಲ್ಲರೂ ಸಂತೋಷ, ಸಂಭ್ರಮ ಪಡುತ್ತ ಆ ಮಗುವಿನೊಂದಿಗೆ ಕಾಲ ಕಳೆಯುತ್ತಿದ್ದರು. ಇದನ್ನು ಉಲ್ಲೇಖಿಸುತ್ತ ಕವಿಯು

ಕರಿಕಳಭವ ಪೋಲ್ತು ಮಣಿಕುಟ್ಟಿಮದೊಳು । ಚರಿಸುವ ನಂಬೆಗಾಲಿಕ್ಕಿ ॥

ದರಹಸಿತಾನನದಿಂದ ಬಂಧುಗಳಿಗೆ । ಹರುಷವಾರಿಧಿಯ ಪೆರ್ಚಿಸುತಾ ॥ ೬-೫೬

ಅನ್ನಪ್ರಾಶನ ಚೌಲೋಪನಯನ ಮುಖ್ಯ । ಸನ್ನುತ ಕ್ರಿಯೆಗಳ ತಾನೆ ॥

ತನ್ನ ಕುಮಾರಗೆ ಮಾಡಿಸಿದನು ಸಂಪ್ರಸನ್ನಾದಿ ಬ್ರಹ್ಮನಾಗ ॥ ೬-೫೭

ಎಂದು ಆದಿಬ್ರಹ್ಮನಾದ ವೃಷಭದೇವನಿಗೆ ನಡೆದ ಈ ಎಲ್ಲಾ ಕ್ರಿಯೆಗಳ ವಿವರಣೆಯನ್ನು ನೀಡಿದ್ದಾನೆ.

ಅನ್ನಪ್ರಾಶನ ಎಂದರೆ ಸಣ್ಣ ಮಗುವಿಗೆ ಅದರ ಬೆಳವಣಿಗೆಯ ದೃಷ್ಟಿಯಿಂದ ಕೆಲವು ಪೌಷ್ಟಿಕ ಆಹಾರಗಳಾದ ಅಕ್ಕಿಯಿಂದ ತಯಾರಿಸಿದ ಆಹಾರ ವಸ್ತುಗಳನ್ನು ನೀಡಲಾಗುತ್ತದೆ. ಮೊದಲ ಬಾರಿಗೆ ಅನ್ನವನ್ನು ಕೊಡುವಾಗ ಮಗುವನ್ನು ದೇವರ ಸನ್ನಿಧಿಗೆ ಕೊಂಡೊಯ್ದು ಅಲ್ಲಿ ವಿಧಿಪೂರ್ವಕವಾಗಿ ಪುಣ್ಯ ಜಲ, ಮಂತ್ರಾಕ್ಷತೆಯೊಂದಿಗೆ ಹರಸಿ, ಮುತ್ತೈದೆಯರಿಂದ ಅನ್ನದ ಅಗುಳುಗಳನ್ನು ನೀಡಲಾಗುತ್ತದೆ.

ಚೌಲಕ್ರಿಯೆಯೆಂದರೆ, ಮಗುವಿಗೆ ಮೂರು ವರ್ಷ ತುಂಬಿದಾಗ, ಮಗುವಿನ ತಲೆಯ ಕೂದಲನ್ನು ಕತ್ತರಿಸುವ ಕ್ರಿಯೆ. ತಲೆ ಕೂದಲನ್ನು ಕತ್ತರಿಸುವಾಗ ಹಿಂಭಾಗದಲ್ಲಿ ಸಣ್ಣ ಜುಟ್ಟನ್ನು ಬಿಟ್ಟು, ಉಳಿದ ಎಲ್ಲಾ ತಲೆಕೂದಲನ್ನು ಕ್ಷೌರ

ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ಮಗುವಿಗೆ ಆಯಸ್ಸು ಹೆಚ್ಚುವುದರ ಜೊತೆಗೆ ಮಗು ಸುಂದರವಾಗಿಯೂ ಕಾಣುತ್ತದೆ ಎಂಬ ನಂಬಿಕೆಯಿದೆ. ಇದನ್ನು ಯೋಗ್ಯ ಮುಹೂರ್ತದಲ್ಲಿ ವಿಧಿಪೂರ್ವಕವಾಗಿ ನಡೆಸಲಾಗುತ್ತದೆ.

ಉಪನಯನಕ್ರಿಯೆ ಎಂದರೆ ಬಾಲಕನಿಗೆ ಯೋಗ್ಯವಾದ ಕಾಲದಲ್ಲಿ ಮೌಂಜಿ ಬಂಧನವನ್ನು ಮಾಡಿ ವ್ರತೋಪದೇಶವನ್ನು ಕೊಡಿಸುವ ಪದ್ಧತಿಯಾಗಿದೆ. ಇದನ್ನು ಬಾಲಕನ ಅಕ್ಷರಾಭ್ಯಾಸಕ್ಕೆ ಮೊದಲು ಮಾಡಿಸಲಾಗುತ್ತದೆ.

೪.೬.೩ ಅಕ್ಷರಾಭ್ಯಾಸ :

ಮನುಷ್ಯನ ಗುರಿ ಆತ್ಮಜ್ಞಾನವನ್ನು ಹೊಂದುವುದು. ಆದುದರಿಂದ ಜೈನ ಧರ್ಮವು ಲೌಕಿಕ ಜ್ಞಾನಕ್ಕಿಂತ ಪಾರಮಾರ್ಥಿಕ ವಿದ್ಯೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿತ್ತು.

ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ಆದಿದೇವನು ತನ್ನ ಮಕ್ಕಳಿಗೆ ಯಾವ ರೀತಿಯ ವಿದ್ಯಾಭ್ಯಾಸವನ್ನು ಹೇಳಿಕೊಟ್ಟಿದ್ದನೆಂಬ . ಅಂಶಗಳು ಕುತೂಹಲಕಾರಿಯಾಗಿವೆ. ಹೆಣ್ಣು ಮಕ್ಕಳಿಗೆ ನೀಡಿದ ವಿದ್ಯಾಭ್ಯಾಸವನ್ನು ಕುರಿತು ದಾಖಲಿಸಿರುವುದು ಮಹತ್ವದ ಸಂಗತಿಯಾಗಿದೆ.

ಹೃದಯ ಕಮಲದೊಳು ಅಧಿವಾಸಿ ಶ್ರೀ ಶಾರದೆಯನು ಪೂಜಿಸಿ ಬಳಿಕ ॥
ಸುದತಿಯರೀರ್ವರ ನಿಕ್ಕೆಲದೊಳಗಿಟ್ಟು । ಹುದುಳಿಸಿ ಕರಗಳ ಪಿಡಿದು ॥ ೬-೯೦

ಇಲ್ಲಿ ಆದಿದೇವನು ವಿದ್ಯಾಧಿದೇವತೆಯಾದ ಶಾರದೆಯನ್ನು ಪ್ರಾರ್ಥಿಸಿ, 'ವಿದ್ಯಾರಂಭ'ದ ಶಾಸ್ತ್ರವನ್ನು ನಡೆಸಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡುವುದನ್ನು ಗಮನಿಸಬಹುದು.

ಆದಿದೇವನು ಮಕ್ಕಳಿಗೆ ವಿದ್ಯಾರಂಭ ಮಾಡಿಸುವಾಗ ಚಿನ್ನದ ಹಲಗೆಯ ಮೇಲೆ ರತ್ನದ ಧೂಳನ್ನು ಹಾಕಿ ಅದರ ಮೇಲೆ 'ಸಿದ್ಧಂ ನಮೋ' ಎಂಬ ಸ್ತೋತ್ರವನ್ನು ಬರೆಯಿಸುತ್ತಾನೆ. ಅನಂತರ ಕನ್ನಡ ಸ್ವರ ವ್ಯಂಜನಾಕ್ಷರಗಳನ್ನು ಕ್ರಮ ಪ್ರಕಾರವಾಗಿ ಕಲಿಸಿಕೊಡುತ್ತಾನೆ ಎಂದು ಕವಿ ಉಲ್ಲೇಖಿಸಿದ್ದಾನೆ. ಈ ಮೂಲಕ ವಿದ್ಯೆಗೆ ಪ್ರಾಶಸ್ತ್ಯ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ಅದನ್ನು ಗ್ರಹಿಸುವುದನ್ನು ಗಮನಿಸಬಹುದು.

ಕವಿ ಉಲ್ಲೇಖಿಸುವ ಈ ವಿವರಗಳು ಮುಖ್ಯವಾದುದು ಎನ್ನಬಹುದು. ತನ್ನ ಹಿರಿಯ ಮಗಳು ಬ್ರಾಹ್ಮಿಗೆ ಸ್ವರ, ವ್ಯಂಜನ ಲಿಪಿ ವಿದ್ಯೆಗಳನ್ನು ತನ್ನ ಬಲ ಕೈಯಿಂದ ಕಲಿಸಿದ ರಾಜನು ಎಡಕೈಯಿಂದ ಸೌಂದರಿಗೆ ಗಣಿತ ವಿದ್ಯೆಯನ್ನು ಕಲಿಸಿಕೊಡುತ್ತಾನೆ. ಅಲ್ಲದೆ 'ಸ್ವಯಂಭುವ'ವೆಂಬ ಹೆಸರಿನ ಶ್ರೇಷ್ಠ ಪದವಿದ್ಯೆಯನ್ನು ಹಾಗೂ ಛಂದಸ್ಸು, ಅಲಂಕಾರಗಳನ್ನು ಸಹ ಹೆಣ್ಣು ಮಕ್ಕಳಿಗೆ ಸಮಾನವಾಗಿ ಪ್ರೀತಿಯಿಂದ ಕಲಿಸಿಕೊಡುವುದನ್ನು ಗಮನಿಸಬಹುದು.

.... ಭರತೇಶನಿಗೆ ಭರತಾರ್ಥ ಶಾಸ್ತ್ರಂಗ। ವರ ವೃಷಭಾದಿ ಸೇನನಿಗೆ ॥
ನಿರುಪಮ ಗಾಂಧರ್ವ ವಿದ್ಯೆ ಮುಂತಾದುವ । ಪುರುಜಿನಪತಿ ನಿರವಿಸಿದ॥ ೬-೯೫

ಕಾಮತಂತ್ರವ ಹಸ್ತ್ಯಶ್ವ ತಂತ್ರಗಳ । ಸಾಮುದ್ರಿಕಾಯುರ್ವೇದಗಳ ॥

ಕಾಮದೇವಗೆ ಧನುರ್ವಿದ್ಯೆ ಮುಂತಾದುದ । ಪ್ರೇಮದಿ ತಿಳುಹಿದ ಸ್ವಾಮಿ ॥ ೬/೯೬

ಆದಿದೇವನು ಭರತನಿಗೆ ಭಾರತೀಯ ಅರ್ಥಶಾಸ್ತ್ರವನ್ನು, ವೃಷಭಸೇನಾನಿಗಳಿಗೆ ಗಾಂಧರ್ವ ವಿದ್ಯೆಯನ್ನು ಹಾಗೂ ಬಾಹುಬಲಿಗೆ ಕಾಮತಂತ್ರ, ಸಾಮುದ್ರಿಕ, ಆಯುರ್ವೇದ, ಧನುವಿದ್ಯೆ, ಗಜಾಶ್ವ, ವಿದ್ಯೆಗಳನ್ನು ಉಳಿದ ಮಕ್ಕಳಿಗೆ ಇತರ ಲೋಕೋಪಕಾರಿ ವಿದ್ಯೆಗಳನ್ನು ಕಲಿಸುತ್ತಾನೆ.

ಈ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಆದಿದೇವನು ತನ್ನಿಬ್ಬರು ಹೆಣ್ಣು ಮಕ್ಕಳ ನಡುವೆ ಭೇದವನ್ನು ಕಲ್ಪಿಸದೆ ಇಬ್ಬರಿಗೂ ಸಮಾನವಾಗಿ ವಿದ್ಯಾಬುದ್ಧಿಯನ್ನು ನೀಡುತ್ತಾನೆ.

ಜೈನಧರ್ಮವು ಶಿಕ್ಷಣ / ವಿದ್ಯಾಭ್ಯಾಸಕ್ಕೆ ಸಂಪೂರ್ಣವಾದ ಪ್ರೋತ್ಸಾಹ ಅವಕಾಶವನ್ನು ನೀಡಿತ್ತು. ಮಾತ್ರವಲ್ಲದೆ ಸ್ತ್ರೀ ಶಿಕ್ಷಣಕ್ಕೂ ಮಹತ್ವವನ್ನು ನೀಡಿ ಸ್ತ್ರೀಯರ ಶಿಕ್ಷಣಕ್ಕೆ ಅವಕಾಶವನ್ನು ಕೊಟ್ಟಿತ್ತು. ಆ ಕಾರಣದಿಂದಾಗಿಯೇ ಆದಿದೇವನು ಬ್ರಾಹ್ಮಿಗೆ ಕಲಿಸಿದ ಅಕ್ಷರಾಭ್ಯಾಸದ ಶೈಲಿ, ಎಡದಿಂದ ಬಲಕ್ಕೆ ಬರೆಯುವ ವಿನ್ಯಾಸವು ಇಂದಿಗೂ ಪ್ರಚಲಿತದಲ್ಲಿದೆಯೆಂದು ಹೇಳಬಹುದು.

ಹೀಗೆ ಜೈನ ಧರ್ಮವು ವಿದ್ಯಾಭ್ಯಾಸಕ್ಕೆ ನೀಡಿದ ಮಹತ್ವ, ಅವಕಾಶವು ಮುಂದೆ ಇಡೀ ಸಮಾಜಕ್ಕೆ ಮಾದರಿಯಾಗಿ ಸಮಾಜದಲ್ಲಿ ಸ್ತ್ರೀಯರಿಗೂ ಶಿಕ್ಷಣ ರಂಗದಲ್ಲಿ ವಿಶಿಷ್ಟ ಸ್ಥಾನಮಾನ ದೊರಕಲು ಸಾಧ್ಯವಾಯಿತು ಎನ್ನಬಹುದು. ಕವಿ ಚಂದ್ರಮನ ಕಾಲದಲ್ಲಿ ಧಾರ್ಮಿಕ ವಿದ್ಯೆಗಳ ಜೊತೆಗೆ ಕೆಲವು ಲೌಕಿಕ ವಿದ್ಯೆಗಳೂ ರೂಢಿಯಲ್ಲಿತ್ತೆಂದು ಹೇಳಬಹುದು.

೪.೬.೪ ವಿವಾಹ :

ವಿವಾಹವು ಮಾನವ ಜೀವಿತದಲ್ಲಿ ಪ್ರಮುಖ ಕ್ರಿಯೆಯಾಗಿದ್ದು ಪುರುಷನು ಸ್ವಜಾತೀಯ ಕನ್ಯೆಯನ್ನು ಅಗ್ನಿಸಾಕ್ಷಿಯಾಗಿ ಸ್ವೀಕರಿಸುವುದಕ್ಕೆ 'ಮದುವೆ' ಅಥವಾ 'ವಿವಾಹ' ವೆಂದು ಕರೆಯುತ್ತಾರೆ.

ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ಆದಿದೇವನ ವಿವಾಹದ ಪ್ರಸಂಗವನ್ನು ಕುರಿತು ಸ್ವಾರಸ್ಯವಾಗಿ ವಿವರಿಸಿದ್ದಾನೆ.

ಭಾವೆಯಶಸ್ವತೀ ದೇವಿ ಸುನಂದಾ । ದೇವಿಯರೆಂಬ ಕನ್ಯೆಯರ ॥

ಆ ವಿಧಿಯಿಂದ ಮದುವೆಯ ಮಾಡಿಸಿದನಾ । ದೇವಗೆ ನಾಭಿರಾಜೇಂದ್ರ॥ ೬–೨೨

ನಾಭಿರಾಜನು ತನ್ನ ಮಗ ಆದಿದೇವನು ವಯಸ್ಸಿಗೆ ಬಂದಾಗ, ಆತನಿಗೆ ಕಚ್ಛ, ಮಹಾಕಚ್ಛರೆಂಬ ರಾಜರ ತಂಗಿಯರಾದ ಯಶಸ್ವತೀ ದೇವಿ ಹಾಗೂ ಸುನಂದಾ ದೇವಿಯರೊಂದಿಗೆ ವಿವಾಹವನ್ನು ಸಂಭ್ರಮದಿಂದ ಮಾಡಿಸುತ್ತಾನೆ. ಅನಂತರ ನವ ವಧು–ವರರನ್ನು ಮುತ್ತೈದೆಯರೆಲ್ಲಾ ಸೇರಿ ಕಳಸಕನ್ನಡಿಯನ್ನು ಹಿಡಿದು ಸಂಭ್ರಮದಿಂದ ಅರಮನೆಗೆ ಕರೆತರುತ್ತಾರೆ. ಅನಂತರ ಎಲ್ಲರೂ ಸೇರಿ ಅವರಿಗೆ ಆರತಿಯನ್ನು ಎತ್ತಿ ಸೇಸೆಯನ್ನು ಹಾಕಿ ಆಶೀರ್ವದಿಸುತ್ತಾರೆ ಎಂದು ಜೈನ

ಸಂಪ್ರದಾಯದ ವಿವಾಹ ಸಂಭ್ರಮವನ್ನು ಕವಿ ವರ್ಣಿಸಿದ್ದಾನೆ.

ಈ ಹಿನ್ನೆಲೆಯಲ್ಲಿಯೇ ಜೈನ ಧರ್ಮೀಯರ ವಿವಾಹವು ಈಗಲೂ ನಡೆದುಕೊಂಡು ಬರುತ್ತದೆ. ಇಂದಿನ ವಿವಾಹ ವಿಧಿಯಲ್ಲಿ ಚಪ್ಪರ ಮುಹೂರ್ತ ಅಂಕುರಾರ್ಪಣೆ, ತೋರಣ ಮುಹೂರ್ತ, ತಾಳಿಬಂದಿ, ಧಾರೆ, ನಾಗಬಲಿ ಶಾಸ್ತ್ರ ಇತ್ಯಾದಿ ವಿಧಿಗಳು ನಡೆಯುವುದನ್ನು ಗುರುತಿಸಬಹುದು.

ಇದರ ಕೊನೆಯ ಭಾಗವಾಗಿ ಪುರೋಹಿತರು ಶಾಂತಿ ಹೋಮವನ್ನು ನಡೆಸಿ, ವಧುವರರ ಕೈಯಿಂದ ಅಷ್ಟವಿಧಾರ್ಚನೆಯನ್ನು ಮಾಡಿಸಿ ಪುಣ್ಯಾರ್ಘ್ಯವನ್ನು ಹೋಮಕ್ಕೆ ನೀಡಿ ಶಾಂತಿಧಾರೆಯನ್ನು ಮಾಡುತ್ತಾರೆ. ಅನಂತರ ಅಗ್ನಿಯ ಉತ್ತರ ದಿಕ್ಕಿನಲ್ಲಿ ಸ್ಥಾಪಿಸಿದ ಕಲ್ಲಿನ ಮೇಲೆ ಏಳು, ಉಪ್ಪಿನ ಮತ್ತು ಅಕ್ಕಿಯ ಪುಂಜಗಳನ್ನಿಟ್ಟು 'ಸಪ್ತಪರಮ ಸ್ಥಾನ' ವೆಂದು ಭಾವಿಸಿ ಪೂಜಿಸುತ್ತಾರೆ. ಜೊತೆಗೆ ವಧು-ವರರು ಅದಕ್ಕೆ ಪ್ರದಕ್ಷಿಣೆ ಬಂದು ಸಪ್ತಪದಿ ವಾಕ್ಯಗಳ ಪ್ರತಿಜ್ಞೆಯನ್ನು ಕೈಗೊಳ್ಳುತ್ತಾರೆ.

೪.೭ ದಾನಗಳು :

ಜೈನ ಗ್ರಹಸ್ಥರ ಷಟ್ಕರ್ಮಗಳಲ್ಲಿ ದಾನವು ಪ್ರಮುಖವಾದುದು. ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ಕಾರ್ಕಳದಲ್ಲಿ ಪ್ರಚಲಿತದಲ್ಲಿದ್ದ 'ದಾನ'ಗಳನ್ನು ಕುರಿತು ಉಲ್ಲೇಖಿಸಿದ್ದಾನೆ. ಕವಿಯೇ ಹೇಳುವಂತೆ ಅಲ್ಲಿ, ಆಹಾರ, ಅಭಯ, ವಿದ್ಯೆ, ಭೈಷಜ್ಯ, ಶಾಸ್ತ್ರ ಇತ್ಯಾದಿಗಳನ್ನು ದಾನಗೈಯುವ ಜನ ಸಮೂಹವೇ ಇತ್ತು. ಇವರು ತಮ್ಮ ತಮ್ಮ ನೆಲೆಯಲ್ಲಿ ಜೈನಧರ್ಮದ ತತ್ವಗಳನ್ನು ತಿಳಿದುಕೊಂಡು ಅದನ್ನು ಆಚರಿಸುತ್ತಿದ್ದರೆಂದು ಭಾವಿಸಬಹುದು.

"ದೇವಪೂಜಾ ಗುರೂಪಾಸ್ತಿ ಸ್ವಾಧ್ಯಾಯಃ ಸಂಯಮಂ ತಪಃ ॥
ದಾನಂ ಚೇತಿ ಗೃಹಸ್ಥಾನಂ । ಷಟ್ಕರ್ಮಾಣಿ ದಿನೇ ದಿನೇ ॥"[2]

ದೇವಪೂಜೆ, ಗುರುಗಳ ಸೇವೆ, ಸ್ವಾಧ್ಯಾಯ, ಸಂಯಮ, ತಪ, ದಾನ ಈ ಆರು ಕ್ರಿಯೆಗಳನ್ನು ಗ್ರಹಸ್ಥನು ಪಾಲಿಸಲೇಬೇಕು ಎಂಬ ನಿಯಮಗಳಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಸ್ವತಃ ರಾಜನು ಸಹ ಧಾರ್ಮಿಕ ಸಂದರ್ಭಗಳಲ್ಲಿ ಅಥವಾ ಇನ್ನಿತರ ಸಂದರ್ಭಗಳಲ್ಲಿ ಇಂತಹ ದಾನವನ್ನು ಶ್ರದ್ಧೆಯಿಂದ ಮಾಡುತ್ತಿದ್ದುದನ್ನು ಕುರಿತು ಕವಿಯು ಪ್ರಸ್ತಾಪಿಸಿದ್ದಾನೆ.

ಪಾಂಡ್ಯರಸ ಮತ್ತು ಭೈರರಸರು ತಮ್ಮ ಈ ದಾನಗುಣಗಳಿಂದಾಗಿ 'ದಾನಸಾಗರ', ಮಾನವ ರೂಪಿನ ಕಲ್ಪವೃಕ್ಷ' ಎಂಬ ಕೀರ್ತಿಗೆ ಭಾಜನರಾಗಿದ್ದರೆಂದು ಕವಿ ಸ್ತುತಿಸುತ್ತಿರುವುದನ್ನು ಇಲ್ಲಿ ಗಮನಿಸಬಹುದು.

---

೨. ಡಾ. ಎಸ್.ಡಿ ಶೆಟ್ಟಿ – ತುಳುನಾಡಿನ ಜೈನಧರ್ಮ, ಪುಟ ಸಂ.೧೨೦

ರಾಜನ ಜೊತೆಗೆ ಲಲಿತಕೀರ್ತಿ ಭಟ್ಟಾರಕರು ಕೂಡ ಪ್ರತಿಷ್ಠಾ ಸಂದರ್ಭದಲ್ಲಿ ನೆರೆದ ಚತುಸಂಘಗಳಿಗೆ ವಿವಿಧ ರೀತಿಯ ದಾನ, ಮಾಡಿದ ದೃಷ್ಟಾಂತಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ವಿಶೇಷ ವಾಗಿ ಅನ್ನದಾನ, ವಸ್ತ್ರದಾನ, ಹೊನ್ನು, ಆಭರಣ ಮುಂತಾದವುಗಳನ್ನು ದಾನ ನೀಡಿದ ಚಿತ್ರಗಳು ನಮಗೆ ಕಾವ್ಯದಲ್ಲಿ ಕಂಡು ಬರುತ್ತದೆ.

ಹೀಗೆ ದಾನ ನೀಡುವ ಪದ್ಧತಿ ಅಂದಿನಿಂದ ಇಂದಿಗೂ ತುಳುನಾಡಿನಲ್ಲಿ ನಡೆದುಕೊಂಡು ಬಂದಿರುವುದನ್ನು ನಾವು ಕಾಣಬಹುದು.

೪.೮ ಜೈನರ ಆಹಾರ ಪದ್ಧತಿ :

ಜೈನ ಧರ್ಮವು ಅಹಿಂಸಾ ತತ್ವವನ್ನು ಪ್ರತಿಪಾದಿಸುವ ಹಾಗೂ ಪರಿಪಾಲಿಸುವ ಧರ್ಮವಾಗಿದೆ. ಆ ತತ್ವದ ಹಿನ್ನೆಲೆಯಲ್ಲಿ ಅವರು ತಮ್ಮ ಬದುಕಿನ ಪ್ರತಿಯೊಂದು ನೆಲೆಯಲ್ಲಿಯೂ 'ಅಹಿಂಸಾ' ಮಾರ್ಗವನ್ನು ಅನುಸರಿಸುವುದನ್ನು ಗಮನಿಸಬಹುದು. ಅವುಗಳಲ್ಲಿ ವಿಶೇಷವಾಗಿ ಅವರ ಆಹಾರ ವಿಧಾನದಲ್ಲಿ ಈ ಅಂಶವನ್ನು ಗಮನಿಸಬಹುದು. ಶುದ್ಧ ಸಸ್ಯಹಾರಿಗಳಾದ ಇವರು ತಾವು ತಿನ್ನುವ ನಿತ್ಯ ಆಹಾರ ಸೇವನೆಯಲ್ಲೂ ಮತ್ತೊಂದು ಜೀವಿಗೆ ಹಿಂಸೆ ಆಗಬಾರದು' ಎನ್ನುವ ಎಚ್ಚರಿಕೆ ವಹಿಸುತ್ತಿದ್ದರು.

ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ಜೈನರ ನಿತ್ಯಭೋಜನದ ಬಗ್ಗೆ ಪ್ರಸ್ತಾಪಿಸುತ್ತಾನೆ. ಅವರ ಆಹಾರ ಪದ್ಧತಿಯನ್ನು ಉಲ್ಲೇಖಿಸುತ್ತಾ ಒಂದೆಡೆ

ಉಪ್ಪು ಉಪ್ಪಿನಕಾಯಿ ತಾಳಿಲ ಪಾಯಸ । ವೊಪ್ಪುವ ಕಜ್ಜಾಯ ೨-೧೨೪

ತುಪ್ಪದೊಳಗೆ ಹದವರಿದು ತಾಳಿಸಿದ ಕಮ್ಮ । ನಪ್ಪ ಹಪ್ಪಳ ಸಂಡಿಗೆಗಳ ೨-೧೨೯

ಎನ್ನುತ್ತಾನೆ.

ಉಪ್ಪಿನಕಾಯಿ, ತಾಳೀ ಪಾಯಸ, ಕಜ್ಜಾಯ, ತುಪ್ಪ, ಸಣ್ಣಕ್ಕಿ, ಅನ್ನ, ತೋವೆ, ಹಪ್ಪಳ, ಸೆಂಡಿಗೆ, ಪಳದ್ಯ ಇತ್ಯಾದಿಗಳು ಅವರಿಗೆ ಪ್ರಿಯವಾದ ಭಕ್ಷ್ಯಗಳೆಂದು ಹೇಳಬಹುದು. ಜೊತೆಗೆ ಊಟವಾದ ನಂತರ ಅವರಲ್ಲಿ ಸಿಹಿ ತಿನ್ನುವ ಪರಿಪಾಠವಿದ್ದುದನ್ನು ಕೂಡಾ ತಿಳಿಸಿದ್ದಾನೆ.

೪.೯ ಮುನಿಭಿಕ್ಷೆ :

ಜೈನ ಸಂಪ್ರದಾಯದಲ್ಲಿ ಬೆಳೆದು ಬಂದ ಪದ್ಧತಿಗಳಲ್ಲಿ ಮುನಿಭಿಕ್ಷೆಯೂ ಒಂದು. ಇದನ್ನು ಗೌರವದ ಹಾಗೂ ಪುಣ್ಯದ ಕೆಲಸವೆಂದು ಶ್ರಾವಕರು ಭಾವಿಸುತ್ತಾರೆ. ಶ್ರಾವಕರು ತಮ್ಮ ಮನೆಗೆ ಮುನಿಗಳು ಭಿಕ್ಷೆಗೆ ಬಂದರೆ ಅದನ್ನು ತಮ್ಮ ಪುಣ್ಯವೆಂದು ಭಾವಿಸಿ ವಿಶೇಷ ಭಕ್ತಿಯಿಂದ ಎದುರುಗೊಂಡು ಗೌರವಿಸುತ್ತಾರೆ. ಅವರಿಗೆ ಆಹಾರದಲ್ಲಿ ಸ್ವಲ್ಪವೂ

ಅಶುದ್ಧವಾಗದಂತೆ ವಿಶೇಷ ಎಚ್ಚರಿಕೆ ವಹಿಸಿ ಉಪಚರಿಸುತ್ತಾರೆ.

ಇಂತಹ ಒಂದು ಪ್ರಸಂಗವನ್ನು ಕುರಿತಂತೆ ಚಂದ್ರಮನು ತನ್ನ ಕಾವ್ಯದಲ್ಲಿ ವಿವರಿಸಿದ್ದಾನೆ. ಪಾಂಡ್ಯರಾಜನು ತನ್ನ ಅರಮನೆಗೆ ಮುನಿಗಳು ಭಿಕ್ಷೆಗೆ ಬರುತ್ತಾರೆಂದು ತಿಳಿದಾಗ

ಯತಿಗಳ್ಗೆ ಚರಿಗೆಯ ಮಾಡಿಸಿದಲ್ಲದೆ । ಪ್ರತಿದಿನ ತಾನುಣ್ಣೆನೆಂಬ ॥

ವ್ರತವುಳುದಂದು ಎಂದು ಧೋತ್ರವನುಟ್ಟು । ಕ್ಷಿತಿ ಪತಿಯತಿಗಳ ಬರವ ॥ ೨–೮೨

ಹಾರೈಸುತ್ತಿದ್ದಂತೆ ಮುನಿಗಳಿಗೆ ಭಿಕ್ಷೆ ನೀಡದೆ ತಾನು ಆಹಾರವನ್ನು ಸ್ವೀಕರಿಸುವುದಿಲ್ಲವೆಂದು ವ್ರತವನ್ನು ಕೈಗೊಂಡಿದ್ದನಂತೆ. ಹೆಗಲ ಮೇಲೆ ಕೈಯಿಟ್ಟು 'ಗೋಚರಿ ವೃತ್ತಿಯಲ್ಲಿ'[3] ಮುನಿಗಳು ಬಂದಾಗ ಅತೀ ಗೌರವ, ಭಕ್ತಿಪೂರ್ವಕವಾಗಿ ಬರಮಾಡಿಕೊಳ್ಳುತ್ತಾನೆ. ಪರಿಶುದ್ಧ ಜಲದಿಂದ ಅವರ ಪಾದಗಳನ್ನು ತೊಳೆದು ಅದನ್ನೇ ಪವಿತ್ರ ಜಲವೆಂದು ತನ್ನ ತಲೆಯ ಮೇಲೆ ಸಿಂಪಡಿಸಿಕೊಳ್ಳುತ್ತಾನೆ. ಮತ್ತು ಅವರ ಸನಿಹ ಕುಳಿತ 'ನವವಿಧ ಭಕ್ತಿ'[4]ಯಿಂದ ಅವರ ಸೇವೆಯನ್ನು ಮಾಡುತ್ತಾನೆ. ಅನಂತರ ಉಳಿದ ಶೇಷಾನ್ನವನ್ನು ಪ್ರಸಾದವೆಂಬಂತೆ ಭಕ್ತಿಪೂರ್ವಕವಾಗಿ ತಾನು ಸ್ವೀಕರಿಸಿ ರಾಣಿಯರಿಗೂ ನೀಡುತ್ತಾನೆ.

ಈ ರೀತಿಯಾಗಿ ಮುನಿಭಿಕ್ಷೆ ಹಾಗೂ ಆಹಾರ ಪದ್ಧತಿಯ ಆಚರಣೆಯ ಸಂದರ್ಭವನ್ನು ಕವಿ ಸ್ವಾರಸ್ಯವಾಗಿ ತಿಳಿಸಿದ್ದಾನೆ.

೪.೧೦ ಉಡುಗೆ ತೊಡುಗೆ :

ಜೈನ ಸಮುದಾದವರು ಆರ್ಥಿಕ, ಸಾಮಾಜಿಕ, ರಾಜಕೀಯ ಹಿನ್ನೆಲೆಯಲ್ಲಿ ಉನ್ನತ ಸ್ತರದಲ್ಲಿ ಇದ್ದವರು. ತಮ್ಮ ತೊಡುಗೆಯನ್ನು ಗೌರವಯುತವಾಗಿ ಧರಿಸುತ್ತಿದ್ದರು. ಒಂದು ರೀತಿಯಲ್ಲಿ ಅದು ಶ್ರೀಮಂತವಾದುದೆಂದು ಹೇಳಬಹುದು. ಶ್ರಾವಕ – ಶ್ರಾವಕಿಯರು ಮತ್ತು ಪುರೋಹಿತ ವರ್ಗದವರು ಧರಿಸುತ್ತಿದ್ದ ಉಡುಗೆ ಆಭರಣಗಳು ಬೆಲೆ ಬಾಳುವಂತಹದಾಗಿತ್ತು. ಚದುರ ಚಂದ್ರಮನು ತನ್ನ ಕಾವ್ಯದಲ್ಲಿ ಜೈನರ ವಸ್ತ್ರಾಭರಣಗಳ ಕುರಿತು ಉಲ್ಲೇಖಿಸಿದ್ದಾನೆ.

ಪಟ್ಟೆ ಪೀತಾಂಬರ ಬಗೆ ಬಗೆ ಬಣ್ಣವ । ನುಟ್ಟು ಪಟ್ಟಿಯ ರವಕೆಗಳ ॥

ತೊಟ್ಟು ಸಿಂಗರವಾಗಿ ಬಗೆಯಿಂದ ಬಂದರು । ಕಟ್ಟಾಣಿವೆಂಗಳೊಗ್ಗಿನಲಿ ॥ ೧೭–೩೯

ಸಣ್ಣವಣ್ಣನ ನಿರಿವಿಡಿದುಟ್ಟು ಮೈಗೆಕೆ । ಮೈಣ್ಣೆಯ ನುಂಪಿಟ್ಟು ಕಚವ ॥

ಯೆಣ್ಣೆ ಗಂಟಕ್ಕಿ ಸಿಂಗರವಾಗಿ ಕೆಲಬರು । ಪಣ್ಣವಣ್ಣೆಯೊಳೈದಿದರು ॥ ೨–೧೦೭

೩. ಮುನಿಗಳು ಶ್ರಾವಕರ ಮನೆಗೆ ಬಂದು ಆಹಾರ ಸ್ವೀಕರಿಸುವ ಕ್ರಮ ಗೋಚರಿ ವೃತ್ತಿ ಅಥವಾ ಭ್ರಾಮರೀ ವೃತ್ತಿ. ಡಾ. ಎಸ್.ಡಿ ಶೆಟ್ಟಿ ತುಳುನಾಡಿನ ಜೈನಧರ್ಮ, ಪುಟ. ಸಂ. ೨೧೪

೪. ನವವಿಧ ಭಕ್ತಿ, ೧. ಪ್ರತಿಗ್ರಹ ೨. ಉಚ್ಛಾಸನ, ೩. ಪಾದಪ್ರಕ್ಷಾಲನ, ೪.ಪೂಜನ. ೫. ನಮಸ್ಕಾರ, ೬. ಮನಃಶುದ್ಧಿ, ೭ ವಚನಶುದ್ಧಿ, ೮. ಕಾಯಶುದ್ಧಿ, ೯. ಆಹಾರಶುದ್ಧಿ

ಕಾಲಂದುಗೆ ಕಟಿಸೂತ್ರ ಕಡಗ ಕಂಠ । ಮಾಲೆ ಮೂಗುತಿ ಕನ್ನಡಿಯ ॥

ಓಲೆಮುತ್ತಿನ ಬೊಟ್ಟನಿ[ಟ್ಟು] ಸಿಂಗರವಾಗಿ । ಬಾಲೆಯರೆಯ್ತಂದರಾಗ ॥ ೧೭–೩೭

ಎಂದು ಸುಂದರವಾಗಿ ಚಿತ್ರಣವನ್ನು ನೀಡಿದ್ದಾನೆ.

ಸ್ತ್ರೀಯರು ರೇಷ್ಮೆಯ ಸೀರೆ, ರವಕೆ ತೊಟ್ಟು ಅಲಂಕರಿಸಿಕೊಳ್ಳುತ್ತಿದ್ದರು. ಜೊತೆಗೆ ಸುಗಂಧ ದ್ರವ್ಯವನ್ನು ಬಳಸುತ್ತಿದ್ದರು. ತಲೆಯನ್ನು ನೀಟಾಗಿ ಬಾಚಿಕಟ್ಟಿ ಹೂವನ್ನಿಡುತ್ತಿದ್ದರು. ಮುತ್ತಿನ ಬೊಟ್ಟು, ಕಡಗ, ಕತ್ತಿಗೆ ಕಂಠಮಾಲೆ, ಕಿವಿಯ ಓಲೆ, ಕಾಲಂದುಗೆ, ಕಟಿಸೂತ್ರ ಮುಂತಾದ ಆಭರಣಗಳಿಂದ ಅಲಂಕೃತರಾಗಿ ವಿವಿಧ ಕಾರ್ಯಕ್ರಮಗಳಲ್ಲಿ, ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು.

ಪುರುಷರು ಧರಿಸುವ ಉಡುಪು. ಆಭರಣಗಳು ಕೂಡ ವೈಶಿಷ್ಟ್ಯಪೂರ್ಣವೆನ್ನಬಹುದು. ಬಿಳಿಯ ಪಂಚೆಯನ್ನು ಸೊಂಟಕ್ಕೆ ಸುತ್ತಿ, ಅದರ ಮೇಲೆ ನಿಲುವಂಗಿಯನ್ನು ಧರಿಸುತ್ತಿದ್ದರು. ಕೆಲವೊಮ್ಮೆ ಕಚ್ಚೆಯನ್ನು ಧರಿಸಿ, ಬಿಳಿಯ ಶಾಲನ್ನು ಹೆಗಲಿಗೇರಿಸುತ್ತಿದ್ದರು. ತಲೆಗೆ ಬಟ್ಟೆಯನ್ನು ಪೇಟದಂತೆ ಸುತ್ತುವುದು ಅಂದಿನ ಕಾಲದ ಜೈನರಲ್ಲಿ ರೂಢಿಯಲ್ಲಿತ್ತು.

ಜೊತೆಗೆ ಪುರುಷರು ಸೊಂಟಕ್ಕೆ ಸೇವಳ, ಕಿವಿಗೆ ಒಂಟಿ, ಬೆರಳಿಗೆ ಪವಿತ್ರ ಉಂಗುರ ಅಥವಾ ನವರತ್ನದ ಉಂಗುರವನ್ನು ಧರಿಸುತ್ತಿದ್ದರೆಂದು ಕವಿ ಹೇಳುತ್ತಾನೆ. ಪುರೋಹಿತ ವರ್ಗದವರು ಈ ಸಾಂಪ್ರದಾಯಿಕ ಉಡುಪನ್ನು ಧರಿಸುತ್ತಿದ್ದರು. ಅದರ ಚಿತ್ರಣವನ್ನು ನೀಡುತ್ತಾ

ಪಟ್ಟೆಯ ಹಚ್ಚಡ ಧೋತ್ರ ಮುಂಡಾಸನು । ಕೊಟ್ಟು ಕುಂಡಲ ಕಂಕಣವ ॥

ಕಟ್ಟಿದ ನವರತ್ನಮಯವಾದುದ ನಾಗ। ಪಟ್ಟದಿಂದ್ರಗೆ ಮುನಿರಾಯ ॥ ೧೭–೧೮

ಎಂದು ವರ್ಣಿಸುತ್ತಾನೆ. ಪುರೋಹಿತರು ಪಟ್ಟೆಯ ಹಚ್ಚಡ, ಧೋತ್ರ ಮುಂಡಾಸು ಧರಿಸುತ್ತಿದ್ದರೆಂದು ಭಾವಿಸಬಹುದು. ಜೊತೆಗೆ ಕಿವಿಗೆ ಕುಂಡಲ ಕೈಗೆ ಕಂಕಣ ಒಟ್ಟು ನವರತ್ನದ ಆಭರಣಗಳನ್ನು ಧರಿಸುತ್ತಿದ್ದರು.

ಹೀಗೆ ಅಂದಿನ ಕಾಲದ ಜೈನ ಧರ್ಮೀಯರ ಉಡುಪು, ಆಭರಣಗಳ ಬಗೆಗೆ ಕವಿಯು ಮಾಹಿತಿ ನೀಡಿದ್ದಾನೆ.

೪.೧೧ ಅಳಿಯ ಸಂತಾನ ಪದ್ಧತಿ :

ತುಳು ನಾಡಿನಲ್ಲಿ ಜೈನರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಇದನ್ನು ಕುರಿತಂತೆ ಚಂದ್ರಮನು ತನ್ನ ಕಾವ್ಯದಲ್ಲಿ ಉಲ್ಲೇಖಿಸಿದುದು ಗಮನಾರ್ಹವಾಗಿದೆ. ಪಾಂಡ್ಯರಾಜನು ತನ್ನ ಅರಮನೆಯಲ್ಲಿ ಊಟ ಮಾಡುವ ಸಂಗತಿಯನ್ನು ಪ್ರಸ್ತಾಪಿಸುತ್ತಾ,

ಅಳಿಯಂದಿರನು ಕುಮಾರ ವರ್ಗವನಾಗ । ಕಳುಹಿಸಿ ಕರೆಸಿ ಭೂಪಾಲ ೨–೧೨೦

ಅವರೊಡನೆ ಊಟ ಮಾಡಿದ ಸಂಗತಿಯನ್ನು ಪ್ರಸ್ತಾಪಿಸಿದ್ದಾನೆ. ತುಳುನಾಡಿನ ಜೈನ ಧರ್ಮೀಯರು ಅಳಿಯ

ಸಂತಾನ ಕಟ್ಟನ್ನು ಪಾಲಿಸುತ್ತಿದ್ದರೆಂದು ಭಾವಿಸಬಹುದು. ಅದರಲ್ಲಿ ಕಾರ್ಕಳದ ಭೈರರಸರು ಈ ಕಟ್ಟನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರೆಂದು ಹೇಳಬಹುದು.

೪.೧೨ ನಂಬಿಕೆಗಳು :

ಮನುಷ್ಯನ ಬದುಕು ನಂಬಿಕೆಯ ತಳಪಾಯದ ಮೇಲೆ ಭದ್ರವಾಗಿ ನಿಂತಿದೆ ಎನ್ನಬಹುದು. ಆತನು ತನ್ನ ಭಾವನೆಗಳಿಗೆ ನಂಬಿಕೆಯ ಬಲವನ್ನು ಕೊಟ್ಟು ಬದುಕುತ್ತಾನೆ ಮತ್ತು ಕೆಲಸ ಮಾಡುತ್ತಾನೆ. ಇಂತಹ ಹಲವಾರು ನಂಬಿಕೆಗಳಲ್ಲಿ 'ಕನಸು' ಕೂಡಾ ಒಂದು ಭಾಗವಾಗಿದೆ. ಕನಸಿನ ಮೂಲಕ ತನ್ನ ಬದುಕಿನ ಶುಭ-ಅಶುಭ ಫಲಗಳನ್ನು ವಿಶ್ಲೇಷಿಸುವ ಪದ್ಧತಿ ಹಿಂದಿನಿಂದಲೂ ನಡೆದು ಬಂದಿದೆ. ಜೊತೆಗೆ ಇದಕ್ಕೆ ಪೂರಕವಾಗಿ ಜೈನ ಪುರಾಣಗಳಲ್ಲಿ ಕನಸಿನ ಪ್ರಸ್ತಾಪ ಬಂದಿರುವುದು ಕುತೂಹಲವನ್ನು ಹುಟ್ಟಿಸುತ್ತದೆ.

ಕವಿಯು ತನ್ನ ಕೃತಿಯಲ್ಲಿ ಆದಿ ತೀರ್ಥಂಕರನ ತಾಯಿ ಗರ್ಭವತಿಯಾಗಿದ್ದಾಗ ಆಕೆಗೆ ಕನಸು ಬೀಳುವುದನ್ನು ಕುರಿತು ಉಲ್ಲೇಖಿಸಿದ್ದಾನೆ. ಕನಸಿಲ್ಲಿ ಆಕೆ ಒಂದು ಘನವಾದ ಮಣಿಗಂಟೆಯಿಂದ ಅಲಂಕಾರಗೊಂಡ ಆನೆಯನ್ನು, ಎತ್ತರದ ಶಿಖರದ ಮೇಲೆ ನಿಂತು ಗರ್ಜಿಸುವ ಸಿಂಹವನ್ನು, ಆನೆಗಳೆರಡು ಸ್ನಾನಗೈಯುವ ದೃಶ್ಯವನ್ನು, ಸುಗಂಧ ಬೀರುವ ಎರಡು ಹೂವಿನ ಹಾರಗಳನ್ನು, ಆಗಷ್ಟೇ ಉದಯಿಸುತ್ತಿದ್ದ ಪೂರ್ಣ ಚಂದ್ರನನ್ನು, ನೀರಿನಲ್ಲಿ ಈಜುವ ಎರಡು ಮೀನುಗಳನ್ನು, ಪೂರ್ಣ ಕುಂಭವನ್ನು, ತಾವರೆಯ ಹೂವುಗಳನ್ನು, ರತ್ನಖಚಿತವಾದ ಸಿಂಹಾಸನವನ್ನು, ದೇವೇಂದ್ರನ ಒಡ್ಡೋಲಗ, ಮುತ್ತು ರತ್ನದ ರಾಶಿಯನ್ನು ಇತ್ಯಾದಿ ಮಂಗಳಕರ ವಸ್ತುಗಳನ್ನು ಕಂಡು ಆಶ್ಚರ್ಯ ಪಡುತ್ತಾಳೆ. ಮಾರನೆಯ ದಿನ ತನ್ನ ಪತಿಯಲ್ಲಿ ಇದರ ಬಗ್ಗೆ ಪ್ರಶ್ನಿಸಿದಾಗ, ಆತನು ಕನಸುಗಳ ವಿಶ್ಲೇಷಣೆಯನ್ನು ನಡೆಸುತ್ತಾನೆ. ನಾಭಿರಾಜನು ಆಕೆಯ ಗರ್ಭದಲ್ಲಿ ನಾಲ್ಕು ದಿಕ್ಕುಗಳಿಗೂ ಕೀರ್ತಿಯನ್ನು ಹಬ್ಬಿಸುವ ತೀರ್ಥಂಕರನು ಹುಟ್ಟುತ್ತಾನೆ ಎಂದು ಸ್ವಪ್ನ ಫಲವನ್ನು ಕುರಿತು ಕವಿ ಉಲ್ಲೇಖಿಸಿದ್ದಾನೆ. ಇಂತದೇ ಮತ್ತೊಂದು ಪ್ರಸಂಗ ಭರತ - ಬಾಹುಬಲಿಯರು ಜನಿಸುವಾಗ ನಡೆದುದನ್ನು ಕವಿ ಉಲ್ಲೇಖಿಸಿದ್ದಾನೆ. ಯಶಸ್ವತೀ ದೇವಿ, ಪೂರ್ಣ ಚಂದ್ರನನ್ನು, ಪ್ರಜ್ವಲಿಸುವ ಸೂರ್ಯಮಂಡಲ, ಮೇರು ಶಿಖರ, ಕಲ್ಪವೃಕ್ಷಗಳನ್ನು ಕಾಣುತ್ತಾಳೆ. ಮತ್ತು ಆ ಕುರಿತು ಪತಿಯೊಡನೆ ಕೇಳಿದಾಗ ಆತ ಆಕೆಗೆ 'ಷಟ್ಖಂಡ ಮಂಡಲವನ್ನಾಳುವ ಭಾವಿ ಚಕ್ರವರ್ತಿಯು ಜನಿಸುತ್ತಾನೆ.' ಎಂದು ಹೇಳುವನು

ಅನಂತರ ಸುನಂದಾ ದೇವಿಯು ಗರ್ಭವತಿಯಾಗಿದ್ದಾಗ ಆಕೆಗೆ

> ಮದಗಜಂಗಳ ಕಾಳಗವ ನೋಡಬೇಕೆಂದು ಸುದತಿಗೆ ಪುಟ್ಟಿತು ಬಯಕೆ
>
> ಮುದದಿಂದ ಮಲ್ಲಯುದ್ಧವ ೬-೬೮

ಎರಡು ಮದಗಜಗಳ ಕಾಳಗ, ಹಾಗೂ ಮಲ್ಲಯುದ್ಧವನ್ನು ನೋಡುವ ಆಸೆ ಉಂಟಾಗುವುದು. ಮುಂದೆ

ಆಕೆಗೆ ಬಲಿಷ್ಠ ಪರಾಕ್ರಮಿಯಾದ ಬಾಹುಬಲಿಯು ಜನಿಸುತ್ತಾನೆ ಎನ್ನುವುದಕ್ಕೆ ಮುನ್ಸೂಚನೆಯಾಗಿದೆ. ಹೀಗೆ ಜೈನಸಂಪ್ರದಾಯದಲ್ಲಿ ರೂಢಿಯಲ್ಲಿದ್ದ ನಂಬಿಕೆಗಳನ್ನು, ಕಾವ್ಯ ಪ್ರಸಂಗಗಳಲ್ಲಿ ಕವಿಯು ಸಮಯೋಜಿತವಾಗಿ ಉಲ್ಲೇಖಿಸಿದ್ದಾನೆ.

೪.೧೩. ಶಕುನಗಳು :

ಜೈನ ಮತೀಯರಿಗೆ ನಂಬಿಕೆಯ ಜೊತೆಗೆ ಶಕುನಗಳ ಬಗ್ಗೆಯೂ ನಂಬಿಕೆ ಇರುವುದನ್ನು ಗಮನಿಸಬಹುದು. ಈ ಶಕುನಗಳು ಸಹ ಭವಿಷ್ಯದ ಶುಭ ಅಶುಭ ಫಲವನ್ನು ಸೂಚಿಸಲು ಸಹಾಯಕವಾದುವುಗಳು ಎಂದು ಭಾವಿಸಲಾಗಿದೆ. ಜೈನರ ಈ ನಂಬಿಕೆಯನ್ನು ಕವಿ ತನ್ನ ಕಾವ್ಯದಲ್ಲಿಯೂ ಬಳಸಿರುವುದನ್ನು ಗಮನಿಸಬಹುದು.

ರಾಜನು ತನ್ನ ಅರಮನೆಯ ಪಕ್ಕದಲ್ಲೇ ಗೊಮ್ಮಟ ಮೂರ್ತಿಯನ್ನು ಪ್ರತಿಷ್ಠಾಪಿಸುವುದೆಂದು ನಿರ್ಧರಿಸುತ್ತಾನೆ. ಆ ಸಂದರ್ಭದಲ್ಲಿ ಹೂ ಮಳೆ ಸುರಿದು ಶುಭ ಶಕುನವಾಯಿತು ಎಂದು ಕವಿ ಹೇಳುತ್ತಾನೆ.

ರಾಜನು ಧರ್ಮಕಾರ್ಯವನ್ನು ನೆರವೇರಿಸುವುದಾಗಿ ನೆನೆದ ತಕ್ಷಣ ಆತನ ಬಲಭುಜ ಅದುರುತ್ತದೆ. ಅದು ಒಳ್ಳೆಯ ಶಕುನವೆಂದು, ತಡಮಾಡದೇ ಧರ್ಮಕಾರ್ಯವನ್ನು ಕೈಗೊಂಡನು ಎಂದು ಕವಿ ಮತ್ತೊಂದು ನಿದರ್ಶನವನ್ನು ಕೊಡುತ್ತಾನೆ.

ಈ ಮೂಲಕ ಜೈನಧರ್ಮೀಯರಲ್ಲಿ ಶಕುನಗಳ ಬಗೆಗಿನ ನಂಬಿಕೆ ಅಪಾರವಾಗಿತ್ತೆಂದು ತಿಳಿದುಕೊಳ್ಳಬಹುದು.

****

ಅಧ್ಯಾಯ ೫

ಸಾಂಸ್ಕೃತಿಕ ವಿಶ್ಲೇಷಣೆ

ಚದುರ ಚಂದ್ರಮನ 'ಗೊಮ್ಮಟೇಶ್ವರ ಚರಿತೆ' ಕಾವ್ಯಕ್ಕೆ ಸಂಬಂಧಿಸಿದಂತೆ ಕೆಲವು ಮಹತ್ವದ ವಿಚಾರಗಳನ್ನು ಈ ಹಿಂದೆ ವಿಶ್ಲೇಷಿಸಿದೆವು. ಆ ಕಾವ್ಯದಲ್ಲಿ ಅಭಿವ್ಯಕ್ತಗೊಂಡಿರುವ ಇತರ ಸಾಂಸ್ಕೃತಿಕ ವಿಷಯಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ಕವಿ ತನ್ನ ಕಾವ್ಯದಲ್ಲಿ ಕಾರ್ಕಳದಲ್ಲಿ ರೂಢಿಯಲ್ಲಿದ್ದ ವೈದಿಕ ಪರಂಪರೆಗಿಂತ ತೀರಾ ಭಿನ್ನವಾದ ಜೈನಧರ್ಮ, ಅಲ್ಲಿನ ಸಂಸ್ಕೃತಿ, ಆಚಾರ–ವಿಚಾರ, ನಂಬಿಕೆ, ಸಂಪ್ರದಾಯಗಳನ್ನು ಗುರುತಿಸುತ್ತಾನೆ. ವೈದಿಕ ಆರಾಧನಾ ದೈವ, ದೇವರುಗಳು, ಆರಾಧನಾ ಕೇಂದ್ರಗಳು ಹಾಗೂ ವಿಧಿ–ವಿಧಾನಗಳಿಂದ ಸಂಪೂರ್ಣ ಭಿನ್ನವಾದ ಜೈನ ಆಚಾರ–ವಿಚಾರ ಇತ್ಯಾದಿ ಅಂಶಗಳನ್ನು ಕವಿ ದಾಖಲಿಸಿದ್ದಾನೆ. ಈ ಎಲ್ಲಾ ದೃಷ್ಟಿಯಿಂದ ಈ ಕೃತಿಯ ಸಾಂಸ್ಕೃತಿಕ ಅಧ್ಯಯನವು ಬಹಳ ಮುಖ್ಯವಾದುದು ಎನ್ನಬಹುದು.

೫.೧ ಕಲೆ :

ಜೈನ ಸಂಪ್ರದಾಯದಲ್ಲಿ ವಿಗ್ರಹಗಳನ್ನು ಶಿಲೆ, ಲೋಹ, ಮಣ್ಣು, ಅಮೂಲ್ಯ ರತ್ನ, ಸ್ಫಟಿಕ ಹೀಗೆ ಹಲವಾರು ರೀತಿಯ ವಸ್ತುಗಳಿಂದ ನಿರ್ಮಿಸಲಾಗುತ್ತದೆ.

ಶಿಲೆಯಿಂದ ಕೆತ್ತಿಸಿ ನಿರ್ಮಿಸಿದ ಬಾಹುಬಲಿಯ ಮೂರ್ತಿಯು ಜೈನ ಸಂಸ್ಕೃತಿಯನ್ನು ಉತ್ತುಂಗಕ್ಕೇರಿಸಿದೆ ಎಂದರೂ ತಪ್ಪಾಗಲಾರದು. ಬಾಹುಬಲಿಯ ಬದುಕಿನ ಧ್ಯೇಯ, ತ್ಯಾಗ ನಿರಹಂಕಾರ, ಸಮಾನತೆಯ ತತ್ವಗಳು, ಆತನ ಮುಖದಲ್ಲಿ ಅಭಿವ್ಯಕ್ತಗೊಂಡಿದೆ. ಆತನ ಅರ್ಧ ನಿಮೀಲಿತ ಕಣ್ಣುಗಳಲ್ಲಿ ಶಾಂತಿಯ ಸಂದೇಶವು ಮಿಂಚುತ್ತಿದೆ. ಇಂತಹ ಭವ್ಯ ಮೂರ್ತಿಯ ಕೆತ್ತನೆಯು ಜೈನ ಧರ್ಮದ ಶಿಲ್ಪ ಕಲೆಯ ಔನತ್ಯಕ್ಕೆ ಸಾಕ್ಷಿಯಾಗಿದೆ. ಕವಿಯು ಉಲ್ಲೇಖಿಸಿರುವ ಬಸದಿಗಳಲ್ಲಿ ನೇಮೀಶ್ವರ ಬಸದಿಯನ್ನು ವಿಶೇಷವಾಗಿ ಗಮನಿಸಬೇಕಾಗಿದ್ದು, ಇದು ಜೈನ ವಾಸ್ತು ಶಿಲ್ಪಕ್ಕೆ ಉತ್ತಮ ನಿದರ್ಶನವಾಗಿದೆ. ಸಾಮಾನ್ಯವಾಗಿ ಬಸದಿಗಳ – ಸಮವಸರಣದ ಪ್ರತೀಕಗಳಾಗಿದ್ದು ಗರ್ಭಗೃಹದ ಕಮಲ ಪೀಠದ ಮೇಲೆ, ತೀರ್ಥಂಕರನ ವಿಗ್ರಹವನ್ನು ಸ್ಥಾಪಿಸುತ್ತಾರೆ. ಅದರ ಎದುರುಗಡೆ ಏಕಶಿಲೆಯಿಂದ ನಿರ್ಮಾಣಗೊಂಡ ಮಾನಸ್ತಂಭವಿದೆ. ಇದು ಸುಮಾರು ೫೫.೫ ಅಡಿ ಎತ್ತರವಿದ್ದು ದಕ್ಷಿಣ ಭಾರತದಲ್ಲಿ ಅತ್ಯಂತ ಎತ್ತರದ ಮಾನಸ್ತಂಭವೆಂಬ ಖ್ಯಾತಿಗೆ ಅರ್ಹವಾಗಿದೆ. ಚದುರ ಚಂದ್ರಮನು, ಇದನ್ನು ವರ್ಣಿಸುತ್ತ

ಮಣಿಮಯ ಮಾನಸ್ತಂಭ ಗೋಪುರ ಶಾಲ। ಝಣ ಝಣರೆಂಬ ಘಂಟೆಗಳು ॥
ಗಣನೆಯಿಲ್ಲದ ದೇವ ದುಂದುಭಿಗಳ ಸಂ।ದಣೆಯಿಂದ ಸೊಬಗ ನಾಂ೫ಹವು ॥ ೧–೫೨

ಎಂದು ಮಾನಸ್ತಂಭದ ಜೊತೆಗೆ ಗೋಪುರ, ಘಂಟೆಗಳನ್ನು ಕುರಿತು ಉಲ್ಲೇಖಿಸುತ್ತಾನೆ. ಈ ಮಾನಸ್ತಂಭವನ್ನು ವಾಸ್ತು ಶಿಲ್ಪದ ಹಿನ್ನೆಲೆಯಲ್ಲಿ ಹೇಳುವುದಾದರೆ, ಅದು ಆಯಾ ತೀರ್ಥಂಕರರ ಎತ್ತರವನ್ನು ಅವಲಂಬಿಸಿದೆ ಎಂದು ಅಧ್ಯಯನದಿಂದ ತಿಳಿದು ಬರುತ್ತದೆ.

ಇನ್ನು ಬಸದಿಗಳಲ್ಲಿರುವ ಜಿನ ಬಿಂಬಗಳು, ಯಕ್ಷ ಯಕ್ಷಿಯರು ಸರಸ್ವತಿ, ಅಷ್ಟಮ ನಂದೀಶ್ವರ, ಶ್ರುತ, ಗಣಧರರಪಾಛ/ಬ್ರಹ್ಮದೇವ ಇತ್ಯಾದಿ ವಿಗ್ರಹಗಳು ಮೂರ್ತಿಶಿಲ್ಪಗಳ ವೈಶಿಷ್ಟ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

೫.೨ ಸಂಗೀತ ಸಾಹಿತ್ಯ :

ಜೈನಧರ್ಮವು ಇಲ್ಲಿನ ಕಲೆ, ಸಾಹಿತ್ಯ, ಸಂಗೀತ, ನೃತ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡಿದುದನ್ನು ಚಂದ್ರಮನ ಉಲ್ಲೇಖಗಳಿಂದ ಗುರುತಿಸಬಹುದಾಗಿದೆ.

ಕವಿ ಪಾಂಡ್ಯ ನೃಪಾಲನ ಆಸ್ಥಾನವನ್ನು ವರ್ಣಿಸಿ, ಅಲ್ಲಿ ನಡೆದ ಕಲಾಪಗಳನ್ನು ಪರಿಚಯಿಸುವಾಗ ಅನೇಕ ಸಂಗತಿಗಳನ್ನು ನಮ್ಮ ಗಮನಕ್ಕೆ ತರುತ್ತಾನೆ. ರಾಜನು ರಾಜಸಭೆಯಲ್ಲಿ ಸಾಂಪ್ರದಾಯಿಕವಾಗಿ ಕೆಲವು ಕಾರ್ಯಕ್ರಮಗಳನ್ನು ನಿಯೋಜಿಸಿದ್ದನು. ಇದು ಆತನು ಕಲೆ, ಸಾಹಿತ್ಯ, ನೃತ್ಯ, ಸಂಗೀತ, ಜಟ್ಟಿಕಾಳಗ, ಕುಸ್ತಿ ಹೀಗೆ ಒಟ್ಟು ಶಾಸ್ತ್ರೀಯ ಹಾಗೂ ಜನಪದ ಕಲೆಗಳಿಗೆ ನೀಡಿದ್ದ ಪ್ರೋತ್ಸಾಹ ಮಹತ್ವವನ್ನು ಕುರಿತು ತಿಳಿಸುತ್ತವೆ. ಆ ಕಾರಣಕ್ಕಾಗಿಯೇ ಪಾಂಡ್ಯೇಂದ್ರನು 'ನವನಾಟಕ ಶಾಲೆಯರಾಯ'(೨-೧೨)ಎಂಬು ಬಿರುದಿಗೆ ಪಾತ್ರನಾಗಿದ್ದನು.

ಅವನ ಅನಂತರ ಕಾರ್ಕಳವನ್ನಾಳಿದ ಭೈರರಸನೂ ಸಹ ಕಲೆ, ಸಂಗೀತ, ನಾಟ್ಯ, ನಾಟಕಗಳಿಗೆ ಪ್ರೋತ್ಸಾಹ ನೀಡಿದ್ದನು. ಆತನು ಸ್ವತಃ ಇವುಗಳಲ್ಲಿ ಆಸಕ್ತಿ ಹೊಂದಿದ್ದನೆಂದೂ, ಆ ಕಾರಣಕ್ಕಾಗಿ ಭೈರರಸನು 'ಸರಸ ಸಂಗೀತ ಸಾಹಿತ್ಯ ಕಲಾಧರ'(೧೬-೯) ಎಂಬ ಬಿರುದಿಗೆ ಪಾತ್ರನಾಗಿದ್ದ ನೆಂದೂ ಕವಿ ತಿಳಿಸುತ್ತಾನೆ.

ಭರತ –ಬಾಹುಬಲಿಯರ ಕಥಾ ಸಂದರ್ಭದಲ್ಲಿ ಅನೇಕ ವಿಚಾರಗಳು ಪ್ರಸ್ತಾಪಿತವಾಗಿವೆ. ಕವಿ ಬಾಹುಬಲಿಯ ಆಸಕ್ತಿಯನ್ನು ಕುರಿತು ಹೇಳುತ್ತಾ

ಸಂಗೀತ ಸಾಹಿತ್ಯ ಭರತ ನಾಟಕ ಕಾವ್ಯ। ಶೃಂಗಾರ ಶಾಸ್ತ್ರಗೋಷ್ಠಿಯೊಳು॥
ಅಂಗಜ ನಿರುತಿರ್ದಯೆಡಬಲದೊಳು ಮೋಹ।ನಾಂಗಿಯರಿಕ್ಕೆ ಚಾಮರವ ॥೧೨-೭೩

ಎಂದು ಪರಿಚಯಿಸುತ್ತಾನೆ. ಸಂಗೀತ, ಸಾಹಿತ್ಯ, ಭರತನಾಟ್ಯ, ನಾಟಕ, ಕಾವ್ಯ, ಶಾಸ್ತ್ರಗೋಷ್ಠಿಗಳಲ್ಲೇ ಬಾಹುಬಲಿಯು ನಿರತನಾಗಿದ್ದು, ಅದು ಆತನಿಗೆ ಬಲು ಪ್ರಿಯವಾದ ವಿಷಯವಾಗಿ ತ್ತಿದೆನ್ನುವುದನ್ನು ಈ ಮೂಲಕ ತಿಳಿದು ಕೊಳ್ಳಬಹುದು.

ಇಮ್ಮಡಿ ಭೈರರಸನು ಕಾರ್ಕಳ ನಗರದಲ್ಲಿ ಚತುರ್ಮುಖ ಬಸದಿಯೊಂದನ್ನು ನಿರ್ಮಿಸುತ್ತಾನೆ. ಇದರ ವಿಶೇಷತೆ

ತಿಳಿಸುತ್ತಾ

ಜಿನರಾಸ್ಥಾನ ಮಂಟಪವನು ಭವ್ಯರಿ| ಗನುದಿನ ತೋರಿಸಲೆಂದು ||

ಧನದ ನಿರ್ಮಿಸಿದ ಸಮವಸರಣವಪೋಲ್ತು | ಜಿನಚತುರ್ಮುಖ ಗೃಹವಿಹುದು || ೧–೧೧೭

ಎನ್ನುತ್ತಾನೆ. ಸಾಮಾನ್ಯವಾಗಿ 'ಚತುರ್ಮುಖ' ಎಂದರೆ ಬಸದಿಯ ಗರ್ಭಗೃಹಕ್ಕೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಗಳಿದ್ದು ಪ್ರತಿಯೊಂದು ದ್ವಾರದ ಒಳಗಡೆಗೆ ಜಿನಬಿಂಬ ಇರುತ್ತದೆ. ಅಂದರೆ, ಒಂದೇ ಪೀಠದಲ್ಲಿ ನಾಲ್ಕು ದಿಕ್ಕುಗಳಿಗೆ ಮುಖ ಮಾಡಿರುವ ನಾಲ್ಕು ತೀರ್ಥಂಕರರ ಪ್ರತಿಮೆಗಳನ್ನು ಸ್ಥಾಪಿಸುತ್ತಾರೆ. ಇದು ತೀರ್ಥಂಕರನ ಸಮವಸರಣವನ್ನು ಚೆನ್ನಾಗಿ ಹೋಲುತ್ತದೆ. ಏಕೆಂದರೆ, ಸಮವಸರಣ ಮಂಟಪದಲ್ಲಿ ತೀರ್ಥಂಕರನು ಕುಳಿತಾಗ ನಾಲ್ಕು ದಿಕ್ಕುಗಳಲ್ಲಿ ಕುಳಿತ ಜನರಿಗೆ ಆತನ ದರ್ಶನವಾಗುತ್ತದೆ. ಇದು ತೀರ್ಥಂಕರನ ಯೋಗ – ಭೋಗ ಶಕ್ತಿಯ ಮತ್ತು ಕೇವಲ ಜ್ಞಾನದ ಮಹಿಮೆಯಾಗಿದೆ. ಹೀಗಾಗಿ ಭೈರರಸನು ಆ ಮೂಲ ಕಲ್ಪನೆಯನ್ನು ಸಾಕಾರಗೊಳಿಸಲು ಚತುರ್ಮುಖ ಬಸದಿಯ ನಿರ್ಮಾಣ, ಒಂದು ವಿಶಿಷ್ಟ ವಾಸ್ತುಕಲೆಯಾಗಿ ನಿಂತಿದೆ. ಕಾರ್ಕಳದ ಜೈನ ಸಂಸ್ಕೃತಿಯ ಹಿರಿಮೆಯನ್ನು ಹೇಳುವ ರೀತಿಯಲ್ಲಿ ಎರಡು ಚತುರ್ಮುಖ ಬಸದಿಗಳು ಕಾರ್ಕಳದಲ್ಲಿರುವುದು ಚಾರಿತ್ರಿಕವಾಗಿ ಗಮನಿಸಬಹುದಾಗಿದೆ.

ಗೊಮ್ಮಟ ಸ್ವಾಮಿಗೆ ವಿಧಿಪೂರ್ವಕ ಪ್ರತಿಷ್ಠಾ ಕಾರ್ಯವನ್ನು ನಡೆಸಿದಾಗ ಅದನ್ನು ವೀಕ್ಷಿಸಲು ನೆರೆದ ಶ್ರಾವಕ ಸಮುದಾಯವನ್ನು ಹೀಗೆ ವರ್ಣಿಸಿದ್ದಾನೆ.

ಪರಮ ಭವ್ಯರ ಸಂಘವೊಂಭತ್ತು ಲಕ್ಷ ಸಾ|ಸಿರ ತಪಸ್ವಿಗಳ ಸಮೂಹ||

ನೆರೆದುದು ಗುಮ್ಮಟ ಸ್ವಾಮಿಯುತ್ಸಹದೊಂದು | ಸಿರಿಯನದೇನ ಬಣ್ಣಿಪೆನು || ೩–೧೦೯

ಆ ಕಾಲದಲ್ಲಿ ಭವ್ಯರು ತಪಸ್ವಿಗಳು ಒಟ್ಟು ಸೇರಿ ಸುಮಾರು ೯,೦೦,೦೦೦ ಜನ ಸೇರಿದರೆಂದು ಹೇಳಿರುವುದು ಸ್ವಲ್ಪ ಮಟ್ಟಿಗೆ ಉತ್ಪ್ರೇಕ್ಷೆ ಎನಿಸಿದರೂ ಆ ಕಾಲದಲ್ಲಿ ಜೈನ ಸಮುದಾಯ ವಿಶೇಷ ಸಂಖ್ಯೆಯಲ್ಲಿತ್ತೆಂಬುದನ್ನು ನಾವು ಅರಿತುಕೊಳ್ಳಬಹುದು. ಏಕೆಂದರೆ, ಈಗಿನ ಕಾಲದ ಜೈನರ ಸಂಖ್ಯೆಯನ್ನು ವಿಶ್ಲೇಷಿಸಿದಾಗ ಕರ್ನಾಟಕ, ತುಳುನಾಡಿನ ಒಟ್ಟೂ ಜನಸಂಖ್ಯೆಯ ಶೇಕಡಾ ೧ ರಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಗಮನಿಸಬೇಕಾದ ಅಂಶವಾಗಿದೆ.

ಜಿನಪತಿಯ ನಿತ್ಯೋತ್ಸವ ಪೂಜೆಗಳು ಸಾಂಗವಾಗಿ ನಡೆಯಬೇಕೆಂದು ಅಪೇಕ್ಷಿಸಿ ಭೂದಾನವನ್ನು ಅರಸ ನಡೆಸುತ್ತಾನೆ.

ಆ ಜಿನಪತಿಯ ನಿತ್ಯೋತ್ಸವ ಮಂಗಲ | ಪೂಜೆಗೆ ಗ್ರಾಮ ಸೀಮೆಗಳ ||

ರಾಜಿಪ ಶಾಸನಾಂಕಿತವ ಮಾಡಿಸಿ ತಾನು | ರಾಜದಾರೆಯನೆರ ಕೊಟ್ಟ|| ೪–೨

ಪಂಚಮಹಾವಾದ್ಯ ಮೂರು ಹೊತ್ತಿನ ಪೂಜೆ। ಪಂಚಕಜ್ಜಾಯ ಪಾಯಸದಿಂ॥

ಕುಂಚದ ಹೆಂಗಳು ಪಾತ್ರ ಭೋಗಗಳು। ಪಂಚ ಶ್ರೀ ಬಲಿ ಮುಂತಾದ ॥ ೪–೩

ವಿನಿಯೋಗಕೆ ಕಟ್ಟು ಮಾಡಿಸಿದನು ಮುಂದೆ । ದಿನದಿನ ನಡೆಸುವಂದದೊಳು ॥

ವಿನಯವಾರಿಧಿ ಚಂದ್ರವಿಭವ ದೇವೇಂದ್ರ ಮಾತ್ರನು ಪಮ ಪಾಂಡ್ಯರಾಜೇಂದ್ರ॥ ೪–೪

ಇಲ್ಲಿ ಬಸದಿಗಳಲ್ಲಿ ಪಂಚಮಹಾವಾದ್ಯಗಳ ಸೇವೆಯ ಜೊತೆಗೆ ತ್ರಿಕಾಲದಲ್ಲಿ ಜೈನ ಪೂಜೆ, ಶ್ರೀಬಲಿವಿಧಾನ ಮುಂತಾದವುಗಳು ನಡೆಯುತ್ತಿದ್ದುದನ್ನು ನಾವು ಗಮನಿಸಬಹುದು.

ಅರಸರ ಅರಮನೆಯಿಂದ ಸ್ವಲ್ಪ ದೂರದಲ್ಲಿ ಲಲಿತಕೀರ್ತಿಗಳ ಮಠವಿದ್ದು ಅಲ್ಲಿ **ಧಾರ್ಮಿಕ ವಿದ್ಯಾಭ್ಯಾಸ,** ಶ್ರಾವಕರಿಗೆ ಧರ್ಮೋಪದೇಶ ಮುಂತಾದವು ನಡೆಯುತ್ತಿದ್ದುವೆಂದು ಚಂದ್ರಮನು ನೀಡುವ ವಿರಗಳಿಂದ ನಾವು ತಿಳಿದುಕೊಳ್ಳಬಹುದು.

ಈ **ಲಲಿತಕೀರ್ತಿ ಭಟ್ಟಾರಕರು,** 'ಪನಸೋಗೆ'ಯ ಮೂಲದವರು. ಅಲ್ಲಿಂದ ಒಂದು ಕವಲು ಹೊಂಬುಜಕ್ಕೆ ಹೋಗಿ ನೆಲೆ ನಿಂತಿತ್ತು. ಹುಂಬುಚದಲ್ಲಿ ರಾಜ್ಯಭಾರ ನಡೆಸಿದ ಶಾಂತರಸರು ಕಳಸಕ್ಕೆ ಬಂದು ನೆಲೆಸಿದಾಗ ಈ ಭಟ್ಟಾರಕರು ಅವರ ಜೊತೆಗೆ ಕಳಸಕ್ಕೆ ಬಂದು ನೆಲೆಯೂರಿದರು. ಅನಂತರ ರಾಜಕೀಯ ಒತ್ತಡದಿಂದಾಗಿ ಅಲ್ಲಿಯ ಶಾಂತರಸರು ಘಟ್ಟದ ಕೆಳಗಿಳಿದು ಬಂದು ಕಾರ್ಕಳದಲ್ಲಿ 'ಭೈರರಸ' ಎಂಬ ಉಪಾದಿಯೊಂದಿಗೆ ಆಡಳಿತ ಸ್ಥಾಪಿಸಿದಾಗ, ಈ ಲಲಿತಕೀರ್ತಿಗಳು ಕಾರ್ಕಳಕ್ಕೆ ಬಂದು ನೆಲೆನಿಂತರು. ಹೀಗಾಗಿ ತುಳುನಾಡಿನ ಜೈನಧರ್ಮದ ಪ್ರಚಾರ ಕಾರ್ಯದಲ್ಲಿ ಈ ಭಟ್ಟಾರಕರು ವಹಿಸಿದ ಪಾತ್ರ ಹಿರಿದಾದುದು. ಇಲ್ಲಿ ನಡೆದ ಜೈನಸಾಹಿತ್ಯ ನಿರ್ಮಾಣ, ಕಲೆ, ವಾಸ್ತು, ಮೂರ್ತಿಶಿಲ್ಪ ಮುಂತಾದವುಗಳ ನಿರ್ಮಾಣ ಅಭಿವೃದ್ಧಿಗೆ ಪ್ರೇರಣೆ ನೀಡಿದವರು ಇಲ್ಲಿಯ ಲಲಿತಕೀರ್ತಿ ಭಟ್ಟಾರಕರೆಂದು ನಾವು ಭಾವಿಸಬಹುದು.

ಭೈರರಸರ ಕಾಲದಲ್ಲಿ **ವ್ಯಾಪಾರೋದ್ಯಮಗಳು** ಚೆನ್ನಾಗಿ ನಡೆಯುತ್ತಿದ್ದವು. ಕಾವ್ಯಾ ಒಳಗಡೆ ಬೇರೆ ಬೇರೆ ಸಂದರ್ಭಗಳಲ್ಲಿ ಇವುಗಳ ಬಗ್ಗೆ ಮಾಹಿತಿಗಳನ್ನು ನೀಡಿದ್ದಾನೆ. ಉದಾ. ವಿಜಯನಗರ ಕಾಲದ ವೈಭವವನ್ನು ನೆನಪಿಸುವ ಮುತ್ತು, ರತ್ನ, ಹವಳ, ಮುಂತಾದ ಅಮೂಲ್ಯ ವಸ್ತುಗಳನ್ನು ಬೀದಿ ಬೀದಿಗಳಲ್ಲಿ ಮಾರುತ್ತಿದ್ದ ದೃಶ್ಯಗಳನ್ನು ವಿದೇಶಿ ಪ್ರವಾಸಿಗರ ವಿವರಗಳನ್ನು ನಮಗೆ ನೀಡಿದ್ದಾನೆ. ವಿಜಯನಗರೋತ್ತರ ಕಾಲದಲ್ಲಿ ತುಳುನಾಡಿನ ಕಾರ್ಕಳದಲ್ಲೂ ಈ ವೈಭವ ಮುಂದುವರಿದು ಬಂದಿತ್ತೆಂಬುದು ಕವಿಯ ವರ್ಣನೆಗಳಿಂದ ಸ್ಪಷ್ಟವಾಗುತ್ತದೆ. ಮಸ್ತಕಾಭಿಷೇಕ ಸಂದರ್ಭದಲ್ಲಿ ಜಾತ್ರ ನಡೆಯುತ್ತದೆ. ಇದರ ಬೇರೆ ಬೇರೆ ನೆಲೆಗಳ ಮಾಹಿತಿಗಳನ್ನು ಕೊಡುವುದರ ಜೊತೆಗೆ, ವ್ಯಾಪಾರಕ್ಕಾಗಿ ಆಗಮಿಸಿದ ವಣಜಿಗರು, ವಣಿಕರು ಯಾವ ರೀತಿಯ ವಸ್ತುಗಳನ್ನು ಮಾರುತ್ತಿದ್ದರೆಂಬುದನ್ನು ಹೀಗೆ ಉಲ್ಲೇಖಿಸಿದ್ದಾನೆ.

ಜವಳಿಯಂಗಡಿ ಮುತ್ತಿನಂಗಡಿ ರನ್ನದ । ಪವಳದಂಗಡಿಗಳಲ್ಲಲ್ಲಿ ॥

ವಿವಿಧ ತಾಮ್ರದ ಕಂಚಿನುಪಕರಣಂಗಳ । ನವನವ ಪಸರವೊಪ್ಪಿಹವು ॥ ೧೬-೧೦೭

ಅಕ್ಕಿಯ ರಾಸಿ ಮೇಲೋಗರ ಕಾಯ್ಗಳ । ಚೊಕ್ಕಟವಾದ ರಾಸಿಗಳು ॥

ಇಕ್ಕಲದಲಿ ತುಂಬಹವೆಲ್ಲ ನೋಡಲು । ದಿಕ್ಕು ದಿಕ್ಕಿನ ಬೀದಿಗಳೊಳು ॥ ೧೬-೧೦೮

ಎಂದು ಆ ಕಾಲದ ವೈಭವವನ್ನು ದಾಖಲುಗೊಳಿಸಿದ್ದಾನೆ. ಇದರಿಂದ ಕಾರ್ಕಳದ ಆರ್ಥಿಕ ಸ್ಥಿತಿ ಉತ್ತಮವಾಗಿದ್ದು, ಕರ್ನಾಟಕದ ಇತರ ಭಾಗಗಳಿಂದ ವ್ಯಾಪಾರಸ್ಥರು ಇಲ್ಲಿಗೆ ಬರುತ್ತಿದ್ದರೆಂಬುದನ್ನು ಅರ್ಥೈಸಿಕೊಳ್ಳಬಹುದು.

ಜೈನ ಪರಿಕಲ್ಪನೆಯಲ್ಲಿ **'ಸರ್ವಾಹ್ಣಯಕ್ಷ'** ನ ಸ್ಥಾನ ವಿಶಿಷ್ಟವಾದುದು. ತೀರ್ಥಂಕರನ ಯಕ್ಷಯಕ್ಷಿಯರು, ಶಾಸನ ದೇವತೆಗಳು ಧರ್ಮಕಾರ್ಯದಲ್ಲಿ ಭಾಗವಹಿಸುವಂತೆ, ಸರ್ವಾಹ್ಣಯಕ್ಷನು ಭಾಗವಹಿಸುತ್ತಾನೆ. ತೀರ್ಥಂಕರನ ಸಮವಸರಣ ಸಂದರ್ಭದಲ್ಲಿ ಧರ್ಮೋಪದೇಶವನ್ನು ಕೇಳಲು ಬರುವಂತೆ, ಜಗತ್ತಿನಲ್ಲಿರುವ ಸಮಸ್ತ ಜೀವಿಗಳನ್ನು ಆಹ್ವಾನಿಸುವ ಸಂಪ್ರದಾಯವಿದೆ. ಈ ಕೆಲಸವನ್ನು ನಿರ್ವಹಿಸುವವನು ಸರ್ವಾಹ್ಣ ಯಕ್ಷ. ಚದುರ ಚಂದ್ರಮನು ಕಾರ್ಕಳದಲ್ಲಿ ನಡೆದ ವಿವಿಧ ಧಾರ್ಮಿಕ ಕಲಾಪಗಳನ್ನು ವರ್ಣಿಸುವಾಗ, ಈ ಸರ್ವಾಹ್ಣ ಯಕ್ಷವನ್ನು ಹೆಸರಿಸುತ್ತಾನೆ. ಪಲ್ಲಕ್ಕಿಯಲ್ಲಿ ಆತನ ಬಿಂಬವಬನ್ನಿಟ್ಟು ಮೆರವಣಿಗೆ ನಡೆಸಿದರೆಂದು ಸೂಚಿಸುತ್ತಾನೆ. ಸರ್ವಾಹ್ಣಯಕ್ಷನ ಪ್ರತಿಮೆಯು ಆನೆಯ ಮೇಲೆ ಕುಳಿತಂತಿದ್ದು ಚತುರ್ಭುಜವನ್ನು ಹೊಂದಿದೆ. ಹಿಂಭಾಗದ ಎರಡು ಕೈಗಳಲ್ಲಿ ೧೬ ಅರಗಳುಳ್ಳ ಧರ್ಮಚಕ್ರವನ್ನು ಎತ್ತಿ ಹಿಡಿದಿರುತ್ತದೆ.

ಇಂತಹ ಬಿಂಬವೊಂದನ್ನು ಭೈರರಸರ ಕಾಲದಲ್ಲಿ ಉಪಯೋಗಿಸಲಾಗಿತ್ತೆಂದು ಊಹಿಸಬಹುದು. ಮೆರವಣಿಗೆಯ ಸಂದರ್ಭದಲ್ಲಿ ಪಂಚವಾದ್ಯಗಳೊಂದಿಗೆ ಜನಸಮೂಹವೆಲ್ಲ ಸೇರಿ,

ಪಲ್ಲಕ್ಕಿಯೊಳು ಸರ್ವಾಣ್ಣ್ಯಕ್ಷನನಿಟ್ಟು । ಸಲ್ಲೀಲೆಯಿಂಪುರದೊಳಗೆ ॥

ಪಲ್ಲವ ಸತ್ತಿಗೆ ಧರ್ಮ ಚಕ್ರಧ್ವಜ । ಯಲ್ಲಲ್ಲಿ ಯಾಡುವ ಪಾತ್ರ ॥ ೧೭-೨೮

ಸರ್ವಾಹ್ಣ ಯಕ್ಷನ ಮೆರವಣಿಗೆಯನ್ನು ನಡೆಸುವ ವಿವರಗಳನ್ನು ಕವಿ ನೀಡಿದ್ದಾನೆ.

ವೃಷಭದೇವನ ಪಂಚಕಲ್ಯಾಣ ಕಥೆಯನ್ನು ನಿರೂಪಿಸುವಾಗ, **ದಿವ್ಯ ಧ್ವನಿ**ಯ ಉಲ್ಲೇಖ ಬರುತ್ತದೆ. ದಿವ್ಯಧ್ವನಿ ಎಂದರೆ ಕೇವಲ ಜ್ಞಾನ ದಿವ್ಯಜ್ಞಾನ ಪಡೆದ ತೀರ್ಥಂಕರನ ಪವಿತ್ರ ಧ್ವನಿಯಾಗಿದೆ. ತೀರ್ಥಂಕರನ ಸಮವಸರಣ ಸಭಾಮಂಟಪದಲ್ಲಿ ಕುಳಿತು ಲೋಕದ ಸಮಸ್ತ ಜೀವಿಗಳಿಗೆ ಧರ್ಮೋಪದೇಶವನ್ನು ಗೈಯುತ್ತಾನೆ. ಆಗ ಈ ದಿವ್ಯಧ್ವನಿ ಮೊಳಗುತ್ತದೆ. ಅದು 'ಓಂಕಾರ' ಸ್ವರೂಪಿಯಾಗಿದ್ದು ಸಮಸ್ತ ಜೀವಿಗಳಿಗೂ ಅವರ ಭಾಷೆಯಲ್ಲೆ ತರ್ಜುಮೆಗೊಂಡು, ಅವರಿಗೆ ಅರ್ಥವಾಗುತ್ತದೆ. ಇದು ಜೈನಧರ್ಮದ ಒಂದು ವಿಶಿಷ್ಟ ಕಲ್ಪನೆಯಾಗಿದೆ. ಇದನ್ನು ಕವಿ

ಮಧುರ ಮನೋಹರ ತಾಲ್ವೋಷ್ಠ ಸ್ಪಂದನ । ವಿಧುರಿತ ಹಿತದೋಷರಹಿತ ॥

ಬುಧನುತ ದಿವ್ಯಧ್ವನಿಯು ದಯಿಸಿತಂಬು । ನಿಧಿಯಂತೆ ಗಂಭೀರ ಘೋಷೆ ॥ ೮-೧೦೮

ದಿವ್ಯ ಧ್ವನಿಯನ್ನು ಕುರಿತು ಉಲ್ಲೇಖಿಸುತ್ತಾನೆ.

ಕಾವ್ಯದಲ್ಲಿ **ಧವಳ ಶೋಭಾನ**ದ ಉಲ್ಲೇಖ ಅನೇಕ ಕಡೆಗಳಲ್ಲಿ ಕಂಡು ಬರುತ್ತದೆ. ಇದು ಜೈನ ಪರಂಪರೆಯ ಒಂದು ವಿಶಿಷ್ಟ ಕಾವ್ಯರೂಪವಾಗಿದೆ. ಇದನ್ನು ಜೈನ ಜನಪದ ಸಾಹಿತ್ಯದ ಮೂಲದಲ್ಲಿಯೂ ಗುರುತಿಸುವ ಪ್ರಯತ್ನ ನಡೆದಿದೆ. ಕವಿ ಈ ಧವಳಶೋಭಾನವನ್ನು ಕುರಿತು.

ಕಳಸ ಕನ್ನಡಿಯಾಂತು ಮುತ್ತೈದೆವೆಂಗಳು । ತಳಿಯ ನೆಳಲೊಳೆಯ್ದಿದರು ॥

ವಿಳಸಿತ ಧವಳ ಶೋಭಾನ್ಗಳ ಪಾಡುತ । ಕಳಹಂಸ ಗತಿಯೊಳೆಯ್ದಿದರು ॥ ೧೭-೧೪

ಈ ಮೂಲಕ ತಿಳಿಸುತ್ತಾನೆ.

ತಾಳಮದ್ದಳೆಯೆಂಬುದು ತುಳುನಾಡಿನಲ್ಲಿ ಪ್ರಚಲಿತದಲ್ಲಿರುವ ಯಕ್ಷಗಾನದ ಒಂದು ಪ್ರಭೇದ. ಇದರ ಉಲ್ಲೇಖವನ್ನು ಕವಿ ಮಾಡಿರುವುದು ಸ್ವಾರಸ್ಯಕರವಾಗಿದೆ. ಮರುದೇವಿ, ನಾಭಿರಾಜ ಇವರ ಪ್ರಸಂಗವನ್ನು ಕುರಿತು ಪ್ರಸ್ತಾಪಿಸುತ್ತಾ, ಮರುದೇವಿಗಾಗಿ ಕೆಲವು ಸಾಂಸ್ಕೃತಿಕ ಕಲಾಪಗಳು ನಡೆದಂತೆ ಹೇಳುತ್ತಾನೆ. ಅದರಲ್ಲಿ ತಾಳಮದ್ದಳೆಯೂ ಒಂದಾಗಿತ್ತೆಂದು (೫-೧೫) ಕವಿ ವರ್ಣಿಸುತ್ತಾನೆ.

ವಿವಿಧ ವೇಷಧಾರಿಗಳ ಪ್ರದರ್ಶನಗಳ ಪ್ರಸ್ತಾಪವನ್ನು ಕವಿ ಅನೇಕ ಕಡೆಗಳಲ್ಲಿ ಮಾಡುತ್ತಾನೆ. ಇದು ಜನಪದ ಮೂಲದ **ಪ್ರದರ್ಶನ ಕಲೆ**ಯಾಗಿದ್ದು, ಪ್ರಾಚೀನ ಕಾಲದಿಂದಲೂ ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆದು ಬಂದಿದೆ. ವಡ್ಡಾರಾಧನೆ ಮುಂತಾದ ಕೃತಿಗಳಲ್ಲಿ 'ಪಗರಣದಾಟ' ಉಲ್ಲೇಖವಿದೆ. ತುಳುನಾಡಿನ ಸಾಂಸ್ಕೃತಿಕ ಕಲೆಗಳಲ್ಲಿ ವಿವಿಧ ವೇಷಗಳನ್ನು ಧರಿಸಿ ಕುಣಿಯುವ ಅಭಿನಯಿಸುವ ಸಂದರ್ಭಗಳು ಇಂದಿಗೂ ಪ್ರಚಲಿತವಿದೆ. ಅದರಲ್ಲೂ ವಿಶೇಷ ಜಾತ್ರೆ, ಉತ್ಸವ, ಧಾರ್ಮಿಕ ಮೆರವಣಿಗೆ ಮುಂತಾದ ಸಾಮಾಜಿಕ ಸಂದರ್ಭದಲ್ಲಿ ಇದನ್ನು ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಚಂದ್ರಮನು ರಥೋತ್ಸವದ ಸಂದರ್ಭದಲ್ಲಿ ಉಲ್ಲೇಖಿಸಿರುವ ಈ ವೇಷಧಾರಿಗಳ ವಿವರಗಳು ಅಧ್ಯಯನ ಯೋಗ್ಯವಾಗಿದೆ.

ಅದೇ ರೀತಿ ಸಾಂಸ್ಕೃತಿಕ ಕಲಾಪಗಳಲ್ಲಿ **ಬಾಗಿನ**ಗಳ ಉಲ್ಲೇಖ ಅನೇಕ ಕಡೆಗಳಲ್ಲಿ ಕಂಡು ಬರುತ್ತದೆ. ಅದರಲ್ಲೂ ಜೈನರ ನೋಂಪಿ ಆಚರಣೆ, ಪ್ರತಿಷ್ಠಾಪನೆ ವಿವಿಧ ಯಂತ್ರಾರಾಧನೆಗಳು. ಈ ಸಂದರ್ಭಗಳಲ್ಲಿ ಮುತ್ತೈದೆಯರಿಗೆ 'ಬಾಗಿನ' ವನ್ನು ನೀಡುತ್ತಾರೆ. ಸಾಮಾನ್ಯವಾಗಿ ಬಾಗಿನದಲ್ಲಿ ಮಂಗಳಕರ ವಸ್ತುಗಳಿರುತ್ತವೆ. ಅದರಲ್ಲೂ ವಿಶೇಷವಾಗಿ ಒಂದು ಹರಿವಾಣದಲ್ಲಿ ಬಟ್ಟೆಯ ಜೊತೆಗೆ ಹೂವು, ಹಣ್ಣು, ಎಲೆ, ಅಡಿಕೆ, ಮಡಿಲಕ್ಕಿ, ತೆಂಗಿನಕಾಯಿ, ಕಬ್ಬಿನತುಂಡು,

ಕಡಲೆ ಮುಂತಾದ ವಸ್ತುಗಳಿರುತ್ತವೆ.

ಕಡಲೆ ತೆಂಗಿನಕಾಯಿ ಕಬ್ಬಿನ ಕಂಡಿಕೆ । ಮಡಿಲಕ್ಕಿ ಬಾಳೆಯ ಹಣ್ಣು ॥

ಅಡಕೆಲೆಗಳ ತುಂಬಿ ಕನಕಭಾಜನದೊಳು । ಕೊಡಿಸಿದ ಬಾಗಿನಗಳನು ॥ ೧೭-೪೭

ಎಂದು ರಾಜನು ಮತ್ತೈದೆಯರಿಗೆ ಬಾಗಿನಗಳನ್ನು ನೀಡಿದ ವಿವರಗಳನ್ನು ಉಲ್ಲೇಖಿಸತ್ತಾನೆ.

ಇನ್ನೊಂದೆಡೆ **'ದಾನಸಾಲೆ'**ಯ ಪ್ರಸ್ತಾಪವನ್ನು ಕವಿ ಮಾಡುತ್ತಾನೆ. 'ದಾನಸಾಲೆ' ಎಂದರೆ ಸಾಮಾನ್ಯವಾಗಿ ಧರ್ಮಛತ್ರವೆಂದು ಹೇಳಬಹುದು. ಆದರೆ ಜೈನ ಸಂಪ್ರದಾಯದಲ್ಲಿ ದಾನಸಾಲೆಗೆ ವಿಶೇಷವಾದ ಅರ್ಥವು ಇದೆ. ಜೈನ ಭಟ್ಟಾರಕರು ವಾಸಿಸುವ ಮಠದ ಒಂದು ಭಾಗಕ್ಕೆ 'ದಾನಸಾಲೆ' ಎಂದು ಹೆಸರಿಸುತ್ತಾರೆ. ಇಲ್ಲಿ ಯಾತ್ರಾರ್ಥಿಗಳು ಬಂದು ವಿಶ್ರಾಂತಿ ಪಡೆಯುವುದರ ಜೊತೆಗೆ ಧಾರ್ಮಿಕ ಶಿಕ್ಷಣವನ್ನು ಪಡೆಯಲಿಚ್ಛಿಸುವ ಬ್ರಹ್ಮಚಾರಿಗಳು ಇಲ್ಲಿ ವಾಸಿಸುತ್ತಿದ್ದರು. ಅವರಿಗೆ ವಿದ್ಯಾಭ್ಯಾಸವು ಇಲ್ಲಿಯೇ ನಡೆಯುತ್ತಿತ್ತು. ಇಂಥ ದಾನಶಾಲೆಯನ್ನು ಕುರಿತು ಕವಿ

ದಾನಶಾಲೆಗಳುಳಗೊಂದೊಂದು ಸಾವಿರ। ತಾನುಂಬುದು ಭವ್ಯಸಂಘ ॥

ಯೇನೆಂಬೆನೊಂದೊಂದು ಹೊತ್ತಿಗಾ ಸಿರಿಯನು । ನಾನಾ ಪರಿಕರ ವೆರಸಿ ॥ ೧೭-೬೭

ಈ ರೀತಿ ಉಲ್ಲೇಖಿಸುತ್ತಾನೆ. ಅರಸನು ಕಟ್ಟಿಸಿದ ದಾನಸಾಲೆಯಲ್ಲಿ ಸುಮಾರು ೧೦೦೦ ಜನ ಊಟ ಮಾಡಬಹುದಾಗಿತ್ತೆಂಬುದನ್ನು ಕವಿ ನಮ್ಮ ಗಮನಕ್ಕೆ ತರುತ್ತಾನೆ.

'ಅಕ್ಷಯ ತದಿಗೆ' ಯನ್ನು ಕುರಿತು ಕವಿ ಆದಿದೇವನ ಚರಿತ್ರೆಯನ್ನು ನಿರೂಪಿಸುವಾಗ ಉಲ್ಲೇಖಿಸಿದ್ದಾನೆ. ಅಕ್ಷಯ ತದಿಗೆ ಜೈನ ಸಂಪ್ರದಾಯದಲ್ಲಿ ಈಗಲೂ ಆಚರಿಸಿಕೊಂಡು ಬಂದಿರುವ ಒಂದು ಪರ್ವವಾಗಿದೆ. ವೈಶಾಖ ಶುದ್ಧ ತೃತೀಯ ಎಂದು ಇದನ್ನು ಆಚರಿಸುತ್ತಾರೆ. ಆ ದಿನ ಹಸ್ತಿನಾಪುರದ ರಾಜನಾದ ಶ್ರೇಯಾಂಸನು ಆರು ತಿಂಗಳುಗಳ ಕಾಲ ಉಪವಾಸ ವ್ರತವನ್ನು ಕೈಗೊಂಡಿದ್ದ ವೃಷಭದೇವನಿಗೆ 'ಇಕ್ಷು ರಸ' ವನ್ನು ನೀಡಿ ಆಹಾರ ದಾನ ಮಾಡಿ ಅಕ್ಷಯ ಸುಖವನ್ನು ಪಡೆದನೆಂದು ಹೇಳಲಾಗಿದೆ. ಇದರ ಸ್ಮರಣೆಯ ರೂಪದಲ್ಲಿ ಶ್ರಾವಕರು ಈಗಲೂ ಈ ಪರ್ವವನ್ನು ಆಚರಿಸುತ್ತಾ ಬಂದಿದ್ದಾರೆ. ಚದುರ ಚಂದ್ರಮನು ಈ ಪ್ರಸಂಗವನ್ನು ಉಲ್ಲೇಖಿಸುತ್ತಾ

ಅಕ್ಷಯದಾನ ಫಲವು ನಿಮಗತ್ತಂ । ದಾಕ್ಷಿತಿಪರನು ಪರಸಲು ॥

ಅಕ್ಷಯ ತದಿಗೆಯೆಂದಂದಿಂದಾದುದು । ಯೀ ಕ್ಷಿತಿಯೊಳು ಪುಣ್ಯದಿವಸ ॥ ೮-೨೩

ಎಂದು ಅಕ್ಷಯದಾನದ ಹಿನ್ನೆಲೆಯನ್ನು ಸ್ಪಷ್ಟ ಪಡಿಸಿದ್ದಾನೆ.

ಹೀಗೆ ಚಂದ್ರಮನ ಗೊಮ್ಮಟೇಶ್ವರ ಚರಿತೆಯ ವಿವಿಧ ನೆಲೆಗಳನ್ನು ಅಧ್ಯಯನ ಮಾಡುತ್ತಾ ಹೋದಹಾಗೆ ಜೈನ ಪರಂಪರೆಯ ಅನೇಕ ಸಂಗತಿಗಳು ತೆರೆದುಕೊಳ್ಳುತ್ತಾ ಹೋಗುತ್ತದೆ. ಮೂಲತಃ ಪೌರಾಣಿಕವಾದರೂ ಅದರ

ಜೊತೆಗೆ ಭೈರರಸರ ಕಾಲದ ಚಾರಿತ್ರಿಕ ಘಟನೆಗಳನ್ನು ಸಮಾವೇಶಗೊಳಿಸಿ, ಅದರಲ್ಲಿ ಜೈನರ ಆಚರಣೆ, ನಂಬಿಕೆ, ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಮುಂತಾದ ಮಾಹಿತಿಗಳನ್ನು ನೀಡುತ್ತ ಹೋಗಿರುವುದರಿಂದ ಈ ಕೃತಿ ಸಾರ್ವಕಾಲಿಕವಾಗಿ ಉಪಯುಕ್ತವೆನಿಸಿದೆ.

ತುಳುನಾಡಿಗೆ ಜೈನರ ಒಂದು ವಿಶೇಷ ಕೊಡುಗೆಯಾಗಿ ನಿಂತಿರುವ ಚಂದ್ರಮನ ಈ ಕಾವ್ಯವೂ ಕೂಡಾ ಶಾಶ್ವತವಾಗಿ ನಿಲ್ಲುತ್ತದೆ ಎಂದು ಹೇಳಬಹುದು.

****

ಅಧ್ಯಾಯ ೬

ಅಧ್ಯಯನದ ಫಲಶ್ರುತಿ

ಚದುರ ಚಂದ್ರಮನ 'ಗೊಮ್ಮಟೇಶ್ವರ ಚರಿತೆ' ಕೇವಲ ಒಂದು ಜೈನಪುರಾಣವಷ್ಟೇ ಅಲ್ಲ. ಕಾರ್ಕಳದ ಭೈರರಸರ ಚರಿತ್ರೆಯನ್ನು ವೈಭವೀಕರಿಸುವ ಉದ್ದೇಶವೂ ಇದಕ್ಕಿಲ್ಲ. ಬದಲಾಗಿ, ವಿಜಯನಗರೋತ್ತರ ಕಾಲದ ತುಳುನಾಡಿನ ಒಟ್ಟು ರಾಜಕೀಯ, ಸಾಮಾಜಿಕ, ಧಾರ್ಮಿಕ ಜೊತೆಗೆ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ಉದ್ದೇಶ ಹೊಂದಿದೆ ಎಂದು ಇದುವರೆಗೆ ನಾವು ನಡೆಸಿರುವ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ತುಳುನಾಡಿನ ಇತಿಹಾಸದ ದೃಷ್ಟಿಯಿಂದ, ಕಾರ್ಕಳದ ಗೊಮ್ಮಟೇಶ್ವರನ ಕೆತ್ತನೆ, ಸಾಗಾಣಿಕೆ ಮತ್ತು ನಿಲ್ಲಿಸುವಿಕೆ ಒಂದು ಮಹತ್ವದ ಘಟನೆ. ಆ ಕಾಲಘಟ್ಟದಲ್ಲಿ ಇಂತಹ ಸಾಹಸಕ್ಕೆ ಕೈಯಿಕ್ಕುವುದಕ್ಕೆ 'ಎಂಟೆರ್ದೆ' ಬೇಕು. ಆದರೆ ಪಾಂಡ್ಯಪ್ಪೊಡೆಯ ಇಂಥ ಸಂಕಲ್ಪವೊಂದನ್ನು ಕೈಗೊಂಡಿರುವುದು ನಿಜಕ್ಕೂ ಸಾಹಸದ ಕೆಲಸವೇ ಆಗಿದೆ. ಬಹುಶಃ ಇದಕ್ಕೆ ಭೈರರಸರ ಪರಂಪರೆಯ ಧರ್ಮ, ನಿಷ್ಠೆ, ಕಳಕಳಿ ಮತ್ತು ಧಾರ್ಮಿಕ ಒಳ ಒತ್ತಡಗಳು ಕಾರಣವಾಗಿತ್ತೆನ್ನಬಹುದು. ಇದರಿಂದಾಗಿ ಕಾರ್ಕಳದ ಜೈನ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ದಾಖಲಿಸಬಹುದಾದ ಘಟನೆಯಾಗಿ ರೂಪುಗೊಂಡಿತು. ಈ ಅವಿಸ್ಮರಣೀಯ ಕಾರ್ಯದಿಂದ ಬಾಹುಬಲಿಯ ನಿರ್ಮಾಣವು ತುಳುನಾಡಿನ ಸಮಸ್ತ ಜನರ ಮನಸ್ಸನ್ನು ಜೈನಧರ್ಮವು ಗೆಲ್ಲುವುದಕ್ಕೆ ಕಾರಣವಾದಂತೆ. ಇದನ್ನು ನಿರ್ಮಿಸಿದ ಭೈರರಸರು, ತುಳುನಾಡಿನ ಇತಿಹಾಸದಲ್ಲಿ ಗೌರವ ಸ್ಥಾನವನ್ನು ಪಡೆದುಕೊಂಡರು.

ಪಾಂಡ್ಯಪ್ಪೊಡೆಯರಿಂದ ಗೊಮ್ಮಟೇಶ್ವರ ಜನಮಾನಸದಲ್ಲಿ ನೆಲೆಯಾದರೆ ಆ ಗೊಮ್ಮಟನಿಂದಾಗಿ ಪಾಂಡ್ಯ ರಾಜನ ಕೀರ್ತಿ ಜಗತ್ಪ್ರಸಿದ್ಧವಾಯಿತು. ಅದು ತುಳುನಾಡಿನ ಶಿಲ್ಪ ಕಲೆಗೆ ಜೈನರ ಅರ್ಥಾತ್ ಭೈರರಸರ ಅಪೂರ್ವ ಕೊಡುಗೆಯಾಗಿಯೂ ನಿಂತಿತು. ಈ ಎಲ್ಲಾ ವಿವರಗಳನ್ನು ಕಾವ್ಯಮುಖೇನ ದಾಖಲುಗೊಳಿಸಿದ ಚದುರ ಚಂದ್ರಮನ ಈ ಕಾವ್ಯವು ಜನಮನ್ನಣೆ ಪಡೆದು ಕೊಂಡಿತು.

ಕಾವ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾದರೆ ವಿಜಯನಗರ ಕಾಲದಲ್ಲಿ ಜೈನ ಸಂಸ್ಕೃತಿಯು ಗರಿಬಿಚ್ಚಿ, ತನ್ನ ಶಿಖರವನ್ನು ಮುಟ್ಟಿದರೆ, ವಿಜಯನಗರದ ಪತನಾನಂತರ ಅದು ತನ್ನ ವರ್ಚಸ್ಸನ್ನು ಕ್ಷೀಣಿಸಿಕೊಳ್ಳತೊಡಗಿತ್ತು. ತುಳುನಾಡಿನ ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಎತ್ತರದ ಸ್ತರದಲ್ಲಿ ಗೋಚರಿಸುತ್ತಿದ್ದ ಸ್ಥಳೀಯ ಚೌಟ, ಅಜಿಲ, ಸಾಮಂತ, ಭಂಗ, ಭೈರವ ಮುಂತಾದವರು ತಮ್ಮ ಶಕ್ತಿಯನ್ನು ಕಳೆದುಕೊಂಡು, ಒಂದು ರೀತಿಯ ಹತಾಶೆಗೆ ಮತ್ತು ಒಂದು ರೀತಿಯ ಸಾಮಾಜಿಕ ಪಲ್ಲಟಗಳಿಗೆ ತಮ್ಮನ್ನು ಒಡ್ಡಿಕೊಂಡಿದ್ದರು. ಇದರ ಒಂದು ನೈಜ ಚಿತ್ರಣವನ್ನು ಪ್ರಸ್ತುತ ಗೊಮ್ಮಟೇಶ್ವರ ಚರಿತೆ ಕೃತಿಯು ನಮಗೆ ನೀಡುತ್ತದೆ. ಇಮ್ಮಡಿ ಭೈರರಸನೇನೋ ಪೂಜೆ ನಿಂತು ಹೋಗಿದ್ದ ಗೊಮ್ಮಟೇಶ್ವರನಿಗೆ

ಪುನರ್ ಪ್ರತಿಷ್ಠೆ, ಮಸ್ತಕಾಭಿಷೇಕವನ್ನು ನಡೆಸಲೇನೋ ಮನಸ್ಸು ಮಾಡಿದನು. ಆದರೆ ಹಾಗೆ, ಪಾಂಡ್ಯಪ್ಪರಸನಿಂದ ನಿರ್ಮಾಣಗೊಂಡ ಗೋಮ್ಮಟೇಶ್ವರ ಪೂಜೆ, ಮಸ್ತಕಾಭಿಷೇಕಗಳು ನಿಂತು ಹೋಗಿರುವುದಕ್ಕೆ ಕಾರಣ, ಆ ಕಾಲದಲ್ಲಿ ಜೈನಧರ್ಮವು ಎದುರಿಸುತ್ತಿದ್ದ ಪಲ್ಲಟಗಳಿಗೆ ನಿದರ್ಶನವಾಗಿದೆ. ಸ್ವತಃ ಇಮ್ಮಡಿ ಭೈರರಸನಿಗೆ ತಾನು ಕೈಗೊಂಡ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಮುಗಿಸುತ್ತೇನೋ ಇಲ್ಲವೋ ಎಂಬ ಆತಂಕ ಸುಪ್ತವಾಗಿತ್ತೆಂದು ತೋರುತ್ತದೆ. ಏಕೆಂದರೆ, ಸಂಕಲ್ಪ ಮಾಡಿಕೊಂಡರೂ ಆ ಕಾರ್ಯವನ್ನು ನಿರ್ವಹಿಸುವುದಕ್ಕೆ ತಾನು ಎದುರುಗಡೆ ನಿಲ್ಲದೆ, ಮಠದ ಅದಿಪತಿಯಾದ ಲಲಿತಕೀರ್ತಿ ಭಟ್ಟಾರಕರನ್ನು ಮಂಚೂಣಿಯಲ್ಲಿ ನಿಲ್ಲಿಸುತ್ತಾನೆ. ಅವರಿಗೆ ೫೦೦ ಹೊನ್ನನ್ನು ಕೊಟ್ಟು ಆ ಕಾರ್ಯವನ್ನು ನಡೆಸುವಂತೆ ಪ್ರಾರ್ಥಿಸುತ್ತಾನೆ. ಇದರಿಂದಾಗಿ, ಭಟ್ಟಾರಕರ ನೇತೃತ್ವದಲ್ಲಿ ಈ ಕಲಾಪವು ನಡೆಯುತ್ತದೆ.

ಭಟ್ಟಾರಕರು ಮಂಚೂಣಿಯಲ್ಲಿ ನಿಂತುದರಿಂದ ಸ್ಥಳೀಯ ಚೌಟರಸರು ಭೂದಾನವನ್ನು ಮಾಡುವುದಕ್ಕೂ, ಬಂಗರು ೧೦೦ ಗದ್ಯಾಣವನ್ನು ನೀಡುವುದಕ್ಕೂ ಅಷ್ಟೇ ಅಲ್ಲದೆ, ಹಲರೈದು ಸಾವಿರ ಜನರು, ಮುಂದೆ ಬಂದು ಸಹಾಯಕ್ಕೆ ಪ್ರಾರ್ಥಿಸುವುದಕ್ಕೂ, ಸಮಾಜದ ಎಲ್ಲಾ ವರ್ಗದ ಜನರು ಬಂದು ಕೈ, ಮೈ ಸಹಾಯಕ್ಕೆ ಉತ್ಸುಕರಾಗಿ ಭಾಗವಹಿಸಿದುದು; ಇವೆಲ್ಲವೂ ಲಲಿತಕೀರ್ತಿಗಳ ನೇತೃತ್ವದಲ್ಲಿ ಈ ಧಾರ್ಮಿಕ ಕಾರ್ಯವು ನಡೆದದ್ದರಿಂದ, ಇವರೆಲ್ಲರ ಸಹಾಯವು ದೊರೆಯಲು ಕಾರಣವಾಯಿತು.

ಅಂದರೆ, ಈ ಧಾರ್ಮಿಕ ಕಾರ್ಯವು ಭೈರರಸರ ಉಪಸ್ಥಿತಿಯಲ್ಲಿ ಮಾತ್ರ ನಡೆಯುತ್ತಿರಲಿಲ್ಲ ಎನ್ನುವುದು ಭಾವಿಸಬಹುದಾಗಿದೆ. ಏಕೆಂದರೆ, ಭೈರರಸರು ಸ್ಥಳೀಯ ತುಂಡರಸರ ವೈರತ್ವವನ್ನು ರಾಜಕೀಯವಾಗಿ ಕಟ್ಟಿಕೊಂಡಿದ್ದರು. ತಮ್ಮ ರಾಜ್ಯದ ಹಿರಿತನವನ್ನು ಕಳೆದುಕೊಂಡಿದ್ದರು. ಬಹುಪಾಲು ಆದಾಯವನ್ನು ಘಟ್ಟದ ಮೇಲಿನ ಇಕ್ಕೇರಿ ಅಥವಾ ಕೆಳದಿ ಅರಸರಿಗೆ ಒಪ್ಪಿಸಿದರು. ಹೀಗಾಗಿ ಚತುರನಾದ ಇಮ್ಮಡಿ ಭೈರರಸನು ಈ ಧಾರ್ಮಿಕ ಕಾರ್ಯವನ್ನು ಮುಂದೊಡ್ಡಿ, ಜನ ಸಾಮಾನ್ಯರ ವಿಶ್ವಾಸವನ್ನು ಗಳಿಸುವುದಕ್ಕೆ ಪ್ರಯತ್ನಿಸಿದಂತೆಯೂ ಗೋಚರವಾಗುತ್ತದೆ.

ಈ ನೆಲೆಯಿಂದ ನೋಡಿದರೆ, ಗೊಮ್ಮಟೇಶ್ವರ ಚರಿತೆ ಕಾವ್ಯವು ಅಂದಿನ ಸಾಮಾಜಿಕ, ವಿವಿಧ ನೆಲೆಗಳನ್ನು ಸಮರ್ಪಕ ಹಾಗೂ ಸೂಕ್ಷ್ಮವಾಗಿ ಪರಿಚಯಿಸುತ್ತದೆ ಎನ್ನಬಹುದು.

ಅಧ್ಯಯನದ ದೃಷ್ಟಿಯಿಂದ ಕಾವ್ಯವನ್ನು ವಿವೇಚಿಸಿ, ಮೊದಲನೆಯ ಅಧ್ಯಾಯದಲ್ಲಿ ಕವಿ ಹಾಗೂ ಕಾವ್ಯದ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಜೊತೆಗೆ ಗೊಮ್ಮಟ ಮೂರ್ತಿಯ ನಿರ್ಮಾಣ ಹಾಗೂ ಆ ಮೂಲಕ ತುಳುನಾಡಿನ ಕೀರ್ತಿಗೆ ಪ್ರೇರಣೆ ನೀಡಿದ ಶಾಂತರಸರ ಕುರಿತು ಅಧ್ಯಯನ ನಡೆಸಲಾಗಿದೆ.

ಕೃತಿಯಲ್ಲಿ ಕವಿಯು ಉಲ್ಲೇಖಿಸಿದ ಧಾರ್ಮಿಕ ವಿಚಾರದ ಹಿನ್ನೆಲೆಯಲ್ಲಿ ಜೈನ ಧಾರ್ಮಿಕ, ಆಚಾರ– ವಿಚಾರ, ಆರಾಧನಾ ವಿಧಿಗಳನ್ನು ವಿಶೇಷವೂ, ಅದ್ಭುತವೂ ಎನಿಸುವ ತೀರ್ಥಂಕರರ ಪಂಚಕಲ್ಯಾಣ ವಿಧಿ ಮತ್ತು ಇನ್ನಿತರ

ವಿಷಯಗಳನ್ನು ಕುರಿತಂತೆ, ಎರಡನೇ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಮೂರನೇ ಅಧ್ಯಾಯವು ಪಾಂಡ್ಯರಸನು ಗೊಮ್ಮಟೇಶ ವಿಗ್ರಹವನ್ನು ಕೆತ್ತಿಸಲು ಕಾರಣ, ಪ್ರೇರಣೆಯನ್ನು ಕುರಿತಾದ ವಿಷಯಗಳನ್ನು ಒಳಗೊಂಡಿದೆ. ಪಾಂಡ್ಯರಸನ ಔದಾರ್ಯತೆ, ಕಲಾಸಕ್ತಿ, ಧಾರ್ಮಿಕ ಶ್ರದ್ಧೆಯನ್ನು ಜಗತ್ತಿಗೇ ಸಾರುವ ರೀತಿಯಲ್ಲಿ ಜರುಗಿನ ವಿಗ್ರಹದ ಸಾಗಾಣಿಕೆ ವಿಚಾರ ಹಾಗೂ ಆತನು ನಡೆಸಿದ ಗೊಮ್ಮಟ ಸ್ವಾಮಿಯ ಪುನರ್ ಪ್ರತಿಷ್ಠೆ, ಮಸ್ತಕಾಭಿಷೇಕದ ವೈಭವವನ್ನು ಅಧ್ಯಯನದ ಮೂಲಕ ದಾಖಲಿಸುವ ಪ್ರಯತ್ನ ಇಲ್ಲಿ ನಡೆಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಚದುರ ಚಂದ್ರಮನು ಕಾವ್ಯದಲ್ಲಿ ತಿಳಿಸಿರುವ ಕಾರ್ಕಳದ ಜೈನರ ಸಾಮಾಜಿಕ ಅಂಶಗಳನ್ನು ಗುರುತಿಸುವ ಪ್ರಯತ್ನ ನಡೆಸಲಾಗಿದೆ. ಕಾರ್ಕಳದ ವೈಶಿಷ್ಟ್ಯ, ಜೈನ ಸಂಪ್ರದಾಯಗಳನ್ನು ಚಾಚೂತಪ್ಪದೆ ಖಡ್ಡಾಯವಾಗಿ ಪಾಲಿಸುವ, ಆಚರಿಸುವ ಜನರು ಹಾಗೂ ಅಲ್ಲಿದ್ದ ವರ್ಣ ವ್ಯವಸ್ಥೆಯನ್ನು ಪ್ರಜೆಗಳ ರಕ್ಷಕನಾಗಿರುವ ರಾಜನ ಅರಮನೆ, ಒಡ್ಡೋಲಗ, ಅದರ ವೈಭವವನ್ನು ಕುರಿತು, ಒಟ್ಟೂ ಜೈನರ ಸಾಮಾಜಿಕ ವಿಚಾರಗಳನ್ನು ಕುರಿತಾಗಿ ಈ ಅಧ್ಯಯನದಲ್ಲಿ ವಿಶ್ಲೇಷಣೆ ನಡೆಸಲಾಗಿದೆ.

****

ಪರಾಮರ್ಶನ ಗ್ರಂಥಗಳು

1. ತುಳುನಾಡಿನ ಜೈನಧರ್ಮ – ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಎಸ್.ಡಿ ಶೆಟ್ಟಿ, ಉಜಿರೆ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ ಕಾಲೇಜು, ಉಡುಪಿ – 576102, 2002

2. ಕಾರ್ಕಳದ ಕವಿ ಚದುರಚಂದ್ರಮ ವಿರಚಿತ ಗೊಮ್ಮಟೇಶ್ವರ ಚರಿತೆ

3. ತೆಂಕನಾಡು, ಸಂಪಾದಕರು: ನಾರಾಯಣ ಪಿ.ಕೆ ಮತ್ತು ಕಯ್ಯಾರ ಕಿಂಞಣ್ಣ ರೈ

4. ಕರ್ನಾಟಕ ಕವಿ ಚರಿತೆ, ಸಂಪುಟ 2, ಕ.ಸಾ.ಪ. ಚಾಮರಾಜಪೇಟೆ, ಬೆಂಗಳೂರು – 18.

5. ಶ್ರುತಕೀರ್ತಿ ವಿರಚಿತ ವಿಜಯ ಕುಮಾರಿ ಚರಿತೆ, ವೈಸಿ ಭಾನುಮತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

[illegible]